

1-15, ಸೆಪ್ಟೆಂಬರ್ 2011
KARKAN/2007/20389
12-00
ಸತ್ಯಸುದ್ದಿಯ
ಪ್ರಸ್ತುತ
ಪಾಕ್ಷಿಕ
?

ಸತ್ಯಸುದ್ದಿಯ
# ಪ್ರಸ್ತುತ
ಪಾಕ್ಷಿಕ
PRASTHUTHA KANNADA FORTNIGHTLY

ಸೆಪ್ಟಂಬರ್ 1-15, 2011 ಸಂಪುಟ : 5 ಸಂಚಿಕೆ : 16 ಬೆಲೆ : 12.00 ಪುಟ : 60 ಮಂಗಳೂರು



## ಅಂತರಾಳದಲ್ಲಿ... >>

### ಅಂಕಣಗಳು


| ಅಂಕಣಗಳು | |
|---|---|
| ಮೀಟುಗೋಲು | 05 |
| ಪ್ರತಿಕ್ರಿಯೆ | 04 |
| ರಾಷ್ಟ್ರೀಯ ವಾರ್ತೆ | 56 |
| ಅಂತಾರಾಷ್ಟ್ರೀಯ | 57 |
| ಮಿನಿಕಥೆ: | 20 |
| ಸುದ್ದಿಸಮುಚ್ಚಯ | 50 |
| ಇಂಚರ | 34 |
| ಇನಿದನಿ | 36 |


### ಲೇಖನಗಳು


| ಲೇಖನಗಳು | |
|---|---|
| ಸೊಮಾಲಿಯಾ ಹಸಿವಿನ ಸಾಮ್ರಾಜ್ಯ | 12 |
| ಅಣ್ಣಾ ವರ್ಸಸ್ ಇರೋಮ್ | 17 |
| ಸಂಘರ್ಷದ ಮಧ್ಯೆ ಈದ್ ಸಂಭ್ರಮ | 22 |
| ಪ್ರಚಾರ ವಂಚಿತ ವಿಚಾರಗಳು | 28 |
| ಪಾಪ್ಯುಲರ್ ಫ್ರಂಟ್‌ನ್ನು ಗುರಿ... | 30 |


### ವಿಶೇಷ ಲೇಖನ

? ಈ ಆಂದೋಲನ ಪ್ರಶ್ನಾತೀತವಲ್ಲ 08

**ಪ್ರಧಾನ ಸಂಪಾದಕರು**
ಕೆ.ಎಂ. ಶರೀಫ್

**ಸಂಪಾದಕರು**
ಫಯಾರುಖ್ ಎನ್.

**ಸಹ ಸಂಪಾದಕರು**
ಶಬೀರ್ ಕೆ.

**ಸಂಪಾದಕ ಮಂಡಳಿ:**
ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.

**ಗ್ರಾಫಿಕ್ ಡಿಸೈನರ್**
ಎಂ. ಶಬೀರ್

**ವ್ಯವಸ್ಥಾಪಕರು**
ಅಬ್ದುಲ್ ಖಾದರ್ ಪಿ.

PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com



ಅಣ್ಣಾ ಹಝಾರೆ ನಡೆಸುತ್ತಿರುವ ಭ್ರಷ್ಟಾಚಾರ ವಿರೋಧಿ ಆಂದೋಲನ ಪ್ರಶ್ನಾತೀತವಲ್ಲ-8



ಸೊಮಾಲಿಯಾದಲ್ಲಿ ಹಸಿವು ಮುಗಿಲು ಮುಟ್ಟುತ್ತಿದೆ. ಜನರು ಹಸಿವಿನ ತೀವ್ರತೆಯಿಂದ ಸಾವನ್ನಪ್ಪುತ್ತಿದ್ದಾರೆ. -12



ಸುದ್ದಿಯಾಗದೇ ಹೋಗುವ ಅದೆಷ್ಟೋ ಕಹಿ ಸತ್ಯಗಳಿವೆ. ಅಂಥದ್ದರಲ್ಲಿ ಈ ಘಟನೆಯೂ ಒಂದು- 28



'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005'ರ ಬಗ್ಗೆ ಒಂದಷ್ಟು ಮಾಹಿತಿ- 44

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

### ಮಾಹಿತಿಯುಕ್ತ ಲೇಖನ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ಲೇಖನ ''ಮುರ್ಡೋಕ್ ಪತನ ಮಾಧ್ಯಮ ಜಗತ್ತಿಗೊಂದು ಪಾಠ'' ಮಾಹಿತಿಯುಕ್ತವಾಗಿತ್ತು.

ಸದಾ ತನ್ನ ಬ್ಲ್ಯಾಕ್ ಮೇಲ್ ವರದಿಗಳಿಂದಲೇ ಎತ್ತರಕ್ಕೆ ಬೆಳೆದ ಮುರ್ಡೋಕ್, ವಿಶ್ವದಾದ್ಯಂತ ಪ್ರಸಾರವಿದ್ದ 'ನ್ಯೂಸ್ ಆಫ್ ದಿ ವರ್ಲ್ಡ್' ಪತ್ರಿಕೆಯನ್ನು ಇದೀಗ ಮುಚ್ಚಿದ್ದಾನೆ. ವಾಸ್ತವದಲ್ಲಿ ಮುರ್ಡೋಕ್ ತಾನೇ ತೋಡಿದ ಗುಂಡಿಗೆ ಬಿದ್ದು ಒದ್ದಾಡುವಂತಹ ಪರಿಸ್ಥಿತಿ ನಿರ್ಮಿಸಿಕೊಂಡಿದ್ದಾನೆ.

ರಾಜಕಾರಣಿಗಳನ್ನು, ಅಧಿಕಾರಿಗಳನ್ನು, ಇಡೀ ಬ್ರಿಟನ್ ಸಾರ್ವಭೌಮತ್ವವನ್ನು ಅಲುಗಾಡಿಸುವಂತಹ ಮಟ್ಟಕ್ಕೆ ಬೆಳೆದಿದ್ದ ಮುರ್ಡೋಕ್, ಕೊಲ್ಲಲ್ಪಟ್ಟ ಒಬ್ಬಳು ಹೆಣ್ಣು ಮಗಳನ್ನೇ ತನ್ನ ವ್ಯಾಪಾರದ ಸರಕನ್ನಾಗಿಸಿದ್ದೇ ತಡ ಇದು ಆತನ ಪತನಕ್ಕೆ ಕಾರಣವಾಯಿತು. ಸಹಜವಾಗಿ ಜನರು ಈ ಬ್ಲ್ಯಾಕ್ ಮೇಲ್ ಪತ್ರಿಕೆಯ ವಿರುದ್ಧ ಆಕ್ರೋಶಗೊಳ್ಳುತ್ತಿದ್ದಂತೆಯೇ ಈ ಪತ್ರಿಕೆಯೂ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.

ಮುರ್ಡೋಕ್‌ನ ಈ ಪತನದಲ್ಲಿ ಮಾಧ್ಯಮ ಜಗತ್ತು ಪಾಠ ಕಲಿಯಬೇಕಾದದ್ದು ತುಂಬಾ ಇದೆ. ಈ ಭಾರತ ದೇಶದಲ್ಲಿ ಕಾರ್ಯಾಚರಿಸುತ್ತಿರುವ ಬಹುತೇಕ ಮಾಧ್ಯಮಗಳು ಪೂರ್ವಗ್ರಹ ಪೀಡಿತ ಹಾಗೂ ಕಪೋಲಕಲ್ಪಿತ ವರದಿಯನ್ನು ಪ್ರಕಟಿಸಿ ಒಂದು ವರ್ಗದ ತೇಜೋವಧೆಯನ್ನು ಮಾಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಮುರ್ಡೋಕ್‌ನ ಪತ್ರಿಕೆಯ ವಿರುದ್ಧ ಜನ ಆಕ್ರೋಶಗೊಂಡಂತೆ ಈ ದೇಶದಲ್ಲಿಯೂ ಕೂಡ ಅಂತಹ ಪೂರ್ವಗ್ರಹ ಪೀಡಿತ ಪತ್ರಿಕೆಗಳ ವಿರುದ್ಧ ಜನ ತಿರುಗಿ ಬೀಳುವುದರಲ್ಲಿ ಸಂಶಯವಿಲ್ಲ.

ಶೌಕತ್ ಅಲಿ, ಸುರತ್ಕಲ್

### ಹೃದಯಸ್ಪರ್ಶಿ ಮುಖಪುಟ

'ಪ್ರಸ್ತುತ' ವಿಶೇಷಾಂಕವು ಬಹಳ ಚೆನ್ನಾಗಿ ಮೂಡಿ ಬಂದಿದೆ. ಫ್ರೀಡಂ-ರಂಝಾನ್ ವಿಶೇಷಾಂಕ ಮುಖಪುಟ ವಿನ್ಯಾಸವು ಹೃದಯ ಸ್ಪರ್ಶಿಯಾಗಿತ್ತು.




ಅಂತರಾಳದಲ್ಲಿ ಪ್ರಕಟವಾಗಿದ್ದ 'ಮ್ಯಾಗ್ನ ಕಾರ್ಟ ದುರಂತ, ತಲೆತೆಗೆವ ನಾಯಕರ ನಡುವೆ ಎಲ್ಲಿ ಹೋದರು ನಮ್ಮ ತಲೆ ಕಾಯುವ ನಾಯಕರು', 'ಶಾಲಾ ಮಕ್ಕಳಿಗೆ ಭಗವದ್ಗೀತೆಯ ಕಸರತ್ತು', 'ಶೋಷಿತ ವರ್ಗಗಳ ರಾಜಕೀಯ ದುಸ್ಥಿತಿ', ಲೇಖನಗಳು ಗಮನ ಸೆಳೆದವು. ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ವಿಷಯಗಳು ಮಾಹಿತಿಯುಕ್ತವಾಗಿರುತ್ತದೆ. ಮತ್ತು ಪ್ರಚಲಿತ ವಿದ್ಯಾಮಾನಗಳ ಬಗ್ಗೆ ಬೆಳಕು ಚೆಲ್ಲುವಂತಿದೆ.

ಪ್ರಸ್ತುತ ಪಾಕ್ಷಿಕವು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ. ಲೇಖಕರಿಗೆ ಅಭಿನಂದನೆಗಳು.

ಸಿನಾನ್, ಬಂದರ್

**ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ. ಕಚೇರಿ ವಿಳಾಸ ಇಂತಿದೆ.**

ಪ್ರಸ್ತುತ ಪಾಕ್ಷಿಕ
ಡಿ.ನಂ.10-23-1009(1)
ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ
ಯತೀಮ್ ಖಾನಾ ಹಾಲ್ ಬಳಿ, ಬಂದರ್
ಮಂಗಳೂರು-1
**ಈ ಮೇಲ್ ವಿಳಾಸ:**
prasthutha2007@gmail.com

### ಸಮಸ್ಯೆಯ ವಿರುದ್ಧ ಹೋರಾಡೋಣ

ಭ್ರಷ್ಟಾಚಾರವು ಇಂದು ಸರ್ವ ವ್ಯಾಪಿಯಾಗಿದೆ. ಎಲ್ಲೆಂದರಲ್ಲಿ ಭ್ರಷ್ಟಾಚಾರವು ಹೊಗೆಯಾಡುತ್ತಿದೆ. ಇದರಿಂದಾಗಿ ಜನಸಾಮಾನ್ಯರು ತೀವ್ರ ಯಾತನೆ ಅನುಭವಿಸುವಂತಾಗಿದೆ.

ಇವತ್ತು ಕೇವಲ ಒಂದು ಜಾತಿ ಪ್ರಮಾಣ ಪತ್ರ ಪಡೆಯಬೇಕಾದರೂ 2 ತಿಂಗಳ ಕಾಲ ಕಾಯಬೇಕಾಗುತ್ತದೆ. ಮಾತ್ರವಲ್ಲ ಕಚೇರಿಯಿಂದ ಕಚೇರಿಗೆ ಅಲೆದು ಸಮಯವನ್ನು ಕಳೆಯುವ ಪರಿಸ್ಥಿತಿ ಜನಸಾಮಾನ್ಯರದ್ದಾಗಿದೆ. ಬಹುಶಃ ಲಂಚ ಕೊಟ್ಟರೆ ತಮ್ಮ ಕೆಲಸ ಅತಿ ಶೀಘ್ರವಾಗಿ ಅಧಿಕಾರಿಗಳು ಮಾಡಿಕೊಡುವರೇನೋ?

ತ್ವರಿತವಾಗಿ ಅಗತ್ಯ ಪ್ರಮಾಣ ಪತ್ರಗಳು ಕೈಗೆಟುಕುವಂತಾಗಲು ಈ ಸಮಸ್ಯೆಯ ವಿರುದ್ಧ ಜನಸಾಮಾನ್ಯರು ಹೋರಾಟ ನಡೆಸಬೇಕಾಗಿದೆ.

ಹೈದರ್, ಅಡೆಕ್ಕಲ್

# ಜನಾಂದೋಲನದ ವೈಫಲ್ಯಕ್ಕೆ ಕಾರಣರಾರು?

ದೇಶದಲ್ಲಿ ಭ್ರಷ್ಟಾಚಾರ ಮತ್ತೆ ಸುದ್ದಿಯಲ್ಲಿದೆ. ಭ್ರಷ್ಟಾಚಾರದ ವಿರುದ್ಧ ಎಷ್ಟೇ ದೊಡ್ಡ ಜನಾಂದೋಲನ ನಡೆದರೂ ಅದು ಕೆಲವೇ ದಿನಗಳಲ್ಲಿ ವಿಫಲಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಮೊನ್ನೆ ಅಣ್ಣಾ ಹಝಾರೆಯ ಹೋರಾಟಕ್ಕೆ ಭಾರೀ ಜನಬೆಂಬಲ ದೊರೆತಾಗ ಕೆಲವರು ಇಂಥದ್ದೇ ಮಾತುಗಳನ್ನು ಆಡಿದ್ದರು- ''ಇದು ಒಂದೆರಡು ದಿನ ಮಾತ್ರ, ಮತ್ತೆ ಅವರವರು ಅವರವರ ಮನೆಗೆ ಹೋಗುತ್ತಾರೆ''. ಜನಾಂದೋಲನದ ಬಗ್ಗೆ ಇಂಥದ್ದೊಂದು ಜನಾಭಿಪ್ರಾಯ ಸೃಷ್ಟಿಯಾಗಿದೆ ಎಂದಾದರೆ ದೇಶದಲ್ಲಿ ಭ್ರಷ್ಟಾಚಾರದ ವಿರುದ್ಧದ ಜನಾಂದೋಲನ ಮತ್ತೆ ಮತ್ತೆ ಸೋಲುತ್ತಿದೆ ಎಂದರ್ಥ.

ಸದ್ಯ ನಾವು ಅವಲೋಕನ ನಡೆಸಬೇಕಾಗಿರುವುದು ಜನಸಾಮ್ಯಾನರ ಬದುಕನ್ನು ಹಿಂಡಿಹಿಪ್ಪೆ ಮಾಡುತ್ತಿರುವ ಭ್ರಷ್ಟಾಚಾರದ ವಿರುದ್ಧದ ಆಂದೋಲನವು ಯಾಕೆ ಸೋಲನುಭವಿಸುತ್ತಿದೆ ಎಂಬುದರ ಬಗ್ಗೆ. ಈಜಿಪ್ಟ್‌ನ ತಹ್ರೀರ್ ಚೌಕ್‌ನಲ್ಲಿ ಏಕಾಏಕೀ ಜನಸಾಗರ ಬಂದು ಸೇರಿರಲಿಲ್ಲ. ಹುಸ್ನಿ ಮುಬಾರಕ್ ಎಂಬ ಸರ್ವಾಧಿಕಾರಿಯ ವಿರುದ್ಧ ಆರಂಭದಲ್ಲಿ ದನಿಯೆತ್ತಿದ್ದು ಮಾಧ್ಯಮದಲ್ಲಿ ಪ್ರಚಾರವನ್ನೇ ಪಡೆಯದಿದ್ದ, ಜನಪ್ರಿಯವಲ್ಲದ ಓರ್ವ ಯುವತಿ. ಅನಂತರ ಆಕೆಯ ಪ್ರತಿಭಟನೆಗೆ ದನಿಗೂಡಿಸಿದ್ದು ಆ ನಾಡಿನ ಸಂತ್ರಸ್ತರು ಮತ್ತು ನ್ಯಾಯವನ್ನು ಆಗ್ರಹಿಸಿದ ಪ್ರಾಮಾಣಿಕರು. ಈ ಕಾರಣಕ್ಕಾಗಿಯೇ ಜಾಗತಿಕವಾಗಿ ತಹ್ರೀರ್ ಚೌಕ್ ಮಹಾಕ್ರಾಂತಿಯಾಗಿ ಮಾರ್ಪಟ್ಟು ಮುಬಾರಕ್‌ನ ಸರ್ವಾಧಿಪತ್ಯ ಕೊನೆಗೊಂಡಿತು.

ಹೀಗೆ ನೋಡಿದರೆ ಭಾರತದಲ್ಲಿರುವುದು ಓರ್ವ ಮುಬಾರಕ್ ಆಗಲೀ, ಬೆನ್ ಅಲಿ ಆಗಲೀ ಅಲ್ಲ. ಅಂತಹ ಮುಖವಾಡ ಧರಿಸಿದವರು ಹಲವಾರು ಮಂದಿ ಇದ್ದಾರೆ. ಅವರು ಪ್ರಭುತ್ವ ನಡೆಸುತ್ತಿರುವವರ ಸಾಲಿನಲ್ಲೂ ಇದ್ದಾರೆ, ಪ್ರಭುತ್ವದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವವರ ಸಾಲಿನಲ್ಲೂ ಇದ್ದಾರೆ.

ಜನಲೋಕಪಾಲ್ ಮಸೂದೆಯ ಜಾರಿ ಬೇಕೇ ಬೇಡವೇ ಎಂಬುದು ಚರ್ಚೆಯ ವಿಚಾರ. ಆದರೆ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆಂದು ಧರಣಿ ಕುಳಿತ ಅಣ್ಣಾ ಹಝಾರೆಯ ಪ್ರತಿಭಟನೆಯನ್ನು ಪೊಲೀಸ್ ಬಲದ ಮೂಲಕ ಹತ್ತಿಕ್ಕಿದ ಕೇಂದ್ರ ಸರಕಾರದ ಕ್ರಮ ಅತ್ಯಂತ ಖಂಡನೀಯ. ಇದರ ವಿರುದ್ಧ ಜನರು ಸಂಘಟಿತರಾಗಿ ಬೀದಿಗಿಳಿದು ಹೋರಾಟ ನಡೆಸಿದರು. ಹೋರಾಟವು ಬೃಹತ್ ಜನಾಂದೋಲನವಾಗಿ ಮಾರ್ಪಡುವ ವೇಳೆಗೆ ಆಂದೋಲನದಲ್ಲಿ ನಟರು, ಖಳನಾಯಕರು ಸೇರಿಕೊಂಡು ಆಂದೋಲನದ ಹಾದಿತಪ್ಪಿಸಿದರು.

ಅಣ್ಣಾ ಹಝಾರೆಯ ಭ್ರಷ್ಟಾಚಾರದ ವಿರುದ್ಧದ ಆಂದೋಲನಕ್ಕೆ ಬಿಜೆಪಿ, ಸಂಘಪರಿವಾರ ಸಾಥ್ ನೀಡಿ ಅಲ್ಲಲ್ಲಿ ಪ್ರತಿಭಟನೆ ನಡೆಸುವ ಮೂಲಕ ಹಝಾರೆಯ ಹೋರಾಟಕ್ಕೆ ಸೋಲುಣಿಸಿದರು. ಅಣ್ಣಾ ಹಝಾರೆ ಫ್ಯಾಷಿಸಂನ ಸೂಕ್ಷ್ಮ ಕರಾಳ ಹಸ್ತವನ್ನು ಅರಿತುಕೊಳ್ಳುವಷ್ಟು ಪ್ರಬುದ್ಧರಲ್ಲ. ಆದರೆ ತನ್ನನ್ನು ಹೈಜಾಕ್ ಮಾಡಲು ಸಂಘಪರಿವಾರ ಹೊಂಚುಹಾಕಿ ಕುಳಿತುಕೊಂಡಿದೆ ಎಂಬುದರ ಸೂಚನೆ ಹಝಾರೆಗೆ ದೊರೆತಿದೆ. ಈ ಕಾರಣಕ್ಕಾಗಿಯೇ ಅವರು ಸಂಘಪರಿವಾರ, ಬಿಜೆಪಿಯೊಂದಿಗೆ ತಾನು ಸಖ್ಯ ಹೊಂದಿಲ್ಲ, ತನ್ನನ್ನು ಅವರೊಂದಿಗೆ ಸೇರಿಸುವ ಮೂಲಕ ತೇಜೋವಧೆ ಮಾಡುವ ಪ್ರಯತ್ನ ನಡೆದಿದೆ ಎಂದು ಪ್ರತಿಕ್ರಿಯಿಸಿದ್ದರು.

ಭ್ರಷ್ಟಾಚಾರದ ವಿರುದ್ಧದ ಆಂದೋಲನದಲ್ಲಿ ಭ್ರಷ್ಟಾಚಾರಿಗಳು ನುಸುಳಿಕೊಳ್ಳದಂತೆ ನೋಡಿಕೊಳ್ಳುವುದು ಹಝಾರೆ ಮತ್ತು ತಂಡದಿಂದ ಸಾಧ್ಯವಾಗುತ್ತಿಲ್ಲ. ದೇಶದ ಭ್ರಷ್ಟಾಚಾರದಲ್ಲಿ ನಂಬರ್ ವನ್ ಸ್ಥಾನದಲ್ಲಿರುವ ಕರ್ನಾಟಕದಲ್ಲೇ ಬಿಜೆಪಿ ಕಾರ್ಯಕರ್ತರು, ಎಬಿವಿಪಿ ಸಂಘಟನೆಯವರು ಸಕ್ರಿಯವಾಗಿ ಆಂದೋಲನದಲ್ಲಿ ಪಾಲ್ಗೊಂಡಿದ್ದಾರೆ. ಈ ರಾಜ್ಯದ 1,75,000 ಎಕರೆ ಭೂಮಿಯನ್ನು ಲ್ಯಾಂಡ್ ಬ್ಯಾಂಕ್‌ನಲ್ಲಿಟ್ಟು ಜಾಗತಿಕ ಕೃಷಿ ಹೂಡಿಕೆದಾರರ ಸಮ್ಮೇಳನಕ್ಕೆ ಮೀಸಲಿಟ್ಟಿರುವುದು ಕರ್ನಾಟಕದ ಬಿಜೆಪಿ ಸರಕಾರ. ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿ ಜೈಲುಪಾಲಾಗಲು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕ್ಷಣಗಣನೆ ಎದುರಿಸುತ್ತಿದ್ದಾರೆ. ಇವರು ಮತ್ತು ಇವರ ಪರಿವಾರದವರು ಆಂದೋಲನದಲ್ಲಿ ಪಾಲ್ಗೊಂಡ ಕಾರಣಕ್ಕೆ ಇಂದು ಅಣ್ಣಾ ಹಝಾರೆಯ ಹೋರಾಟವು ವಿಫಲಗೊಳ್ಳುತ್ತಿದೆ.

ಸಂಘಪರಿವಾರದಿಂದ ಮುಕ್ತವಾದ ಸಾಮಾಜಿಕ ಆಂದೋಲನ ಮಾತ್ರ ಈ ದೇಶದಲ್ಲಿ ಯಶಸ್ವಿಯಾಗಲು ಸಾಧ್ಯ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

## ಭಯೋತ್ಪಾದನೆ, ಕೋಮುವಾದದ ವಿರುದ್ಧ ವಿದ್ಯಾರ್ಥಿ ಸಮೂಹ ಹೋರಾಟ ನಡೆಸಲಿ

ಅಣ್ಣಾ ಹಝಾರೆಯ ಭ್ರಷ್ಟಾಚಾರ ವಿರೋಧಿ ಹೋರಾಟ ಎಷ್ಟು ಪಾರದರ್ಶಕ ಅನ್ನುವುದಕ್ಕಿಂತಲೂ ಮೊದಲು ಈ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ತೊಲಗಿಸಲೇಬೇಕು ಎಂಬ ನಿಟ್ಟಿನಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ದಿನದಿಂದ ದಿನಕ್ಕೆ ಬೆಂಬಲ ಹೆಚ್ಚುತ್ತಲೇ ಇದೆ.

ಆದರೆ ಈ ನಾಗರಿಕ ಸಮಾಜದ ಹೋರಾಟದಲ್ಲಿ ದುಷ್ಟಶಕ್ತಿಗಳ ನುಸುಳಿವಿಕೆಯು ತುಂಬಾ ಅಪಾಯಕಾರಿಯಾಗಿದೆ. ಅಣ್ಣಾ ಹಝಾರೆಗೆ ವಿದ್ಯಾರ್ಥಿ ಸಮೂಹ ತರಗತಿ ಬಹಿಷ್ಕರಿಸಿ ಬೆಂಬಲ ನೀಡಿದರು. ಇದರ ಮಧ್ಯೆಯೇ ಸಂಘಪರಿವಾರದ ವಿದ್ಯಾರ್ಥಿ ಅಂಗವಾಗಿರುವ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಈ ಹೋರಾಟದಲ್ಲಿ ತನ್ನ ಧ್ವಜವನ್ನು ಹಾರಾಡಿಸುತ್ತಿದೆ. ಬಹುತೇಕ ವಿದ್ಯಾರ್ಥಿಗಳು ಕೋಮುವಾದಿ ಅಜೆಂಡಾವನ್ನು ಹೊಂದಿರುವ ಎಬಿವಿಪಿಯನ್ನು ಬೆಂಬಲಿಸುತ್ತಿಲ್ಲ. ಈ ಹೋರಾಟದಲ್ಲಿಯೂ ಅಷ್ಟೇ, ವಿದ್ಯಾರ್ಥಿಗಳು ತಮ್ಮ ಸ್ವಇಚ್ಛೆಯಿಂದ ಪಾಲ್ಗೊಂಡಿದ್ದಾರೆ ವಿನಃ ಎಬಿವಿಪಿ ನಾಯಕತ್ವದಲ್ಲಿ ಅಲ್ಲ.

ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಯುವ ಸಮೂಹವು ಪಾಲ್ಗೊಂಡಿರುವುದು ಒಳ್ಳೆಯ ಬೆಳವಣಿಗೆ. ಇದರ ಜೊತೆಗೆ ಈ ದೇಶದಲ್ಲಿ ಶಾಂತಿಗೆ ಮಾರಕವಾಗಿರುವ ಹಿಂದುತ್ವ ಭಯೋತ್ಪಾದನೆ, ಕೋಮುವಾದದ ವಿರುದ್ಧವೂ ವಿದ್ಯಾರ್ಥಿಗಳು ಹೋರಾಟ ನಡೆಸಬೇಕು.

ರಾಜೇಶ್, ಉಡುಪಿ

## ಬಿಜೆಪಿ ಹೈಕಮಾಂಡ್: ಆಟಕ್ಕುಂಟು ಲೆಕ್ಕಕ್ಕಿಲ್ಲ

ಮುಖ್ಯಮಂತ್ರಿ ಸ್ಥಾನ ಏರಿದ ಮೇಲೆ ಯಡಿಯೂರಪ್ಪ ಈ ರಾಜ್ಯದ ಅಭಿವೃದ್ಧಿ ಮಾಡಿದ್ದಕ್ಕಿಂತ ತನ್ನ ಸ್ವಾರ್ಥ ಸಾಧನೆ ಮಾಡಿಕೊಂಡದ್ದೇ ಹೆಚ್ಚು. ರಾಜ್ಯದ ಅಪಾರ ಸಂಪತ್ತನ್ನು ಯಡಿಯೂರಪ್ಪ ತನ್ನ ಹಾಗೂ ತನ್ನ ಕುಟುಂಬದ ಹೆಸರಿಗೆ ಮಾಡಿಕೊಂಡರೆಂಬ ಅಂಶವು ಯಡಿಯೂರಪ್ಪರ ಕುರ್ಚಿಯನ್ನೇ ಅಲುಗಾಡಿಸಿತು.

ಬಿಜೆಪಿಯಲ್ಲಿದ್ದ ಭಿನ್ನಮತವು ಯಡಿಯೂರಪ್ಪರನ್ನು ಅಧಿಕಾರದಿಂದ ಕೆಳಗಿಳಿಸಲು ಸಾಧ್ಯವಾಗಿರಲಿಲ್ಲ. ಬದಲಾಗಿ ಯಡಿಯೂರಪ್ಪ ತಾನು ಮಾಡಿದ ಭ್ರಷ್ಟಾಚಾರವೇ ಅವರನ್ನು ಬಲಿ ತೆಗೆದುಕೊಂಡಿತು. ಈಗಾಗಲೇ ಹೈಕಮಾಂಡ್‌ನ ಆದೇಶಗಳಿಗೂ ಕ್ಯಾರೇ ಅನ್ನದೇ ''ಬಿಜೆಪಿ ಎಂದರೆ ತಾನು, ತಾನೆಂದರೆ ಬಿಜೆಪಿ'' ಎನ್ನುತ್ತಾ ಯಡಿಯೂರಪ್ಪ ತನ್ನ ಬೆಂಬಲಿತ ಅಭ್ಯರ್ಥಿ ಡಿ.ವಿ.ಸದಾನಂದ ಗೌಡರನ್ನು ಮುಖ್ಯಮಂತ್ರಿ ಗಾದಿಗೇರಿಸಿದ್ದಾರೆ.

ಅಂತೂ ಯಡಿಯೂರಪ್ಪರ ರಾಜೀನಾಮೆ ಪ್ರಹಸನವು ಜನರಿಗೆ ಮನೋರಂಜನೆಯನ್ನು ನೀಡುವುದರೊಂದಿಗೆ ಬಿಜೆಪಿಯ ಹೈಕಮಾಂಡ್ ಕೂಡ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬುದು ಬಹಿರಂಗವಾಯಿತು.



ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

## ಫ್ರೀಡಂ ಪರೇಡ್‌ಗೆ ಅನುಮತಿ ನಿರಾಕರಣೆ ಏಕೆ?

ಭಾರತದಲ್ಲಿ ಸ್ವಾತಂತ್ರ್ಯವೆನ್ನುವುದು ಮರಿಚೀಕೆಯಾಗಿದೆಯೇ? ಈ ಸಂದೇಹ ಏಕೆ ಬಂತೆಂದರೆ ಆಗಸ್ಟ್ 15ರಂದು ಪುತ್ತೂರಿನಲ್ಲಿ ಆಯೋಜಿಸಲಾಗಿದ್ದ ಫ್ರೀಡಂ ಪರೇಡ್‌ಗೆ ಅನುಮತಿ ನಿರಾಕರಿಸಲಾಗಿದೆ. ಇದು ಭಾರತೀಯರಿಗೆ ನಾಚಿಗೇಡಿನ ವಿಷಯವಾಗಿದೆ.

ಯಾವುದೇ ಅನುಮತಿ ಪಡೆಯದೆ ಸಂವಿಧಾನ ಬಾಹಿರವಾಗಿ ಆಗಸ್ಟ್ 14ರಂದು ಮಧ್ಯರಾತ್ರಿ ಆಶಿಸ್ತಿನಿಂದ ವರ್ತಿಸುತ್ತಾ, ತ್ರಿವರ್ಣ ಧ್ವಜಕ್ಕೆ ಅವಮಾನ ಮಾಡುವಾಗ ಬಿಜೆಪಿ ಸರಕಾರದಿಂದ ಯಾವುದೇ ಅಡ್ಡಿ ಇರುವುದಿಲ್ಲ. ಸಂವಿಧಾನಬದ್ಧ ಸ್ವಾತಂತ್ರ್ಯೋತ್ಸವ ಆಚರಣೆಗೆ ಮಾತ್ರ ಬಿಜೆಪಿ ಸರಕಾರ ಅನುಮತಿ ನೀಡುತ್ತಿಲ್ಲ.

ರಾಷ್ಟ್ರೀಯ ಹಬ್ಬವನ್ನು ಆಚರಿಸಲು ಯಾವುದೇ ರೀತಿಯ ಅನುಮತಿ ಬೇಕಾಗಿಲ್ಲ. ಅನುಮತಿ ಕೇಳಬೇಕೆಂಬುದು ಒಂದು ಅಭಾಸವೆನ್ನುವಂತಿದೆ. ದೇಶದ ಬದಲಾವಣೆಗೆ ಪಣತೊಟ್ಟು ಶೋಷಿತ, ದಮನಿತ, ದಲಿತರ ಪರವಾಗಿ ನಿಂತಿರುವ ಪಾಪ್ಯುಲರ್ ಫ್ರಂಟ್ ಸ್ವಾತಂತ್ರ್ಯೋತ್ಸವ ಆಚರಿಸುವುದನ್ನು ನೋಡಲು ಬಿಜೆಪಿ ಸರಕಾರಕ್ಕೆ ನಾಚಿಕೆಯೊಂದಿಗೆ ಹೆದರಿಕೆಯೂ ಆಗುತ್ತಿರಬೇಕು.

ಕೊನೆಯದಾಗಿ, ಪವಿತ್ರ ರಮಝಾನ್ ತಿಂಗಳಲ್ಲಿ ಉಪವಾಸ ವ್ರತ ಕೈಗೊಂಡು ಫ್ರೀಡಂ ಪರೇಡ್‌ಗೆ ಶ್ರಮ ಪಟ್ಟ ಸಹೋದರರಿಗೆ ಹ್ಯಾಟ್ಸ್‌ಅಪ್.

ಝುರೀನಾ, ಶಿರ್ಲಾಲ್

## ವಿಮರ್ಶೆ-ಪ್ರಶಂಸೆ

'ಪ್ರಸ್ತುತ' ಫ್ರೀಡಂ, ರಂಝಾನ್ ವಿಶೇಷಾಂಕವು ನಿರೀಕ್ಷಿಸಿದಷ್ಟು ವಿಶೇಷವಾಗಿರಲಿಲ್ಲ. ಸ್ವಾತಂತ್ರ್ಯೋತ್ಸವಕ್ಕೆ ಸಂಬಂಧಿಸಿದ ವಿಶೇಷವಾದ ಉತ್ತಮ ಲೇಖನಗಳ ಕೊರತೆ ಎದ್ದು ಕಾಣುತ್ತಿತ್ತು.

ಸಂಪಾದಕೀಯವು ಸ್ವಾತಂತ್ರ್ಯೋತ್ಸವದ ಸಲುವಾಗಿ ದೇಶದ ಪ್ರಸಕ್ತ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ವಿವರಿಸಬಹುದಿತ್ತು. ಆದರೂ ಓದುಗನೊಂದಿಗೆ ಆತ್ಮೀಯ ಸಂಭಾಷಣೆ ನಡೆಸಿದ ಸಂಪಾದಕೀಯವು ಪತ್ರಿಕೆಗೆ ಓದುಗನ ಮೇಲಿನ ಕಾಳಜಿಯನ್ನು ಸೂಚಿಸುತ್ತಿತ್ತು.

ಕೆ.ಎಂ.ಶರೀಫ್‌ರವರ ಮುರ್ಡೋಕ್‌ರ ಬಗೆಗಿನ ಲೇಖನವು ಮಾಧ್ಯಮ ಲೋಕಕ್ಕೆ ಮುಂದೆ ಬಂದೊದಗಬಹುದಾದ ಆಪತ್ತಿನ ಬಗ್ಗೆ ಓದುಗರನ್ನು ಎಚ್ಚರಿಸಿದೆ. ಕೆ.ವೈ.ಯವರ ಮಿನಿ(ಧೀರ್ಘ)ಕತೆಯು ಹಾಸ್ಯದಿಂದ ಕೂಡಿ ಸೊಗಸಾಗಿತ್ತು. ಅದೇ ರೀತಿ ಕೃಷ್ಣಮೂರ್ತಿ ಹೆಬ್ಬಾರ್‌ರವರ ಲೇಖನವು ಚಿಂತನೆಗೆಡೆ ಮಾಡಿದೆ. ಅಲ್ತಾಫ್ ಬಿಳಗುಳರವರ ಲೇಖನವು ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ಹಾಗೂ ಹೋರಾಟ ಮನೋಭಾವ ಮೂಡಿಸಿದೆ. ಫಾತಿಮಾ ನಸ್ರೀನ್‌ರವರ ಅಂಕಣ ಇಲ್ಲದಿದ್ದುದು ಬೇಸರ ತಂದಿತ್ತು.

ಕಥೆಗಾರರಿಗೆ, ಲೇಖಕರಿಗೆ ಹಾಗೂ ಪ್ರಸ್ತುತ ಬಳಗಕ್ಕೆ ಅಭಿನಂದನೆಗಳು.

ಅಬ್ದುಲ್ ಜಲೀಲ್ ನಂದಾವರ
ಎಸ್‌ಡಿಎಂ ಲಾ ಕಾಲೇಜು, ಮಂಗಳೂರು

## ಮಾಧ್ಯಮ ಜಗತ್ತಿನ ಚಿತ್ರಣ ಬಯಲು ಮಾಡಿದ ಲೇಖನ

'ಮುರ್ಡೋಕ್‌ನ ಪತನ: ಮಾಧ್ಯಮ ಜಗತ್ತಿಗೊಂದು ಪಾಠ' ಲೇಖನವು ಇಡೀ ಮಾಧ್ಯಮ ಜಗತ್ತಿನ ಚಿತ್ರಣವನ್ನು ತೆರೆದಿಟ್ಟಿದೆ. ಮುರ್ಡೋಕ್‌ನ ಪತನವು ಬಂಡವಾಳಶಾಹಿಗಳ ಪರವಾಗಿ, ಆಡಳಿತಗಾರರ ಪರವಾಗಿ, ಕೋಮುವಾದಿಗಳ ಪರವಾಗಿ ಕಾರ್ಯಾಚರಿಸುತ್ತಿರುವ ಪತ್ರಿಕೆಗಳಿಗೆ ಇದೊಂದು ಎಚ್ಚರಿಕೆಯ ಕರೆಗಂಟೆಯಾಗಿದೆ.

ಸುಮಾರು 168 ವರ್ಷಗಳ ಇತಿಹಾಸವಿದ್ದ ಅದೇ ರೀತಿ 28 ಲಕ್ಷ ಪ್ರಸಾರವಿದ್ದ ಅಂತಾರಾಷ್ಟ್ರೀಯ ಪತ್ರಿಕೆಯೊಂದು ಮುಚ್ಚಿ ಹೋಗಿದೆ ಎಂದರೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲೇಬೇಕಾಗಿದೆ. ಒಂದರ್ಥದಲ್ಲಿ ಜನಾಂದೋಲನಕ್ಕೆ ಈ ಪತ್ರಿಕೆ ಮಣಿದಿದೆ ಎನ್ನಬಹುದು.

ಸಾಮಾಜದ ಅಂಕುಡೊಂಕುಗಳನ್ನು ತಿದ್ದಿ, ಬುದ್ದಿ ಹೇಳಬೇಕಾದ ಪತ್ರಿಕಾ ಮಾಧ್ಯಮಗಳು, ಧರ್ಮ ಧರ್ಮಗಳ ನಡುವೆ ಕಲಹ ಉಂಟು ಮಾಡಿ ಸಮಾಜದಲ್ಲಿ ಅಶಾಂತಿಯ ವಾತಾವರಣವನ್ನು ಉಂಟು ಮಾಡುತ್ತಾ, ಪತ್ರಿಕಾ ರಂಗವನ್ನು ಉದ್ಯಮವನ್ನಾಗಿ ಮಾರ್ಪಡಿಸಿಕೊಂಡರೆ ಏನಾದೀತು? ಎಂಬ ಪ್ರಶ್ನೆಗೆ ಮುರ್ಡೋಕ್ ಇಲ್ಲಿ ಉತ್ತರವಾಗಿ ಕಾಣಿಸಿಕೊಳ್ಳುತ್ತಿದ್ದಾನೆ.

ಮುಫ್ಸಿನ್, ಉಡುಪಿ

## ರಮದಾನ್ ನಂತರ...

ಕಳೆದು ಹೋದ ಕೊಳೆಯು
ಮರುಕಳಿಸದಿರಲಿ
ರಮದಾನಿನ ನಿಶೆಯ ತೌಬಾದಲಿ
ಮಿಂದು ಪಾವನಗೊಂಡ ತನುವ
ಪುನಃ ತಳ್ಳದಿರು ಪಾಪದ ಕೂಪದಿ

ಮರುಳಾಗದಿರು ಆಮಿಷಕೆ
ಧೃತಿಗೆಡದಿರು ಅರಿಯ ಹೂಂಕಾರಕೆ
ಶಪಥಗೈದಿಹ ಸೈತಾನನೆಂದ
ಕುಲಗೆಡಿಸುವೆ ಆದಮನ ಸಂತತಿಯ

ಕರುನಾಳು ಒಡೆಯ ಕೃಪೆ ಬೀರಿದ
ನೈಜ ದಾಸರ ಮೇಲೆ
ಫಲಿಸದು ಪಿಶಾಚಿಯ ಪೀಡೆ
ತವಕವಿರಲಿ ಸೇರಲು
ನೈಜದಾಸರ ಪಂಕ್ತಿಯಲಿ

ಇಹವೊಂದು ಜೈಲಂತೆ
ಪರವೊಂದೆ ಖರೆಯಂತೆ
ಇಹಪರದ ಪರಕು ತಿಳಿಯದ
ಮನುಜ ಮತಿಗೇಡಿಯಂತೆ

ಹಸಿವು ದಾಹ ಕಾಮನೆಗಳ ಹತ್ತಿಕ್ಕಿ
ಮಾಸಾಚರಣೆಯ ವ್ರತಗೈದು
ದೇವಸಂಪ್ರೀತಿಯಗಳಿಸಲು
ಹಾತೊರೆದ ವಿಶ್ವಾಸಿಗಿದೋ
ಈದುಲ್ ಫಿತ್ರ್ ಸಂಭ್ರಮ!

ಸ್ವೀಕರಿಸು ನಮ್ಮಯ ಸುಕೃತಿಗಳ
ಮನ್ನಿಸು ಕಿರು,ಭಾರಿ ಪಾಪಗಳ
ಸೇರಿಸು ನಿನ್ನ ಸಂಪ್ರೀತರ ಸಾಲಲಿ
ಕರುಣಿಸು ಜನ್ನತನು ಔದಾರ್ಯದಲಿ

ಆರ್.ಕೆ

?

● ಫಯಾಝ್ ಎನ್.

# ಈ ಆಂದೋಲನ ಪ್ರಶ್ನಾತೀತವಲ್ಲ...



ಆಗಸ್ಟ್ 14ರಂದು ಮಧ್ಯರಾತ್ರಿ ನಿದ್ದೆಬಿಟ್ಟು ಭಗವಾಧ್ವಜ ಹಾರಿಸಿದವರು ಮತ್ತೆ ಎಚ್ಚರಗೊಂಡದ್ದು 16ರಂದು ಬೆಳಗ್ಗೆ. ಜನಲೋಕಪಾಲ್ ಮಸೂದೆಯ ಜಾರಿಗೆ ಆಗ್ರಹಿಸಿ ಅಣ್ಣಾ ಹಝಾರೆ ದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ಆಗಸ್ಟ್ 16ರಂದು ನಿರಶನ ಹೂಡಿದ್ದರು. ಅನುಮತಿಯಿಲ್ಲದೆ ಕಾನೂನು ಉಲ್ಲಂಘಿಸಿ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ ಎಂದು ಆರೋಪಿಸಿ ಅಣ್ಣಾರನ್ನು ಪೊಲೀಸರು ಬಂಧಿಸಿ ತಿಹಾರ್ ಜೈಲಿಗೆ ತಳ್ಳಿದರು. ಈ ಎಲ್ಲ ಬೆಳವಣಿಗೆಯವರೆಗೆ ಗಾಢ ನಿದ್ರೆಯಲ್ಲಿದ್ದ ಸಂಘಪರಿವಾರ ಏಕಾಏಕೀ ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿತು. ಜನಮರುಳೋ ಜಾತ್ರೆ ಮರುಳೋ ಎಂಬಂತೆ ಜನಾಂದೋಲನವೊಂದು ನಡೆಯಿತು. ಒಂದೆರಡು ದಿನ ಮಾತ್ರ ! ಈಗ ಹಝಾರೆಯ ಹೋರಾಟ ರಾಮ್‌ಲೀಲಾ ಮೈದಾನಕ್ಕೆ ಮಾತ್ರ ಸೀಮಿತವಾಗಿಬಿಟ್ಟಿದೆ. ಇನ್ನುಳಿದವರು ಅವರವರ ಕೆಲಸ ಕಾರ್ಯಗಳಲ್ಲಿ ಬ್ಯುಸಿಯಾಗಿದ್ದಾರೆ. ಮಾಮೂಲಿನಂತೆ ಮಾಮೂಲು ಕೈಯಲ್ಲಿ ಹಿಡಿದುಕೊಂಡು ಸರಕಾರಿ ಕಚೇರಿಗಳಿಗೆ ಅಲೆಯುತ್ತಿದ್ದಾರೆ.

> *ಪುತ್ತೂರಿನಲ್ಲಿ 2011ರ ಮಾರ್ಚ್ 14ರಂದು ನಡೆದಿದ್ದ ಆರೆಸ್ಸೆಸ್‌ನ ಅಖಿಲ ಭಾರತ ಪ್ರತಿನಿಧಿ ಸಭಾದಲ್ಲಿ ಈ ಬಗ್ಗೆ ನಿರ್ಣಯವೊಂದನ್ನು ಕೈಗೊಳ್ಳಲಾಗಿತ್ತು. ಕೇಂದ್ರದಲ್ಲಿ ಸತತವಾಗಿ ಅಧಿಕಾರಕ್ಕೇರಲು ವಿಫಲವಾಗಿರುವ ಕೇಸರಿ ಪಡೆಯನ್ನು ಹೇಗಾದರೂ ಮಾಡಿ ಅಧಿಕಾರಕ್ಕೆ ತರಲು 'ಭ್ರಷ್ಟಾಚಾರ ವಿರೋಧಿ ಆಂದೋಲನ' ಎಂಬ ನೆಪದಲ್ಲಿ ಜನರು ಸಂಘಟಿಸುವಂತಹ ಗೂಢಾಲೋಚನೆಯನ್ನು ಹಾಕಿಕೊಳ್ಳಲಾಗಿತ್ತು. ಅದರ ನೇತೃತ್ವವನ್ನು ಯೋಗ ಉದ್ಯಮಿ ಬಾಬಾ ರಾಮ್‌ದೇವ್‌ಗೆ ನೀಡಿ ಆ ಮೂಲಕ ಭಾವನಾತ್ಮಕವಾಗಿ ಜನರನ್ನು ಸಂಘಟಿಸುವ ತಂತ್ರವನ್ನು ಆರೆಸ್ಸೆಸ್ ಹೆಣೆದಿತ್ತು.*

ಭ್ರಷ್ಟಾಚಾರ ನಿರ್ಮೂಲನೆಗೊಳ್ಳಬೇಕು ಎಂಬುದು ಸಾರ್ವಕಾಲಿಕ ಬೇಡಿಕೆ. ಈ ಕುರಿತ ಹೋರಾಟಕ್ಕೆ ಪ್ರತಿಯೊಬ್ಬ ನಾಗರಿಕನೂ ಸಾಥ್ ನೀಡಬೇಕು.ಈ ನಿಟ್ಟಿನಲ್ಲಿ ಅಣ್ಣಾ ಹಝಾರೆಯ ಹೋರಾಟ ಭಾರತದಂತಹ ಭ್ರಷ್ಟಾಚಾರಪೀಡಿತ ದೇಶಕ್ಕೆ ಅತ್ಯಗತ್ಯ. ಭ್ರಷ್ಟಾಚಾರದ ವಿರುದ್ಧ ಜನತೆಯನ್ನು ಬಡಿದೆಬ್ಬಿಸಿದ ಹಝಾರೆಯನ್ನು ನಾವು ಅಭಿನಂದಿಸಲೇಬೇಕು. ಈ ಬಗ್ಗೆ ಸರಕಾರಕ್ಕೆ ಬಿಸಿ ಮುಟ್ಟಿಸಿದ ಹಝಾರೆಯನ್ನು ನಾವು ಶ್ಲಾಘಿಸಬೇಕು. ಭ್ರಷ್ಟಾಚಾರವು ದೇಶವ್ಯಾಪಿ ಚರ್ಚೆಯಾಗುವಂತೆ ಮಾಡಿದ ಹಝಾರೆಯನ್ನು ನಾವು ಪ್ರಶಂಸಿಸಲೇಬೇಕು.

ಆದರೆ

ಈ ಅಣ್ಣಾಂದೋಲನವು ಪ್ರಶ್ನಾತೀತವಲ್ಲ...

ಭ್ರಷ್ಟಾಚಾರ ನಿರ್ಮೂಲನೆಗಾಗಿ ಅಣ್ಣಾ ಹಝಾರೆಯ ತಂಡವು ಮಂಡಿಸುತ್ತಿರುವ ಕಾನೂನು ಭ್ರಷ್ಟಾಚಾರವನ್ನು ಎಷ್ಟರಮಟ್ಟಿಗೆ ನಿರ್ಮೂಲನೆ ಮಾಡುತ್ತದೋ ಹೇಳಲಾಗದು, ಆದರೆ ಖಂಡಿತವಾಗಿ ಅದು ದೇಶದ ಪ್ರಜಾತಂತ್ರ ವ್ಯವಸ್ಥೆಯನ್ನು ಹಂತಹಂತವಾಗಿ ನಿರ್ಮೂಲನೆ ಮಾಡುವುದಂತೂ ಸತ್ಯ. ಈ ಕಾರಣಕ್ಕಾಗಿ ಅಣ್ಣಾಂದೋಲನವು ಜನಪ್ರಿಯವಾಗುತ್ತಿದ್ದಂತೆ ಜನಲೋಕಪಾಲ್ ಮಸೂದೆಯು ಕೂಡ ಜನರ ಮಧ್ಯೆ ಚರ್ಚೆಯಾಗತೊಡಗಿತು. ಆರಂಭದ ಕೆಲವು ದಿನಗಳಲ್ಲಿ ಜನರು ಸಾಗರೋಪಾದಿಯಲ್ಲಿ ಅಣ್ಣಾ ಹಝಾರೆಯವರನ್ನು ಬೆಂಬಲಿಸಿದ್ದು, ಪ್ರತಿಭಟನೆಯನ್ನು ಸೇರಿಕೊಂಡದ್ದು ಭ್ರಷ್ಟಾಚಾರ ನಿರ್ಮೂನೆಯಾಗಬೇಕು ಎಂಬ ಏಕೈಕ ಉದ್ದೇಶದಿಂದ ಮತ್ತು ಅವರನ್ನು ಬಂಧಿಸಿದ ಕೇಂದ್ರ ಸರಕಾರದ ಸರ್ವಾಧಿಕಾರಿ ಧೋರಣೆಯ ವಿರುದ್ಧ.

ಹೀಗೆ ಅಣ್ಣಾಂದೋಲನದಲ್ಲಿ ಸೇರಿಕೊಂಡವರೆಲ್ಲರಿಗೂ ಜನಲೋಕಪಾಲ್ ಮಸೂದೆ ಏನೆಂಬುದೇ ಗೊತ್ತಿರಲಿಲ್ಲ. ಅದು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಮಾಂತ್ರಿಕ ದಂಡವೆಂದೇ ತಿಳಿದುಕೊಂಡವರಂತೆ ಜನರು ವರ್ತಿಸುತ್ತಿದ್ದರು. ಹಝಾರೆಗೆ ಭಾರೀ ಜನಬೆಂಬಲ ದೊರೆತಿರುವುದನ್ನು ಮನಗಂಡು ಅದರ ಲಾಭ ಪಡೆಯಲು ಯತ್ನಿಸಿದವರು ಬಿಜೆಪಿ ಮತ್ತು ಪರಿವಾರ.

ಅರೆ! ಅಣ್ಣಾ ಹಝಾರೆಯ ಹೋರಾಟಕ್ಕೂ ಬಿಜೆಪಿ ಮತ್ತು ಅದರ ಪರಿವಾರಕ್ಕೂ ಎತ್ತಣಿಂದೆತ್ತ ಸಂಬಂಧವಯ್ಯಾ!

ಸಂಬಂಧವಿದೆ ! ಪುತ್ತೂರಿನಲ್ಲಿ 2011ರ ಮಾರ್ಚ್ 14ರಂದು ನಡೆದಿದ್ದ ಆರೆಸ್ಸೆಸ್‌ನ ಅಖಿಲ ಭಾರತ ಪ್ರತಿನಿಧಿ ಸಭಾದಲ್ಲಿ ಈ ಬಗ್ಗೆ ನಿರ್ಣಯವೊಂದನ್ನು ಕೈಗೊಳ್ಳಲಾಗಿತ್ತು. ಕೇಂದ್ರದಲ್ಲಿ ಸತತವಾಗಿ ಅಧಿಕಾರಕ್ಕೇರಲು ವಿಫಲವಾಗಿರುವ ಕೇಸರಿ

ಪಡೆಯನ್ನು ಹೇಗಾದರೂ ಮಾಡಿ ಅಧಿಕಾರಕ್ಕೆ ತರಲು 'ಭ್ರಷ್ಟಾಚಾರ ವಿರೋಧಿ ಆಂದೋಲನ' ಎಂಬ ನೆಪದಲ್ಲಿ ಜನರು ಸಂಘಟಿಸುವಂತಹ ಗೂಢಾಲೋಚನೆಯನ್ನು ಹಾಕಿಕೊಳ್ಳಲಾಗಿತ್ತು. ಅದರ ನೇತೃತ್ವವನ್ನು ಯೋಗ ಉದ್ಯಮಿ ಬಾಬಾ ರಾಮ್‌ದೇವ್‌ಗೆ ನೀಡಿ ಆ ಮೂಲಕ ಭಾವನಾತ್ಮಕವಾಗಿ ಜನರನ್ನು ಸಂಘಟಿಸುವ ತಂತ್ರವನ್ನು ಆರೆಸ್ಸೆಸ್ ಹೆಣೆದಿತ್ತು. ಕಳೆದ ಎಪ್ರಿಲ್‌ನಲ್ಲಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಅಣ್ಣಾ ಹಝಾರೆ ಭ್ರಷ್ಟಾಚಾರದ ವಿರುದ್ಧ ಹೋರಾಟ ಕುಳಿತಾಗ ಅಲ್ಲಿ ದಿಢೀರನೆ ರಾಮ್‌ದೇವ್ ಕಾಣಿಸಿಕೊಂಡಿದ್ದ. ಮಾತ್ರವಲ್ಲ, ದೇಶದ ಪ್ರಮುಖ ನಗರಗಳಲ್ಲಿ ರಾಮ್‌ದೇವ್ ಭ್ರಷ್ಟಾಚಾರ ವಿರೋಧಿ ಆಂದೋಲನ ನಡೆಸಿದ. ಕೊನೆಗೆ ಅಣ್ಣಾಹಝಾರೆಯ ಹೋರಾಟವನ್ನು ಸಂಪೂರ್ಣವಾಗಿ ಹೈಜಾಕ್ ಮಾಡಿಕೊಂಡು ರಾಮ್‌ಲೀಲಾ ಮೈದಾನದಲ್ಲಿ ತನ್ನ ಸಂಗಡಿಗರನ್ನು ಸೇರಿಸಿಕೊಂಡು ಪ್ರತಿಭಟನಾ ಧರಣಿ ಕುಳಿತುಕೊಂಡ. ಕೇಂದ್ರ ಸರಕಾರವು ಇದರ ಹಿಂದಿನ ರಹಸ್ಯ ಅಜೆಂಡಾವನ್ನು ಕಂಡುಹಿಡಿದು ರಾಮ್‌ದೇವ್‌ನ ಪ್ರತಿಭಟನೆಯನ್ನು ಹತ್ತಿಕ್ಕಿತು.

ಆದರೆ ರಾಮ್‌ದೇವ್ ಓರ್ವ ಭ್ರಷ್ಟಾಚಾರಿಯಾಗಿದ್ದ ಕಾರಣ ಕೇಂದ್ರ ಸರಕಾರದ ಕ್ರಮವು ಅಷ್ಟೇನೂ ಟೀಕೆಗೊಳಗಾಗಿರಲಿಲ್ಲ. ಆದರೆ ಅಣ್ಣಾ ಹಝಾರೆ ಗ್ರಾಮೀಣ ಪ್ರದೇಶದಿಂದಲೇ ಹೋರಾಟವನ್ನು ನಡೆಸುತ್ತಾ ಬಂದವರು. ಅವರಿಗೆ ಹೋರಾಟದ ಹಿನ್ನೆಲೆ ಇದೆ. ಜನಸಾಮಾನ್ಯರು ಅನುಭವಿಸುತ್ತಿರುವ ಸಂಕಷ್ಟದ ಅರಿವು ಅವರಿಗೆ ಇದೆ. ರಾಮ್‌ದೇವ್‌ನ ವಿರುದ್ಧ ಕ್ರಮ ತೆಗೆದುಕೊಂಡಂತೆ ಹಝಾರೆಯ ವಿರುದ್ಧ ಕ್ರಮ ತೆಗೆದುಕೊಂಡಿರುವುದು ಖಂಡನಾರ್ಹ. ಕೇಂದ್ರ ಸರಕಾರ ಮಾಡಿದ ಮೊದಲ ಎಡವಟ್ಟು ಇದು. ಈ ಸಂದರ್ಭದಲ್ಲಿ ಜನರು ಕೇಂದ್ರ ಸರಕಾರದ ವಿರುದ್ಧ ಆಕ್ರೋಶಗೊಂಡು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಇದನ್ನೇ ತನ್ನ ರಾಜಕೀಯ ಲಾಭಕ್ಕೆ ಬಳಸಲು ಯತ್ನಿಸಿದ ಬಿಜೆಪಿ ಮತ್ತು ಪರಿವಾರ ಈಗ ಸ್ವತಹ ತಾವು ತೋಡಿದ ಹಳ್ಳಕ್ಕೆ ಬಿದ್ದು ಒದ್ದಾಡುತ್ತಿದೆ. ಅರ್ಥಾತ್ ! ಜನಲೋಕಪಾಲ್ ಮಸೂದೆಯ ವಿಚಾರದಲ್ಲಿ ಬಿಜೆಪಿಯೊಳಗೆ ಈಗ ಭಿನ್ನಮತ ತಲೆದೋರಿದೆ.

ಗಂಭೀರ ವಿಚಾರವನ್ನೊಳಗೊಂಡ ಅಣ್ಣಾ ಹಝಾರೆಯ ಆಂದೋಲನವು ಎಷ್ಟು ನಗೆಪಾಟಲಿಗೀಡಾಯಿತಲ್ಲವೇ? ಒಂದೆರಡು ದಿನಗಳಲ್ಲಿ ಜನರು ಆಂದೋಲನದಿಂದ ಹಿಂದೆ ಸರಿಯಲು ಇದೇ ಕಾರಣ. ಅದೇನು ಗೊತ್ತೇ? ಸಂಘಪರಿವಾರ ಮತ್ತು ಬಿಜೆಪಿ ಆಂದೋಲನದ ಮುಂಚೂಣಿಯಲ್ಲಿ ನಿಂತದ್ದು.

''ಅಣ್ಣಾ ಹಝಾರೆಯ ಹೋರಾಟಕ್ಕೆ ನನ್ನ ಬೆಂಬಲವಿದೆ. ಎಲ್ಲರೂ ಹೋರಾಟವನ್ನು ಬೆಂಬಲಿಸಿ''- ಕರ್ನಾಟಕದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕರೆ ಕೊಟ್ಟಾಗಲೇ ಜನರು ಮುಸಿಮುಸಿ ನಗತೊಡಗಿದರು. ಅಷ್ಟು ಮಾತ್ರವಲ್ಲ, ಫ್ರೀಡಂ ಪಾರ್ಕ್‌ನಲ್ಲಿ ಅಣ್ಣಾ ಹಝಾರೆಯನ್ನು ಬೆಂಬಲಿಸಿ ನಡೆದ ಧರಣಿ ಪ್ರತಿಭಟನೆಯಲ್ಲಿ ಬಿಜೆಪಿಗರಿಗೆ ಅವಕಾಶ ಇರಲಿಲ್ಲ. ಪ್ರತಿಭಟನೆಗೆ ಕರೆಕೊಟ್ಟಿದ್ದ ಯಡಿಯೂರಪ್ಪ ತನ್ನ ಖಾಸಗಿ ಕಾರಿನಲ್ಲಿ ಅಜ್ಞಾತ ಸ್ಥಳವೊಂದಕ್ಕೆ ತೆರಳಿದ್ದರು. ಇದೇ ವೇಳೆ ಪತ್ರಿಕಾಗೋಷ್ಠಿ ಕರೆದ ರೇಣುಕಾಚಾರ್ಯ, ''ಯಡಿಯೂರಪ್ಪನವರು ನಾಳಿನ ಪ್ರತಿಭಟನೆಗೆ ಬರುವುದಿಲ್ಲ'' ಎಂದು ಹೇಳಿಕೆ ನೀಡಿದಾಗ ಯಾಕೆ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ರೇಣುಕಾಚಾರ್ಯ ಉತ್ತರಿಸಿದ್ದು- ''ಯಡಿಯೂರಪ್ಪನವರು ಬಂದರೆ ಅಲ್ಲಿಗೆ ಅಪಾರ ಜನ ಸೇರುತ್ತಾರೆ. ಟ್ರಾಫಿಕ್ ಕಂಟ್ರೋಲ್ ಮಾಡಲು ಸಾಧ್ಯವಿಲ್ಲ'' ಎಂದಾಗಿತ್ತು. ಮತ್ತೆ ಈ ಪತ್ರಿಕಾಗೋಷ್ಠಿಯಲ್ಲಿ ಬರೇ ನಗುವಿನ ಅಲೆ ಮಾತ್ರ ಕೇಳಿಸುತ್ತಿತ್ತು.

ಸದ್ಯ ದೇಶದಲ್ಲಿ ಚರ್ಚೆಯಾಗುತ್ತಿರುವ ಏಕೈಕ ವಿಚಾರ ಅಣ್ಣಾ ಹಝಾರೆ. ಭ್ರಷ್ಟಾಚಾರದ ನಿರ್ಮೂಲನೆಗಾಗಿ ಪಣತೊಟ್ಟಿರುವ ಅಣ್ಣಾ ಹಝಾರೆಯ ಹೋರಾಟವನ್ನು ವಿಫಲಗೊಳಿಸುವುದಕ್ಕಾಗಿಯೇ ಬಿಜೆಪಿ ಮತ್ತು ಅದರ ಪರಿವಾರ ಅವರಿಗೆ ಸಾಥ್ ನೀಡಿ ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿದೆ. ಭ್ರಷ್ಟಾಚಾರದ ಆರೋಪದಲ್ಲಿ ಇನ್ನೇನು ಜೈಲಿಗೆ ಹೋಗಲು ಕ್ಷಣಗಣನೆ ಎದುರಿಸುತ್ತಿರುವ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕೂಡ ಅಣ್ಣಾ ಹಝಾರೆಯವರ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಭಟನೆಗೆ ಕರೆ ನೀಡಿದ್ದಾರೆ. ರಾತ್ರೋರಾತ್ರಿ ನಡೆದ ಪೂರ್ವಯೋಜನೆಯಂತೆ ಎಬಿವಿಪಿಯ ಮೂಲಕ ಬಹುತೇಕ ಶಾಲಾ ಕಾಲೇಜುಗಳಲ್ಲಿ ತರಗತಿ ಬಹಿಷ್ಕಾರ ನಡೆದು ವಿದ್ಯಾರ್ಥಿಗಳಿಗೆ ಪುಕ್ಕಟೆ ರಜೆ ಸಿಗುವಂತಾಯಿತು. ಅಣ್ಣಾ ಹಝಾರೆಯ ಹೋರಾಟದಲ್ಲಿ ವಿದ್ಯಾರ್ಥಿ ಸಮೂಹ ಪಾಲ್ಗೊಂಡಿದೆ ಎಂದೇ ಬಿಂಬಿಸಲಾಯಿತು.

ಮಾಧ್ಯಮಗಳ ಕೃಪಕಟಾಕ್ಷದಿಂದಾಗಿ ಇಂದು ಹಝಾರೆಯ ಹೋರಾಟಕ್ಕೆ ಇನ್ನಿಲ್ಲದ ಪ್ರಚಾರ ದೊರೆಯಿತು. ಕೆಲವೊಮ್ಮೆ ಇದು ಅತಿರೇಕ ಎನಿಸುವಷ್ಟರ ಮಟ್ಟಿಗೆ. ಇಡೀ ಆಂದೋಲನವು ರಿಯಾಲಿಟಿ ಶೋ ದಂತೆ ಪ್ರಸಾರವಾಗತೊಡಗಿದವು. ಕ್ಯಾಂಡಲ್ ಮೊಂಬತ್ತಿ ಹಿಡಿದು ಹೈಟೆಕ್ ಪ್ರತಿಭಟನೆಯು ಅಲ್ಲಲ್ಲಿ ಕಾಣಿಸತೊಡಗಿತು. ಇದಕ್ಕೆಲ್ಲ ಮಾಧ್ಯಮಗಳು ಪ್ರಚಾರ ನೀಡಿದವು. ಈ ರೀತಿಯ ಪ್ರಚಾರ ನೀಡಿರುವುದರ ಹಿಂದೆ ಒಂದು ಬಹುದೊಡ್ಡ ವ್ಯಾಪಾರೀ ಉದ್ದೇಶವಿದೆ. ಈ ಕುರಿತು 'ಇಶಾ ನ್ಯೂಸ್ ಸರ್ವಿಸ್' ಎಂಬ ಸಂಸ್ಥೆ ನಡೆಸಿದ ಸಮೀಕ್ಷೆಯು

ಬಹಿರಂಗಪಡಿಸಿದ ಅಂಕಿಅಂಶಗಳನ್ನು ಗಮನಿಸಿದಾಗ ಮಾಧ್ಯಮ ಪ್ರಚಾರದ ಹಿಂದಿನ ಉದ್ದೇಶವೇನೆಂಬುದು ಸ್ಪಷ್ಟವಾಗುತ್ತದೆ.

ಅಣ್ಣಾ ಹಝಾರೆ ಕಳೆದ ಎಪ್ರಿಲ್ ತಿಂಗಳಲ್ಲಿ ಹೋರಾಟ ಹಮ್ಮಿಕೊಂಡಾಗ ಟಿವಿ ಮಾಧ್ಯಮಗಳಿಗೆ ಆದ ಲಾಭವೇ ಈ ಬಾರಿ ಅವರ ಹೋರಾಟಕ್ಕೆ ಇಷ್ಟೊಂದು ಬಿರುಸಿನಲ್ಲಿ ಪ್ರಚಾರ ನೀಡಲು ಕಾರಣ ಎಂಬುದನ್ನು ಇಶಾ ಸಂಸ್ಥೆಯ ಸಮೀಕ್ಷೆಯಿಂದ ತಿಳಿದುಬರುತ್ತದೆ.

ಕಳೆದ ಎಪ್ರಿಲ್ ತಿಂಗಳಲ್ಲಿ ಅಣ್ಣಾ ಹೋರಾಟದ ಆರಂಭದ ದಿನಗಳಲ್ಲೇ ಟಿವಿ ಮಾಧ್ಯಮದ ಜಾಹೀರಾತು ಮೌಲ್ಯ 176 ಕೋಟಿ ರೂಪಾಯಿ ತಲುಪಿತ್ತು. ಅಣ್ಣಾ ಹಝಾರೆ ಅವರು ಉಪವಾಸ ಆರಂಭಿಸಿದ ಮೊದಲ ದಿನದಂದು ಅಂದರೆ ಎಪ್ರಿಲ್ 3 ರಿಂದ 11ರವರೆಗೆ ಒಟ್ಟು 655 ಗಂಟೆಗಳು ಹಝಾರೆಯ ಕುರಿತಂತೆಯೇ ಸುದ್ದಿ ಬಿತ್ತರಗೊಂಡಿತ್ತು. ಹೋರಾಟದ ಕ್ಷಣ ಕ್ಷಣದ ಸುದ್ದಿಯನ್ನು ಬ್ರೇಕಿಂಗ್ ನ್ಯೂಸ್ ಆಗಿ ಒಟ್ಟು 5657 ಕ್ಲಿಪ್ಪಿಂಗ್‌ಗಳನ್ನು ಪ್ರಸಾರ ಮಾಡಲಾಗಿತ್ತು. ಸುದ್ದಿವಾಹಿನಿಗಳ ಮುಖ್ಯ ಸುದ್ದಿಗಳು ಬಿತ್ತರವಾಗುವ ಸಮಯವಾಗಿರುವ 'ಪ್ರೈಮ್ ಟೈಮ್'ನಲ್ಲಿ ಒಟ್ಟು 175 ಗಂಟೆಗಳಲ್ಲಿ 1224 ಕ್ಲಿಪ್ಪಿಂಗ್‌ಗಳು ಬಿತ್ತರಗೊಂಡಿವೆ. ಇದರ ಒಟ್ಟು ಜಾಹೀರಾತು ಮೌಲ್ಯ 52 ಕೋಟಿ ರೂಪಾಯಿ. ಹೀಗೆ ಒಂದು ಜನಪ್ರಿಯ ರಿಯಾಲಿಟಿ ಶೋದ ಮೂಲಕ ಜಾಹೀರಾತುಗಳನ್ನು ಬಾಚಿಕೊಳ್ಳುವಂತೆ ಟಿವಿ ಮಾಧ್ಯಮಗಳು ಅಣ್ಣಾ ಆಂದೋಲನವನ್ನು ರಿಯಾಲಿಟಿ ಶೋದಂತೆ ಬಿಂಬಿಸಿ ಸಾಕಷ್ಟು ಜಾಹೀರಾತು ಹಣವನ್ನು ಬಾಚಿಕೊಂಡಿದೆ. ಆದರೆ ಮಾಧ್ಯಮದ ಈ ವ್ಯಾಪಾರ ವಹಿವಾಟಿನ ಮೂಲಕ ಜನರಿಗೆ ವಾಸ್ತವ ಸಂಗತಿಯನ್ನು ಮರೆಮಾಚಲಾಗುತ್ತಿದೆ.

ಹಝಾರೆ ಆಗಸ್ಟ್ 15ರಿಂದ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಮೊದಲೇ ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಇದು ಸಂಚಲನ ಮೂಡಿಸಲಿದೆ ಎಂಬುದನ್ನು ಮಾಧ್ಯಮಗಳು ಮೊದಲೇ ಮನಗಂಡು ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಟ್ಟುಕೊಂಡಿದ್ದರು. ತಮ್ಮ ಕ್ಯಾಮರಾಗಳನ್ನು ಅಣ್ಣಾ ಹಝಾರೆಯತ್ತ ತಿರುಗಿಸಿ ಸಿದ್ಧವಾಗಿದ್ದರು. ಮಾಧ್ಯಮಗಳು ಅಂದುಕೊಂಡಂತೆ ಅಣ್ಣಾ ಹಝಾರೆ ಹೋರಾಟ ಆರಂಭಿಸಿದ ದಿನದಿಂದಲೇ ಜನರು ಟಿವಿ ಮುಂದೆ ಕುತೂಹಲದಿಂದ ಕುಳಿತುಕೊಳ್ಳಲಾರಂಭಿಸಿದರು.

ನಿಜವಾಗಿ ಈ ಸಂದರ್ಭದಲ್ಲಿ ಜನಾಂದೋಲನ ದಿಕ್ಕುತಪ್ಪದಂತೆ ಎಚ್ಚರವಹಿಸಬೇಕಾದದ್ದು ಮತ್ತು ಜನರನ್ನು ಜಾಗೃತಗೊಳಿಸಿ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಬೇಕಾದದ್ದು ಮಾಧ್ಯಮದ ಜವಾಬ್ದಾರಿ. ಕಾರಣ, ಮಾಧ್ಯಮವು ಪ್ರಜಾತಂತ್ರ ವ್ಯವಸ್ಥೆಯ ನಾಲ್ಕನೆ ಅಂಗ ಎಂದು ಗುರುತಿಸಲ್ಪಟ್ಟಿದೆ. ಆದರೆ ಜನಮರುಳೋ ಜಾತ್ರೆ ಮರುಳೋ ಎಂಬಂತೆ ನಡೆದ ಜನಾಂದೋಲನದಲ್ಲಿ ಹೆಚ್ಚಿನ ಮಾಧ್ಯಮಗಳು ಸೇರಿಕೊಂಡದ್ದು ಮಾತ್ರ ದುರಂತ. ಈ ಕಾರಣದಿಂದಾಗಿಯೇ ಜನಾಂದೋಲನದಲ್ಲಿ ಸಂಘಪರಿವಾರ ಮತ್ತು ನಟರು ನುಸುಳಿಕೊಳ್ಳುವಂತಾಯಿತು.

■ನಮ್ಮ ದೇಶದಲ್ಲಿ ಇಂದು ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ 77 ಲಕ್ಷ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರ ಮೇಲೆ ನಿಗಾ ಇಡುವ ಅಧಿಕಾರವು ಕೇವಲ 11 ಮಂದಿ ಇರುವ ಜನಲೋಕಪಾಲ್ ಸಂಸ್ಥೆಗೆ ಇರುತ್ತದೆ. ಮೇಲ್ನೋಟಕ್ಕೆ ಇದು ಅಸಾಧ್ಯ. ಮಾತ್ರವಲ್ಲ ಜನಲೋಕಪಾಲ್ ಮಸೂದೆ ಎಂಬುದು ಜನರನ್ನು ಒಳಗೊಂಡ, ಜನರ ಆಶೋತ್ತರಗಳನ್ನು ಒಳಗೊಂಡ ಮಸೂದೆಯಾಗಿದೆ ಎಂಬಂತೆ ಬಿಂಬಿಸಲಾಗುತ್ತಿದೆ. ವಾಸ್ತವದಲ್ಲಿ ಹಝಾರೆ ತಂಡವು ದೇಶವ್ಯಾಪಿ ಜನಾಭಿಪ್ರಾಯ ಸಂಗ್ರಹಿಸಿದ್ದೇ ಇಲ್ಲ.

ಅದೇನೇ ಇರಲಿ, ಅಣ್ಣಾ ಹಝಾರೆಯ ಹೋರಾಟದ ಉದ್ದೇಶ, ಜನಲೋಕಪಾಲ್ ಮಸೂದೆಯ ಸಾಧಕ- ಬಾಧಕ, ಕೇಂದ್ರ ಸರಕಾರದ ಧೋರಣೆ... ಇದ್ಯಾವುದರ ಕುರಿತು ಸದ್ಯ ಚರ್ಚೆ ನಡೆಯುತ್ತಿಲ್ಲ. ಈಗ ಕೇಳಿ ಬರುತ್ತಿರುವ ವಿಚಾರವೊಂದೇ- ಯುಪಿಎ ಸರಕಾರ ಪತನಗೊಳ್ಳಬೇಕು, ಪ್ರಧಾನಿ ರಾಜೀನಾಮೆ ನೀಡಬೇಕು ಎಂದು. ಒಂದು ಬಗೆಯ ರಿಯಾಲಿಟಿ ಶೋ ದಂತೆ ವಾರವಿಡೀ ಪ್ರಸಾರವಾದ ಅಣ್ಣಾಂದೋಲನಕ್ಕೆ ಮಾಧ್ಯಮಗಳು ಅಬ್ಬರದ ಪ್ರಚಾರ ನೀಡಿದವು. ಆದರೆ ಅದರ ವಿಮರ್ಶೆ ಪರಾಮರ್ಶೆಯು ಸಮರ್ಪಕವಾಗಿ ನಡೆಯದೇ ಹೋದ ಕಾರಣ ಜನಸಾಮಾನ್ಯರಿಗೆ ದೇಶದಲ್ಲಿ ವಾಸ್ತವದಲ್ಲಿ ಏನು ನಡೆಯುತ್ತಿದೆ ಎಂಬುದರ ಅರಿವೇ ಮೂಡುತ್ತಿಲ್ಲ.

ದೇಶದಲ್ಲಿ ಸದ್ಯ ನಡೆಯುತ್ತಿರುವ ಚರ್ಚೆ ಲೋಕಪಾಲ್ ಮಸೂದೆಯ ಕುರಿತಾಗಿದೆ. ಮಾಧ್ಯಮದ ಅಬ್ಬರದ ಪ್ರಚಾರದಿಂದಾಗಿ ಲೋಕಪಾಲ್ ಮಸೂದೆಯ ಬಗ್ಗೆ ಜನತೆ ಎಷ್ಟು ಕುತೂಹಲ ಹೊಂದಿದ್ದಾರೆ ಎಂದರೆ ಲೋಕಪಾಲ್ ಮಸೂದೆ ಜಾರಿಯಾದ ತಕ್ಷಣವೇ ದೇಶದಲ್ಲಿರುವ ಭ್ರಷ್ಟಾಚಾರವೆಲ್ಲ ನಿರ್ಮೂಲನೆ ಆಗಿಬಿಡುತ್ತದೆ ಎನ್ನುವಷ್ಟರ

ಮಟ್ಟಿಗೆ. ದೇಶದ 60 ವರ್ಷಗಳಲ್ಲಿ ಜನತೆ ಅನುಭವಿಸಿರುವ ಭ್ರಮೆಗಳಲ್ಲಿ ಲೋಕಪಾಲ್ ಮಸೂದೆ ಕೂಡ ಒಂದು. ಲೋಕಪಾಲ್ ಎಂಬ ಭ್ರಮಾಲೋಕದಲ್ಲಿ ತೇಲಾಡುತ್ತಿರುವ ದೇಶದ ಬಹುಪಾಲು ಜನತೆ ಜೀವಂತವಾಗಿರುವ ಮತ್ತು ದೇಶವನ್ನು ಹಿಂಡಿಹಿಪ್ಪೆ ಮಾಡಿರುವ 2ಜಿ ಸ್ಪೆಕ್ಟ್ರಂ ಹಗರಣ, ಕಾಮನ್‌ವೆಲ್ತ್ ಹಗರಣ, ಆಹಾರಧಾನ್ಯಗಳ ಹಗರಣಗಳನ್ನು ಮರೆತಂತಿದೆ.

ಮೊದಲು ಲೋಕಪಾಲ್ ಮಸೂದೆಯ ಬಗ್ಗೆ ತಿಳಿದುಕೊಳ್ಳಬೇಕು. 1966ರಿಂದಲೂ ನೆನೆಗುದಿಗೆ ಬಿದ್ದಿದ್ದ ಲೋಕಪಾಲ್ ಮಸೂದೆಯನ್ನು 2010ರ ಅಕ್ಟೋಬರ್‌ನಲ್ಲಿ ಜಾರಿಗೆ ತರಲು ಯತ್ನಿಸಿದ್ದೇ ಯುಪಿಎ ಸರಕಾರ. ಒಂದೆಡೆ ಭ್ರಷ್ಟಾಚಾರ ತಾಂಡವವಾಡುತ್ತಿರುವ ಹೊತ್ತಿನಲ್ಲೇ ಅದರ ನಿರ್ಮೂಲನೆಗೆಂದು ಲೋಕಪಾಲ್ ಮಸೂದೆ ಜಾರಿಗೆ ತರಲು ಕೇಂದ್ರ ಸರಕಾರ ಮುಂದಾಗಿರುವುದು ಕೂಡ ಸಂಶಯಾಸ್ಪದ ಕ್ರಮ. ಇದೇ ಹೊತ್ತಿನಲ್ಲಿ ಲೋಕಪಾಲ್ ಮಸೂದೆಗೆ ಬದಲಾಗಿ ಜನಲೋಕಪಾಲ್ ಮಸೂದೆಯನ್ನು ಜಾರಿಗೆ ತರಬೇಕು ಎಂದು ಖ್ಯಾತ ಗಾಂಧಿವಾದಿ ಅಣ್ಣಾ ಹಝಾರೆ ಹೋರಾಟ ಆರಂಭಿಸಿದ್ದಾರೆ.



ಮೊದಲನೆಯದಾಗಿ ಅಣ್ಣಾ ಹಝಾರೆಯ ತಂಡವು ಆಗ್ರಹಿಸುತ್ತಿರುವ ಜನಲೋಕಪಾಲ್ ಮಸೂದೆಯು ಕೇಂದ್ರ ಸರಕಾರವು ಒಪ್ಪಲು ಸಿದ್ಧವಿಲ್ಲದ ಯಾವೆಲ್ಲ ಅಂಶವನ್ನು ಒಳಗೊಂಡಿದೆ ಎಂಬುದನ್ನು ಗಮನಿಸಬೇಕು. ಎರಡನೆಯದಾಗಿ ಯಾತಕ್ಕಾಗಿ ಒಪ್ಪಿಕೊಳ್ಳುತ್ತಿಲ್ಲ ಎಂಬುದನ್ನು ಅರ್ಥೈಸಿಕೊಳ್ಳಬೇಕು. ಮೂರನೆಯದಾಗಿ ಪ್ರಜಾತಂತ್ರ ವ್ಯವಸ್ಥೆಗೆ ಜನಲೋಕಪಾಲ್ ಮಸೂದೆಯು ಅಪಾಯವೊಡ್ಡುವ ಸಾಧ್ಯತೆ ಇದೆಯೇ ಎಂಬುದನ್ನು ಮನಗಾಣಬೇಕು. ಈ ನಿಟ್ಟಿನಲ್ಲಿ ಚರ್ಚೆ, ಸಂವಾದಗಳು ನಡೆದರೆ ಮಾತ್ರ ಜನಾಂದೋಲನದ ಹೆಸರಿನಲ್ಲಿ ಜನರು ಮರುಳಾಗುವುದನ್ನು ತಡೆಗಟ್ಟಬಹುದು.

ಮುಖ್ಯವಾಗಿ ಸರಕಾರಿ ತಂಡ ರಚಿಸಿರುವ ಲೋಕಪಾಲ್ ಮಸೂದೆಯಲ್ಲಿ ಹಲವು ಲೋಪದೋಷಗಳಿದ್ದು ಅದು ಭ್ರಷ್ಟಾಚಾರವನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಲಿದೆ ಎಂಬ ಯಾವ ಭರವಸೆಯನ್ನೂ ನೀಡುತ್ತಿಲ್ಲ ಎಂಬುದು ನಿಜ. ಹಾಗೆಂದು ಇದಕ್ಕೆ ಪ್ರತಿಯಾಗಿ ಹಝಾರೆ ತಂಡವು ರಚಿಸಿರುವ ಜನಲೋಕಪಾಲ್ ಮಸೂದೆಯು ಪ್ರಶ್ನಾತೀತವೂ ಅಲ್ಲ. ಭ್ರಷ್ಟಾಚಾರ ಎಂಬ ಪಿಡುಗಿನ ವಿರುದ್ಧದ ನಮ್ಮ ಆಕ್ರೋಶವು ಇನ್ನೊಂದು ಅಪಾಯವನ್ನು ಮೈಮೇಲೆ ಎಳೆದುಕೊಳ್ಳಲು ಹೇತುವಾಗಬಾರದು. ಸದ್ಯ ಜನಲೋಕಪಾಲ್ ಮಸೂದೆಯಲ್ಲಿ ಅಂಥದ್ದೊಂದು ಅಪಾಯವು ಎದ್ದುಕಾಣುತ್ತಿದೆ.

ಜನಲೋಕಪಾಲ್ ಮಸೂದೆಯ ಕರಡಿನಲ್ಲಿ ನ್ಯಾಯಮೂರ್ತಿಗಳು ಮಾತ್ರವಲ್ಲದೆ, ಜನಪ್ರತಿನಿಧಿಗಳು ಇರಬೇಕೆಂದೂ, ಲೋಕಪಾಲಕ್ಕೆ ಯಾರ ಬಗ್ಗೆಯಾದರೂ ತಾನೇ ಸ್ವಯಂ ತನಿಖೆ ಮಾಡುವ ಹಾಗೂ ಶಿಕ್ಷಿಸುವ ಅಧಿಕಾರವು ಇರಬೇಕೆಂದೂ ಆಗ್ರಹಿಸಲಾಗಿದೆ.

ಲೋಕಪಾಲ್ ಸಂಸ್ಥೆ ಸಂಪೂರ್ಣವಾಗಿ ಸ್ವತಂತ್ರವಾಗಿದ್ದು ಯಾರಿಗೂ ಉತ್ತರದಾಯಿ ಆಗಿರುವುದಿಲ್ಲ. ಇದರ ಅರ್ಥ ನಮ್ಮ ಸಂಸತ್ತು ಮತ್ತು ನ್ಯಾಯಾಂಗಕ್ಕೆ ಇರುವ ಸ್ವಾತಂತ್ರ್ಯಕ್ಕಿಂತ ಹೆಚ್ಚು ಸ್ವಾತಂತ್ರ್ಯ ಮತ್ತು ಅಧಿಕಾರ ಜನಲೋಕಪಾಲ್ ಸಂಸ್ಥೆಗೆ ಇರುತ್ತದೆ. ಪ್ರಜಾತಂತ್ರ ವ್ಯವಸ್ಥೆ ಇರುವ ನಮ್ಮ ದೇಶದಲ್ಲಿ ಈ ಲೋಕಪಾಲ್ ಯಾರಿಗೂ ವಿವರಣೆ ಅಥವಾ ಉತ್ತರ ಕೊಡಬೇಕಿಲ್ಲ ಎಂದರೆ ಅದು ಪ್ರಜಾತಂತ್ರದ ಆಶಯಗಳಿಗೆ ವಿರುದ್ಧವಾಗಿರುತ್ತದೆಯಲ್ಲವೇ?

ನಮ್ಮ ದೇಶದಲ್ಲಿ ಇಂದು ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ 77 ಲಕ್ಷ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರ ಮೇಲೆ ನಿಗಾ ಇಡುವ ಅಧಿಕಾರವು ಕೇವಲ 11 ಮಂದಿ ಇರುವ ಜನಲೋಕಪಾಲ್ ಸಂಸ್ಥೆಗೆ ಇರುತ್ತದೆ. ಮೇಲ್ನೋಟಕ್ಕೆ ಇದು ಅಸಾಧ್ಯ. ಮಾತ್ರವಲ್ಲ ಜನಲೋಕಪಾಲ್ ಮಸೂದೆ ಎಂಬುದು

19ನೇ ಪುಟಕ್ಕೆ

# ಸೊಮಾಲಿಯಾ
# ಹಸಿವಿನ ಸಾಮ್ರಾಜ್ಯ



• ಶಬೀರ್ ಕೆ.

ಬರಗಾಲದಿಂದಾಗಿ ಸೊಮಾಲಿಯಾದಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾರೆ. ತಮ್ಮ ಕೈಯಲ್ಲೇ ಮಕ್ಕಳು ಹಸಿವಿನಿಂದ ಒದ್ದಾಡಿ ಸಾಯುವುದನ್ನು ನೋಡುವಂತಹ ಪರಿಸ್ಥಿತಿಯನ್ನು ಅಲ್ಲಿನ ಹೆತ್ತವರು ಎದುರಿಸುತ್ತಿದ್ದಾರೆ. ಕಂದಮ್ಮನಿಗೆ ಉಣಿಸುವುದಕ್ಕಾಗಿ ಮೊಲೆಯಲ್ಲಿ ಹಾಲಿಲ್ಲದಂತಹ ಪರಿಸ್ಥಿತಿ ತಾಯಂದಿರದ್ದು. ಆಹಾರದ ಕೊರತೆಯಿಂದಾಗಿ ದೇಹದಲ್ಲಿ ಅಲ್ಪವಾದರೂ ಮಾಂಸವಿಲ್ಲದೆ ಕೇವಲ ಅಸ್ತಿ ಪಂಜರದ ಮೇಲೆ ಚರ್ಮವನ್ನು ಹೊದ್ದಂತೆ ಇಲ್ಲಿನ ಮಕ್ಕಳು ಕಂಡುಬರುತ್ತಾರೆ. ಹಸಿವು ತಾಳಲಾರದೆ ಆಹಾರಕ್ಕಾಗಿ ಊರೂರು ಅಲೆದಾಡಿ ಅದೆಷ್ಟೋ ಮಂದಿ ದೇಶವನ್ನು ತೊರೆದಿದ್ದಾರೆ. ಸಾವಿರಾರು ಮಂದಿ ಸಮೀಪದ ಕೆನ್ಯ ಹಾಗೂ ಇಥಿಯೋಪಿಯಾ ಗಡಿಗಳಲ್ಲಿರುವ ವಿಶ್ವಸಂಸ್ಥೆಯ ನಿರಾಶ್ರಿತ ಶಿಬಿರಗಳಲ್ಲಿ ಆಶ್ರಯವನ್ನು ಪಡೆದಿದ್ದಾರೆ.

ಎಲ್ಲರಿಗೂ ಹಸಿವಿನ ರುಚಿಯನ್ನು ಉಣಿಸುವ ಪವಿತ್ರ ರಮಝಾನ್ ತಿಂಗಳಲ್ಲಿ ಹಸಿವಿನಿಂದ ಸಾಯುತ್ತಿರುವ ಸೊಮಾಲಿಯಾದ ಮಕ್ಕಳ ಬಗ್ಗೆ ಅಲ್ಪವಾದರೂ ಚಿಂತಿಸುವುದು ಮತ್ತು ಅವರ ನೆರವಿಗಾಗಿ ಏನನ್ನಾದರೂ ಮಾಡುವುದು ನೈಜ ಮುಸ್ಲಿಮರಿಗೆ ಕರ್ತವ್ಯವಾಗಿದೆ.

ವಿಶ್ವ ಸಂಸ್ಥೆಯ ಪ್ರಕಾರ ಬರ ಮತ್ತು ಬೆಲೆಯೇರಿಕೆಯಿಂದ ಉಂಟಾಗಿರುವ ಸಂಘರ್ಷದಿಂದಾಗಿ ಸುಮಾರು 65 ಲಕ್ಷ ಜನಸಂಖೆಯಿರುವ ಸೊಮಾಲಿಯಾದಲ್ಲಿ 37 ಲಕ್ಷ ಮಂದಿಗೆ ಆಹಾರದ ತುರ್ತು ನೆರವಿನ ಅಗತ್ಯವಿದೆ. ಪ್ರಸ್ತುತ ವಿಶ್ವಸಂಸ್ಥೆಯು ಕೇವಲ 15 ಲಕ್ಷ ಮಂದಿಗಷ್ಟೇ ಆಹಾರವನ್ನು ಒದಗಿಸುತ್ತಿದೆ. 20 ಲಕ್ಷಕ್ಕೂ ಅಧಿಕ ಮಂದಿಗೆ ಆಹಾರದ ನೆರವು ಅಲಭ್ಯವಾಗಿದೆ.

ಹಸಿವಿನಿಂದಾಗಿ ಸಾಯುವ ಮಕ್ಕಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇಲ್ಲಿ 6, 40,000 ಮಕ್ಕಳು ತೀವ್ರ ಹಸಿವಿನಿಂದ ಬಳಲುತ್ತಿದ್ದಾರೆ. ಕಳೆದ ಮೂರು ತಿಂಗಳಲ್ಲಿ 27,000 ಮಕ್ಕಳು ಹಸಿವಿನಿಂದ ಸಾವನ್ನಪ್ಪಿದ್ದಾರೆ. ವಿಶ್ವ ಸಂಸ್ಥೆಯ ವಿಶ್ವ ಆರೋಗ್ಯ ಕಾರ್ಯಕ್ರಮ (ಡಬ್ಲ್ಯುಎಫ್‌ಪಿ)ದ ಸಂಶೋಧನೆಗಳ ಪ್ರಕಾರ ಎಲ್ಲಾ ನಾಲ್ಕು ಮಕ್ಕಳಲ್ಲಿ ಒಂದು ಮಗು ತೀವ್ರ ಪೋಷಕಾಂಶದ ಕೊರತೆಯಿಂದ ಬಳಲುತ್ತಿದೆ.

ಗಲಭೆ ಪೀಡಿತ ದಕ್ಷಿಣ ಸೊಮಾಲಿಯಾದ ಪರಿಸ್ಥಿತಿಯು ಇನ್ನೂ ಹದಗೆಟ್ಟಿದೆ. ವಿಶ್ವ ಸಂಸ್ಥೆಯ ಪ್ರಕಾರ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆಯು 37 ಲಕ್ಷವಾದರೆ, ಅವರಲ್ಲಿ 28 ಲಕ್ಷ ಮಂದಿ ಈ ಗಲಭೆ ಪೀಡಿತ ಪ್ರದೇಶದವರಾಗಿದ್ದಾರೆ. ಜನರು ಹಸಿವಿನಿಂದ ಸಾಯುವುದನ್ನು ತಡೆಯುವುದಕ್ಕಾಗಿ ವಿಶ್ವಸಂಸ್ಥೆಯು ಹಲವು ಪ್ರಯತ್ನವನ್ನು ನಡೆಸುತ್ತಿದೆ. ಸೊಮಾಲಿಯಾದಲ್ಲಿ ಬರ ಪರಿಹಾರಕ್ಕಾಗಿ 2.4 ಬಿಲಿಯನ್ ಯು.ಎಸ್ ಡಾಲರ್‌ಗಳ ಅಗತ್ಯವಿದ್ದು, ಅದಕ್ಕಾಗಿ ನೆರವಾಗಬೇಕೆಂದು ವಿಶ್ವಸಂಸ್ಥೆ ತನ್ನ ಸದಸ್ಯ ರಾಷ್ಟ್ರಗಳೊಂದಿಗೆ ಕೇಳಿದೆ. ಆದರೆ ಈಗ ಅದರ ಅರ್ಧದಷ್ಟು ಮೊತ್ತವನ್ನಷ್ಟೇ ಸಂಪಾದಿಸಲು ವಿಶ್ವ ಸಂಸ್ಥೆಗೆ ಸಾಧ್ಯವಾಗಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಮಾನ್ಯ ಜನ ಮತ್ತು ದುರ್ಬಲ ಸಮುದಾಯಗಳು ಸೊಮಾಲಿಯದಲ್ಲಿ ಬರದಿಂದ ಬಳಲುತ್ತಿರುವ ಜನರ ಕಷ್ಟಗಳಿಗೆ ಸ್ಪಂದಿಸಿರುವುದು ಮಾತ್ರ ಹೃದಯ ಸ್ಪರ್ಶಿಯಾಗಿದೆ. ಘಾನದಲ್ಲಿ ಆ್ಯಂಡ್ರ್ಯೂ ಅದಾನ್ಸಿ ಬೊನ್ಸಾ ಎಂಬ ಕೇವಲ 11 ವಯಸ್ಸಿನ ಶಾಲಾ ಬಾಲಕನೊಬ್ಬ 'ಸೊಮಾಲಿ ಮಕ್ಕಳನ್ನು ಹಸಿವಿನಿಂದ ರಕ್ಷಿಸುವುದಕ್ಕಾಗಿ ಅಭಿಯಾನವನ್ನು ನಡೆಸಿ













**ಸೊಮಾಲಿಯಾದಲ್ಲಿ ಹಸಿವಿನ ಭೀಕರತೆಯನ್ನು ತೋರಿಸುತ್ತಿರುವ ವಿವಿಧ ದೃಶ್ಯಗಳು.**

20 ಲಕ್ಷ ಡಾಲರ್‌ಗಳನ್ನು ಸಂಗ್ರಹಿಸಲು ಮುಂದಾಗಿದ್ದಾನೆ. ಫೆಲೆಸ್ತೀನ್‌ನ ಗಾಝಾದಲ್ಲಿರುವ ಸೇವಾ ಸಂಸ್ಥೆಯೊಂದು 'ಗಾಝಾದಿಂದ ಸೊಮಾಲಿಯಾ ಮಕ್ಕಳನ್ನು ರಕ್ಷಿಸುವುದಕ್ಕಾಗಿ ನೆರವು' ಎಂಬ ಅಭಿಯಾನವನ್ನು ಆರಂಭಿಸಿದೆ. ಸ್ವತ: ದೌರ್ಜನ್ಯಕ್ಕೊಳಗಾಗುತ್ತಿರುವ ಜನರು ತಮ್ಮಂತೆ ಹಸಿವಿನಿಂದ ಬಳಲುತ್ತಿರುವ ಇನ್ನೊಂದು ಪ್ರದೇಶದ ಜನರ ಹಸಿವನ್ನು ನೀಗಿಸುವುದಕ್ಕಾಗಿ ಪ್ರಯತ್ನವನ್ನು ಪಡುವುದು ಮಾನವೀಯತೆಗೆ ಒಂದು ಭರವಸೆಯಾಗಿದೆ. ಭಾರತೀಯ ಸಮುದಾಯವು ಸೊಮಾಲಿಯಾದಲ್ಲುಂಟಾಗಿರುವ ಬರಗಾಲ ಹಾಗೂ ಅಲ್ಲಿನ ಜನರಿಗೆ ನೆರವಾಗುವ ವಿಷಯದಲ್ಲಿ ಆಸಕ್ತಿ ತೋರದಿರುವುದು ಖೇದಕರವಾಗಿದೆ.

ಸೊಮಾಲಿಯಾದಲ್ಲಿ ಕಳೆದ 60 ವರ್ಷಗಳಲ್ಲೇ ಕಂಡಿರದ ಬರಗಾಲದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನೂರಾರು-ಸಾವಿರಾರು ಮಂದಿ ನೆರವಿಗಾಗಿ ಪ್ರತೀ ದಿನ ಸಮೀಪದ ಕೆನ್ಯ ಹಾಗೂ ಇಥಿಯೋಪಿಯಾಕ್ಕೆ ಓಡಿ ಹೋಗುತ್ತಿದ್ದಾರೆ. ಸುಮಾರು 54 ಸಾವಿರ ಮಂದಿ ಹೀಗೆ ದೇಶ ಬಿಟ್ಟು ಪಲಾಯನಗೈದಿದ್ದಾರೆ. ಕೆನ್ಯ ಹಾಗೂ ಇಥಿಯೋಪಿಯಾ ಸರಕಾರಗಳು ತಮ್ಮ ದೇಶವನ್ನು ಪ್ರವೇಶಿಸುತ್ತಿರುವ ನಿರಾಶ್ರಿತರ ಸಂಖ್ಯೆಯು ಅಧಿಕವಾಗುತ್ತಿದೆ ಎಂದು ಬೊಬ್ಬಿಡುತ್ತಿವೆ. ವಿಶ್ವ ಸಂಸ್ಥೆ ನಡೆಸುತ್ತಿರುವ ವಿಶ್ವದಲ್ಲೇ ಅತ್ಯಂತ ದೊಡ್ಡ ನಿರಾಶ್ರಿತ ಶಿಬಿರವಾದ ಕೆನ್ಯದ ದಾದಾಬ್‌ಗೆ ಪ್ರತೀ ದಿನ 1,500ರಷ್ಟು ನಿರಾಶ್ರಿತರು ಸೊಮಾಲಿಯಾದಿಂದ ಆಗಮಿಸುತ್ತಿದ್ದಾರೆ. ಇವರೆಲ್ಲರೂ ಆಹಾರದ ಹುಡುಕಾಟದಲ್ಲಿ ಬಂದವರಾಗಿದ್ದಾರೆ.

ನಿರಾಶ್ರಿತ ಶಿಬಿರದಲ್ಲುಂಟಾದ ಹೆಚ್ಚಳದಿಂದಾಗಿ ತಮಗೆ ಪರಿಹಾರ ದೊರೆಯುವುದರಲ್ಲಿ ವಿಳಂಬವಾದಾಗ ಜನ ಹಸಿವಿನಿಂದಾಗಿ ರೊಚ್ಚಿಗೆದ್ದು ವಿಶ್ವಸಂಸ್ಥೆಯ ನಿರಾಶ್ರಿತರಿಗಾಗಿರುವ ಹೈಕಮಿಶನರ್ (ಯುಎನ್‌ಎಚ್‌ಸಿಆರ್)ನ ಕಚೇರಿಗೆ ಕಲ್ಲೆಸೆದ ಘಟನೆಯೂ ನಡೆದಿದೆ. ತೀವ್ರ ವಿಪತ್ತನ್ನು ಎದುರಿಸುತ್ತಿರುವ ಈ ಜನರಿಂದಲೂ ಲಂಚವನ್ನು ಪಡೆಯುವ ಅಧಿಕಾರಿಗಳೂ ಇದ್ದಾರೆ ಎಂಬುದು ಇನ್ನೂ ಅಚ್ಚರಿಯಾಗಿದೆ. ವಿಶ್ವಸಂಸ್ಥೆಯ ನಿರಾಶ್ರಿತರಿಗಾಗಿರುವ ಹೈಕಮಿಶನರ್ (ಯುಎನ್‌ಎಚ್‌ಸಿಆರ್)ನಲ್ಲಿ ಕೆಲಸ ಮಾಡುತ್ತಿರುವ ಸ್ಥಳೀಯ ಅಧಿಕಾರಿಗಳು ಆಹಾರ ಕಾರ್ಡ್‌ಗಳನ್ನು ನೀಡಲು ನಿರಾಶ್ರಿತರಿಂದ ಲಂಚವನ್ನು ಕೇಳುತ್ತಾರೆ.

*ಕೆಲವು ತಾಯಂದಿರು ತಮ್ಮ ಮಕ್ಕಳನ್ನು ಹಿಂಭಾಗಕ್ಕೆ ಕಟ್ಟಿಕೊಂಡು ನಿರಾಶ್ರಿತ ಶಿಬಿರಗಳತ್ತ ನಡೆಯುತ್ತಿರುವುದು ಇನ್ನೂ ಕರುಣಾಜನಕ. ಅಬ್ದಿಯೊ ಅಲಿ ಎಲ್ಮೊಯ್ ಎಂಬ ಮಹಿಳೆಯ ಮೂವರು ಮಕ್ಕಳು ಹಸಿವಿನಿಂದ ಸಾವನ್ನಪ್ಪಿದ್ದಾರೆ. ತಾನು ಹಗಲು ರಾತ್ರಿ ನಡೆಯುವ ಮೂಲಕ ನಿರಾಶ್ರಿತ ಶಿಬಿರವನ್ನು ಸೇರಿದ್ದೇನೆ ಎಂದು ಅಲಿ ಮಾಧ್ಯಮಗಳಿಗೆ ಹೇಳುತ್ತಾಳೆ.*

*ಸರೂರ ಅಲಿ ಹೇಳುವಂತೆ ಆಕೆ ಮತ್ತು ಆಕೆಯ ಕುಟುಂಬವು ದಾದಾಬ್‌ನ ನಿರಾಶ್ರಿತ ಶಿಬಿರವನ್ನು ಸೇರುವುದಕ್ಕಾಗಿ 5 ದಿನಗಳ ಕಾಲ ನಡೆಯಬೇಕಾಗಿತ್ತು. ಈ ಸಂದರ್ಭದಲ್ಲಿ ಅವರ ಬಳಿಯಿದ್ದುದು ಅಲ್ಪ ಹಿಟ್ಟು ಮಾತ್ರವಾಗಿತ್ತು. ಇದೊಂದು ಭಯಾನಕ ಅನುಭವಾಗಿತ್ತು ಎಂದು ಆಕೆ ಹೇಳುತ್ತಾಳೆ. ಹೀಗೆ ಬರಗಾಲದ ಸಂತ್ರಸ್ತರ ನರಕ ಯಾತನೆಯ ಕತೆಗಳು ಮುಂದುವರಿಯುತ್ತದೆ.*

ನಿರಾಶ್ರಿತ ಶಿಬಿರಗಳಲ್ಲಿರುವವರು ಬರಗಾಲದಿಂದ ತಾವೆದುರಿಸಿದ ಭಯಾನಕ ಕತೆಯನ್ನು ಮಾಧ್ಯಮಗಳ ಮುಂದೆ ಬಿಚ್ಚಿಡುತ್ತಾರೆ. ಇಸಾಕ್ ಆಬಿದಿ ಸನೀ ಒಬ್ಬ ದರಿದ್ರ ರೈತನಾಗಿದ್ದಾನೆ. ಮಾಧ್ಯಮಗಳಿಗೆ ತೋರಿಸುವುದಕ್ಕಾಗಿ ಆತ ತನ್ನ 6ರ ಹರೆಯದ ಮಗನ ಶರ್ಟನ್ನು ಬಿಚ್ಚುತ್ತಾನೆ. ಆಗ ಮಗುವಿನ ದೇಹದ ಪ್ರತಿಯೊಂದು ಎಲುಬುಗಳೂ ಎದ್ದು ಕಾಣುತ್ತಿದ್ದವು ಮತ್ತು ಚರ್ಮವು ತೆಳುವಾದ ಕಾಗದಂತಿತ್ತು. 'ಆತ ಜೀವಂತವಾಗಿದ್ದಾನೋ ಅಥವಾ ಸತ್ತಿದ್ದಾನೋ ಎಂಬುದು ನಮಗೆ ಗೊತ್ತಿಲ್ಲ. ಆದುದರಿಂದ ನಾವು ಅವನನ್ನು ನೋಡುತ್ತಾ ನಿಂತಿದ್ದೇವೆ. ಆತನ ಕಣ್ಣುಗಳು ಮಾತ್ರ ತೆರೆದಿವೆ' ಎಂದು ಇಸಾಕ್ ಹೇಳುತ್ತಾರೆ. ಇಸಾಕ್ 20 ದಿನಗಳ ಕಾಲ ಸೊಮಾಲಿಯಾದಿಂದ ನಡೆದುಕೊಂಡು ಬಂದು ಈ ನಿರಾಶ್ರಿತ ಶಿಬಿರವನ್ನು ಸೇರಿದ್ದರು. ದಾರಿಯಲ್ಲಿ ತಾನು ಕಂಡ ದೃಶ್ಯಗಳನ್ನು ಇಸಾಕ್ ಬಿಚ್ಚಿಡುತ್ತಾರೆ; ಸತ್ತ ಪ್ರಾಣಿಗಳ ರಾಶಿಗಳು, ಖಾಲಿ ಬಿದ್ದ ಗ್ರಾಮಗಳು, ಹಸಿವಿನಿಂದ ಸಾಯುತ್ತಿರುವ ಜನ, ನಿರಾಶ್ರಿತ ಶಿಬಿರದತ್ತ ಕಾಲೆಳೆಯುತ್ತಾ ಬರುವ ಮಂದಿ...

ಕೆಲವು ತಾಯಂದಿರು ತಮ್ಮ ಮಕ್ಕಳನ್ನು ಹಿಂಭಾಗಕ್ಕೆ ಕಟ್ಟಿಕೊಂಡು ನಿರಾಶ್ರಿತ ಶಿಬಿರಗಳತ್ತ ನಡೆಯುತ್ತಿರುವುದು ಇನ್ನೂ ಕರುಣಾಜನಕ. ಅಬ್ದಿಯೊ ಅಲಿ ಎಲ್ಮೊಯ್ ಎಂಬ ಮಹಿಳೆಯ ಮೂವರು ಮಕ್ಕಳು ಹಸಿವಿನಿಂದ ಸಾವನ್ನಪ್ಪಿದ್ದಾರೆ. ತಾನು ಹಗಲು ರಾತ್ರಿ ನಡೆಯುವ ಮೂಲಕ ನಿರಾಶ್ರಿತ ಶಿಬಿರವನ್ನು ಸೇರಿದ್ದೇನೆ ಎಂದು ಅಲಿ ಮಾಧ್ಯಮಗಳಿಗೆ ಹೇಳುತ್ತಾಳೆ.

ಸರೂರ ಅಲಿ ಹೇಳುವಂತೆ ಆಕೆ ಮತ್ತು ಆಕೆಯ ಕುಟುಂಬವು ದಾದಾಬ್‌ನ ನಿರಾಶ್ರಿತ ಶಿಬಿರವನ್ನು ಸೇರುವುದಕ್ಕಾಗಿ 5 ದಿನಗಳ

ಕಾಲ ನಡೆಯಬೇಕಾಗಿತ್ತು. ಈ ಸಂದರ್ಭದಲ್ಲಿ ಅವರ ಬಳಿಯಿದ್ದುದು ಅಲ್ಪ ಹಿಟ್ಟು ಮಾತ್ರವಾಗಿತ್ತು. ಇದೊಂದು ಭಯಾನಕ ಅನುಭವವಾಗಿತ್ತು ಎಂದು ಆಕೆ ಹೇಳುತ್ತಾಳೆ. ಹೀಗೆ ಬರಗಾಲದ ಸಂತ್ರಸ್ತರ ನರಕ ಯಾತನೆಯ ಕತೆಗಳು ಮುಂದುವರಿಯುತ್ತದೆ.

**ಬರ ಮತ್ತು ಸೊಮಾಲಿಯಾದ ರಾಜಕೀಯ**

ಸೊಮಾಲಿಯಾದಲ್ಲಿ ಬರ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಲ್ಲಿನ ಅಲ್-ಶಬಾಬ್ ಬಂಡುಕೋರ ಗುಂಪು ಅಡ್ಡಿ ಮಾಡುತ್ತಿದೆ ಮತ್ತು ಇದು ಇಲ್ಲಿ ಹಸಿವಿನಿಂದ ಸಾಯುವವರ ಸಂಖ್ಯೆ ಹೆಚ್ಚಲು ಕಾರಣವಾಗಿದೆ ಎಂದು ಅಮೆರಿಕ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳು ಹೇಳುತ್ತಿವೆ. ಈ ಮೂಲಕ ಸೊಮಾಲಿಯಾ ರಾಜಕೀಯದಲ್ಲಿ ತಮ್ಮ ಪ್ರವೇಶವನ್ನು ಸಮರ್ಥಿಸಿಕೊಳ್ಳುತ್ತಿದೆ. ಸೊಮಾಲಿಯಾದಲ್ಲಿ ಹಸಿವಿಗೆ ಈಗ ಉಂಟಾಗಿರುವ ಬರವೊಂದೇ ಕಾರಣವಲ್ಲ. ಪ್ರಸ್ತುತ ಸೊಮಾಲಿಯಾದಲ್ಲಿ ಪೂರ್ಣ ಅಧಿಕಾರದಿಂದ ಕೆಲಸ ಮಾಡುವ ಸರಕಾರವೇ ಇಲ್ಲದಿರುವುದು ಈ ರೀತಿ ಜನ ಹಸಿವಿನಿಂದ ಸಾಯಲು ಕಾರಣವಾಗಿದೆ. ಸ್ವತಂತ್ರ ಸರಕಾರವಿದ್ದಿದ್ದರೆ ಸೊಮಾಲಿಯದಲ್ಲಿ ಬರವನ್ನು ನಿಯಂತ್ರಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳುತ್ತಿತ್ತು.

ಸೊಮಾಲಿಯಾ 1960ರಲ್ಲಿ ಬ್ರಿಟಿಷ್ ಮತ್ತು ಇಟಲಿ ವಸಾಹತುಶಾಹಿಗಳಿಂದ ಸ್ವಾತಂತ್ರ್ಯವನ್ನು ಪಡೆದಿತ್ತು. 1969ರಲ್ಲಿ ಸಯ್ಯದ್ ಬರ್‍ರೆ ಅಧಿಕಾರಕ್ಕೇರಿದ್ದನು. 20 ವರ್ಷಗಳ ಹಿಂದೆ 1991ರಲ್ಲಿ ನಾಗರಿಕ ಯುದ್ಧವು ಭುಗಿಲೆದ್ದು ಅಮೆರಿಕ ಬೆಂಬಲಿತ ಅಧ್ಯಕ್ಷ ಸೈಯ್ಯದ್ ಬರ್‍ರೆಯ ಉಚ್ಚಾಟನೆಯ ನಂತರ ಸೊಮಾಲಿಯಾದಲ್ಲಿ ಯಾವುದೇ ಸರಕಾರಗಳಿಲ್ಲ. ಬರ್‍ರೆಯ ತಾರತಮ್ಯ ನೀತಿಯಿಂದಾಗಿ ಈ ನಾಗರಿಕ ಯುದ್ಧವು ಸ್ಫೋಟಿಸಿತ್ತು. 1991ರಲ್ಲಿ ಸೊಮಾಲಿಯಾ ಸರಕಾರವನ್ನು ಉಚ್ಚಾಟಿಸಿದ ವಿಶ್ವಸಂಸ್ಥೆಯು ಅಮೆರಿಕದ ನೇತೃತ್ವದಲ್ಲಿ ಶಾಂತಿ ಸೇನೆಯೊಂದನ್ನು ಅಲ್ಲಿಗೆ ಕಳುಹಿಸಿತು. ಸೊಮಾಲಿಯಾದಲ್ಲಿರುವ ತೈಲ ಸಂಪತ್ತಿನ ಮೇಲೆ ನಿಯಂತ್ರಣ ಸಾಧಿಸಲು ಅಮೆರಿಕ ಷಡ್ಯಂತ್ರಗಳನ್ನು ಹೆಣೆಯಲು ಆರಂಭಿಸಿತು. ಶಾಂತಿ ಸೇನೆ ಹಾಗೂ ಬಂಡುಕೋರರ ನಡುವೆ ಯುದ್ಧವು ಆರಂಭವಾಯಿತು.

ಸೊಮಾಲಿಯಾದಲ್ಲಿ ಟ್ರಾನ್ಸಿಶನಲ್ ಫೆಡರಲ್ ಗವರ್ನ್‌ಮೆಂಟ್ (ಟಿಎಫ್‌ಜಿ)ನ್ನು ಸ್ಥಾಪಿಸಲು ಅಮೆರಿಕ ಪ್ರಯತ್ನಗಳನ್ನು ಆರಂಭಿಸಿತು. ಯೂನಿಯನ್ ಇಸ್ಲಾಮಿಕ್ ಕೋರ್ಟ್ಸ್ (ಯುಐಸಿ)ನ ಹೆಚ್ಚುತ್ತಿರುವ ಜನಪ್ರಿಯತೆ ಅಮೆರಿಕಕ್ಕೆ ನುಂಗಲಾರದ ತುತ್ತಾಗಿತ್ತು. 2006ರಲ್ಲಿ ಯೂನಿಯನ್ ಇಸ್ಲಾಮಿಕ್ ಕೋರ್ಟ್ ಸೊಮಾಲಿಯಾದಲ್ಲಿ ಸ್ಥಿರ ಸರಕಾರವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಯಿತು. ಆದರೆ ಯುಐಸಿಗೆ



*ಹಸಿವಿನಿಂದ ಬಳಲಿ ಮೃತಪಟ್ಟ ವ್ಯಕ್ತಿಯೋರ್ವನ ಜನಾಝ ನಮಾಝ್ ನಿರ್ವಹಿಸುತ್ತಿರುವ ಸಂಬಂಧಿಕರು.*

ಅಲ್-ಕಾಯಿದಾ ನಂಟಿದೆಯೆಂದು ಆರೋಪಿಸಿ ಅಮೆರಿಕ ಇಥೋಯೋಪಿಯಾವನ್ನು ಬೆಂಬಲಿಸಿ ಸೊಮಾಲಿಯಾದ ಯುಐಸಿ ಸರಕಾರವನ್ನು ಉಚ್ಚಾಟಿಸಿತು. ನಂತರ ಟ್ರಾನ್ಸಿಶನಲ್ ಫೆಡರಲ್ ಸರಕಾರ (ಟಿಎಫ್‌ಜಿ)ವನ್ನು ಸ್ಥಾಪಿಸಲಾಯಿತು. ಟಿಎಫ್‌ಜಿ ಸೊಮಾಲಿಯಾದ ಕೆಲವು ಭಾಗದ ಮೇಲಷ್ಟೇ ನಿಯಂತ್ರಣ ಹೊಂದಿದೆ. ಸೊಮಾಲಿಯಾದ ಸರಕಾರವನ್ನು ಉರುಳಿಸುವುದರಲ್ಲಿ ಅಮೆರಿಕದ ಬೇಹುಗಾರಿಕಾ ಸಂಸ್ಥೆಯಾದ ಸಿಐಎಯ ಪಾತ್ರ ಮಹತ್ವದ್ದಾಗಿತ್ತು.

ತಮಗಾದ ಅನ್ಯಾಯವನ್ನು ಸಹಿಸಲಾಗದ ಯುಐಸಿಯಲ್ಲಿನ ಒಂದು ವಿಭಾಗ ಅಲ್-ಶಬಾಬ್ ಎಂಬ ಗೆರಿಲ್ಲಾ ಪಡೆಯನ್ನು ರಚಿಸಿತು. ಅಲ್-ಶಬಾಬ್ ಸೊಮಾಲಿಯಾದ ದಕ್ಷಿಣ ಭಾಗದಲ್ಲಿ ಬಲಿಷ್ಠವಾಗಿದೆ. ದೇಶದ ಬಹುತೇಕ ಭೂಪ್ರದೇಶವನ್ನು ನಿಯಂತ್ರಿಸುತ್ತಿರುವ ಯುಐಸಿ-ಶಬಾಬ್ ಮೇ 2009ರಂದು ರಾಜಧಾನಿ ಮೊಗಾದಿಶುವಿನ ಬಹುತೇಕ ಭಾಗವನ್ನು ಆಕ್ರಮಿಸಿತು. ವಿಶ್ವಸಂಸ್ಥೆ ಮತ್ತು ಅಮೆರಿಕ ಯುಐಸಿ-ಅಲ್ ಶಬಾಬ್ ನಿಯಂತ್ರಣದಲ್ಲಿರುವ ಪ್ರದೇಶಗಳಿಗೆ ದಿಗ್ಬಂಧನವನ್ನು ಹೇರಿದ ನಂತರ ಈ ಪ್ರದೇಶದಲ್ಲಿ ಆಹಾರದ ಸಮಸ್ಯೆ ಹೆಚ್ಚಾಯಿತು. ದಿಗ್ಬಂಧನಕ್ಕೆ ಪ್ರತಿಕ್ರಿಯೆಯಾಗಿ ಅಲ್-ಶಬಾಬ್ ತನ್ನ ನಿಯಂತ್ರಣ ಕಳೆದುಕೊಳ್ಳಬೇಕಾಗಬಹುದೋ ಎಂಬ ಭಯದಿಂದ ತಾವು ಬಲಿಷ್ಠವಾಗಿರುವ ಪ್ರದೇಶಗಳಿಗೆ ಅಂತಾರಾಷ್ಟ್ರೀಯ ಆಹಾರ ನೆರವು ಏಜೆನ್ಸಿಗಳು ಪ್ರವೇಶಿಸುವುದನ್ನು ತಡೆಯಿತು. ಈ ಕಾದಾಟದಲ್ಲಿ ಬಲಿಪಶುಗಳು ಸೊಮಾಲಿಯಾದ ಜನರಾಗಿದ್ದರು.

ಹೀಗೆ ಸೊಮಾಲಿಯಾದಲ್ಲಿ ಉಂಟಾಗಿರುವ ಕ್ಷಾಮಕ್ಕೆ ಅಲ್ಲಿನ ರಾಜಕೀಯದಲ್ಲಿ ಅಂತಾರಾಷ್ಟ್ರೀಯ ಹಸ್ತಕ್ಷೇಪವೂ ಕಾರಣವಾಗಿದೆ.

# ಅಣ್ಣಾ V/S ಇರೋಮ್

● ಮುಹಮ್ಮದ್ ಶಾಕೀರ್ ಬೈಕಂಡಿ



ಮೊನ್ನೆ ಭಾರತವು 65ನೆ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಳ ಸಂಭ್ರಮ- ಸಡಗರದಿಂದ ಆಚರಿಸಿತು. ಎಲ್ಲೆಡೆಯೂ ರಾಷ್ಟ್ರ ಧ್ವಜವನ್ನು ಹಾರಿಸಲಾಯಿತು. ದೇಶದ ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ದೇಶದ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿದರು. ಅವರು ಭ್ರಷ್ಟಾಚಾರವನ್ನು ಕೇಂದ್ರವಾಗಿರಿಸಿ ಮಾತನಾಡಿದ್ದರು. ಇನ್ನೊಂದೆಡೆ ಅಣ್ಣಾ ಹಝಾರೆ ನೇತೃತ್ವದಲ್ಲಿ ಜನಲೋಕಪಾಲ ವಿಧೇಯಕದ ಜಾರಿಗಾಗಿ ಆಗ್ರಹಿಸಿ ಜನತೆ ಘೋಷಣೆ ಮೊಳಗಿಸಿದರು. ಈ ಚಳುವಳಿಗೆ ವಿದ್ಯಾರ್ಥಿಗಳು, ಯುವಕರು, ಕಾರ್ಮಿಕರು, ಸಾಮಾಜಿಕ ಕಾರ್ಯಕರ್ತರು, ಬುದ್ಧಿ ಜೀವಿಗಳು ಸೇರಿದಂತೆ ಸಮಾಜದ ಎಲ್ಲಾ ವರ್ಗದ ಜನರು ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಭಾರತ ದೇಶದ ಎಲ್ಲಾ ನಗರ ಬೀದಿಗಳಲ್ಲೂ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದವು. ಅಣ್ಣಾ ಹಝಾರೆಯ ಜನ ಲೋಕಪಾಲ್ ಮಸೂದೆಗೆ ಆಗ್ರಹಿಸಿ ನಡೆಸುತ್ತಿರುವ ಆಂದೋಲನಕ್ಕೆ ಸಿಗುವ ಬೆಂಬಲ ಹಾಗೂ ಪ್ರಚಾರ ಕಳೆದ ಸುಮಾರು 11 ವರ್ಷಗಳಿಂದ ಉಪವಾಸ ನಡೆಸುತ್ತಿರುವ ಮಣಿಪುರದ 'ಕಬ್ಬಿಣದ ಮಹಿಳೆ' ಎಂದೇ ಖ್ಯಾತಿ ಪಡೆದಿರುವ ಇರೋಮ್ ಶರ್ಮಿಳಾ ಚಾನುವಿಗೆ ದೊರಕದಿರುವುದು ವಿಷಾದನೀಯವಾಗಿದೆ.

ಇರೋಮ್ ಶರ್ಮಿಳಾ 2000ರ ನವೆಂಬರ್ 2ರಂದು ತಮ್ಮ ಮನೆಯ ಬಳಿಯ ಬಸ್ ನಿಲ್ದಾಣದಲ್ಲಿ ಸೇನಾ ಪಡೆಯ ಯೋಧರು 10 ಮಂದಿಯನ್ನು ಹತ್ಯೆ ಮಾಡಿರುವುದನ್ನು ಕಂಡ ನಂತರ ತನ್ನ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದರು. ಅಂದ ಹಾಗೆ ಸಶಸ್ತ್ರ ಪಡೆಗಳ ವಿಶೇಷಧಿಕಾರ ಕಾಯ್ದೆ (ಎಎಫ್ಎಸ್‌ಪಿಎ)ಯನ್ನು 1958ರಲ್ಲಿ ಸಂಸತ್ತಿನಲ್ಲಿ ಮಂಡಿಸಲಾದಾಗ ಈ ಕಾಯ್ದೆ ಗರಿಷ್ಟವೆಂದರೆ 6 ತಿಂಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಎಂದು ಹೇಳಲಾಗಿತ್ತು. ಆದರೆ ನಂತರ ಆದದ್ದೇ ಬೇರೆ. ಇದು ಜಾರಿಯಾಗಿ 52 ವರ್ಷಗಳು ಕಳೆದರೂ ಕೂಡ ಮಣಿಪುರದಲ್ಲಿ ಇಂದಿಗೂ ಜಾರಿಯಲ್ಲಿದೆ. ಈ ಕಾಯ್ದೆಯು ಸಶಸ್ತ್ರ ಪಡೆಗಳಿಗೆ ತನಗೆ

ಸಂದೇಹ ಬಂದವರನ್ನು ಕೊಂದು ಹಾಕುವ, ಬಂಧಿಸುವ ಅಧಿಕಾರವನ್ನು ನೀಡಿತ್ತು. ಈ ಕಾಯ್ದೆ ಎಲ್ಲೆಲ್ಲಾ ಹೇರಲಾಗಿತ್ತೋ, ಅಲ್ಲೆಲ್ಲಾ ಅಮಾಯಕರ ನಾಪತ್ತೆ, ಕಾನೂನಿನ ವ್ಯಾಪ್ತಿಗೆ ಹೊರಗಿನ ಹತ್ಯೆಗಳು, ಹಿಂಸೆಗಳು, ಅತ್ಯಾಚಾರಗಳು ಎಂದಿಲ್ಲದಂತೆ ಹೆಚ್ಚಾಗಿದೆ.

ಇಂಫಾಲ್ ಭಾರತದ ಇತರ ಅನುಕೂಲಕರ ನಗರಗಳಿಗಿಂತ ವಿಭಿನ್ನವಾಗಿದೆ. ಇಲ್ಲಿ ವಿದ್ಯುತ್ ಸಮಸ್ಯೆ, ನೀರಿನ ಕೊರತೆ, ಹೊಂಡಗಳಿಂದ ಕೂಡಿದ ರಸ್ತೆಗಳು, ಹಣದುಬ್ಬರ ಸಮಸ್ಯೆ ಮತ್ತು ಇನ್ನೂ ಹಲವು ಸಮಸ್ಯೆಗಳು ಕಾಣಸಿಗುತ್ತವೆ. ಸರಕಾರವು ಪ್ರತಿಭಟನೆ ನಡೆಸುವ ಹಕ್ಕನ್ನು ಜನರಿಂದ ಕಸಿದುಕೊಂಡಿದೆ. ಆದರೆ ಮಣಿಪುರವು ಭಾರತದಲ್ಲಿದೆ. ಇಲ್ಲಿ ಜನರು ಕತ್ತಲಾದ ನಂತರ ಮನೆಯಿಂದ ಹೊರಗಿಳಿಯಲು ಭಯಪಡುತ್ತಾರೆ. ಮಾರುಕಟ್ಟೆಗಳು ಸೂರ್ಯಾಸ್ತದೊಂದಿಗೆ ಮುಚ್ಚಲ್ಪಡುತ್ತಿವೆ. ಆಯುಧಧಾರಿ ಸೈನಿಕರು ಮತ್ತು ಉಗ್ರವಾದಿಗಳು ಮೆಲ್ಲನೆ ಬೀದಿಗಳಲ್ಲಿ ಸಂಚರಿಸುವುದನ್ನು ಜನರು ಕಾಣುತ್ತಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವವು ಸಿದ್ಧಾಂತ ಮಾತ್ರವಾಗಿದೆ ಮತ್ತು ಆಡಳಿತದಲ್ಲಿ ಅದು ಜಾರಿಯಲ್ಲಿಲ್ಲ.

ಅಣ್ಣಾ ಮಣಿಪುರದಲ್ಲಿ ಹಾಗೂ ಶರ್ಮಿಳಾ ಹೊಸದಿಲ್ಲಿಯಲ್ಲಿ ಜನಿಸಿದ್ದರೆ ಪರಿಸ್ಥಿತಿ ಬೇರೆಯೇ ಆಗುತ್ತಿತ್ತು. ಮುಖ್ಯವಾಹಿನಿಯಿಂದ ಕಡೆಗಣನೆಗೆ ಒಳಗಾಗಿದ್ದೇನೆ ಎಂಬ ಭಾವನೆಯು ಇಲ್ಲಿ ಅಕ್ರಮ ನುಸುಳುವಿಕೆ ಮತ್ತು ಬಂಡುಕೋರ ಚಟುವಟಿಕೆ ಹೆಚ್ಚಾಗಲು ಕಾರಣವೆಂದು ಮಾನವ ಹಕ್ಕುಗಳ ಹೋರಾಟಗಾರ ತುಷಾರ್ ಸಿಂಗ್ ಹೇಳುತ್ತಾರೆ.

ಈಶಾನ್ಯ ಭಾರತದಲ್ಲಿ ನಡೆಯುತ್ತಿರುವ ವಿಷಯದ ಬಗ್ಗೆ ಮುಖ್ಯವಾಹಿನಿ ಮಾಧ್ಯಮಗಳು ಗಮನಹರಿಸುವುದೇ ಅಪರೂಪ. ಅವರ ಈ ಧೋರಣೆ ತಾರತಮ್ಯದಿಂದ ಕೂಡಿದೆ ಎಂದು ಮಾನವ ಹಕ್ಕುಗಳ ಹೋರಾಟಗಾರ ಬಬ್ಲು ಲೂಯಿ ಟಾಂಗ್ ಬಾಮ್ ಹೇಳುತ್ತಾರೆ.

ಈಶಾನ್ಯ ಭಾರತದ ರಾಜ್ಯಗಳು ಮತ್ತು ಜಮ್ಮು-ಕಾಶ್ಮೀರದಲ್ಲಿ ಅಕ್ರಮ ನುಸುಳುಕೋರರ ವಿರುದ್ಧ ಹೋರಾಡುವ ಸಲುವಾಗಿ ಸೇನಾ ಪಡೆಗೆ 1990ರಲ್ಲಿ ಈ ಅಧಿಕಾರವನ್ನು ನೀಡಲಾಯಿತು. ಆ್ಯಮ್ನೆಸ್ಟಿ ಮುಂತಾದ ಮಾನವ ಹಕ್ಕು ಹೋರಾಟ ಸಂಸ್ಥೆಗಳು ಈ ಕಾಯ್ದೆಗೆ ಪ್ರತಿಭಟನೆ ವ್ಯಕ್ತಪಡಿಸುತ್ತಲೇ ಬಂದಿವೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದೊಂದು ಕಪ್ಪು ಚುಕ್ಕೆಯಾಗಿದೆ ಎಂದು ಸಾಮಾಜಿಕ ಹೋರಾಟಗಾರರು ಆಕ್ಷೇಪಿಸುತ್ತಿದ್ದಾರೆ.

2000ದ ನವೆಂಬರ್‌ನಿಂದ 38 ವರ್ಷ ಪ್ರಾಯದ ಮಹಿಳೆ ಇರೋಮ್ ಶರ್ಮಿಳಾ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯನ್ನು ಹಿಂದೆಗೆಯುವುದಕ್ಕಾಗಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಪ್ರತೀ ವರ್ಷ ಆಕೆಯನ್ನು ಬಿಡುಗಡೆಗೊಳಿಸಿ ಮತ್ತೆ ಬಂಧಿಸಲಾಗುತ್ತಿದೆ. ಕಲ್ಪನಾತೀತ ಧೈರ್ಯವನ್ನು ಹೊಂದಿರುವ ಈ ಮಹಿಳೆ ತನ್ನ ಹೋರಾಟವನ್ನು ಕೈಬಿಡುತ್ತಿಲ್ಲ. ಆಶಾದಾಯಕವಾದ ಮೊಂಬತ್ತಿಯನ್ನು ಆಕೆ ಹಿಡಿದಿದ್ದಾರೆ.

ಪ್ರಸಕ್ತ ಸರಕಾರವು ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯನ್ನು ಹಿಂದೆಗೆಯುವುದಾಗಿ ಮೊದಲ ಅವಧಿಯಲ್ಲಿ ಅಧಿಕಾರಕ್ಕೆ ಬಂದಾಗ ಆಶ್ವಾಸನೆ ನೀಡಿತ್ತು. ಯುಪಿಎ ಸರಕಾರವು 2004ರಲ್ಲಿ ಪ್ರಥಮ ಬಾರಿಗೆ ಅಧಿಕಾರವೇರಿದಾಗ ಸುಪ್ರೀಂ ಕೋರ್ಟ್ ನ್ಯಾಯಾಧೀಶ ಬಿ.ಪಿ.ಜೀವನ್ ರೆಡ್ಡಿ ನೇತೃತ್ವದಲ್ಲಿ 5 ಸದಸ್ಯರ ಸಮಿತಿಯೊಂದನ್ನು ರಚಿಸಿತ್ತು. ಸಮಿತಿಯು ವಿಶೇಷಾಧಿಕಾರ ಕಾಯ್ದೆಯನ್ನು ಹಿಂದೆಗೆಯುವಂತೆ ಶಿಫಾರಸ್ಸು ಮಾಡಿತು. ಇದರಿಂದಾಗಿ ಇರೋಮ್ ಶರ್ಮಿಳಾರ ಈ ಬೇಡಿಕೆಯು ಅನುಚಿತವಲ್ಲವೆಂದು ಸಮಿತಿ ಹೇಳಿತು. ಈ ಶಿಫಾರಸ್ಸು ಮಾಡಿ ಆರು ವರ್ಷಗಳೇ ಸಂದರೂ ಭದ್ರತಾ ಪಡೆಗಳು ಈ ಕಾಯ್ದೆಯ ಪ್ರಯೋಜನ ಪಡೆಯುತ್ತಿದೆ. ಭಾರತದ ಇತರ ರಾಜ್ಯದ ಪ್ರಜೆಗಳಂತೆ ಮಣಿಪುರದ ಪ್ರಜೆಗಳೂ ಕೂಡ ಭಾರತದ ಪ್ರಜೆಗಳು. ಇವರು ಮೂಲಭೂತ ಹಕ್ಕುಗಳನ್ನು ಅನುಭವಿಸದೆ ಜೀವಿಸುತ್ತಿದ್ದಾರೆ.

ಯಾವ ರೀತಿ ಅನ್ನಾ ಹಝಾರೆಗೆ ರಾಷ್ಟ್ರಾದ್ಯಂತ ಮಾಧ್ಯಮ ಬೆಂಬಲ ದೊರಕ್ಕುತ್ತಿದೆಯೋ, ಅದೇ ರೀತಿ ಇರೋಮ್ ಶರ್ಮಿಳಾಗೆ ದೊರಕುತ್ತಿದ್ದರೆ ಮಾನವೀಯತೆಗೆ ವಿರುದ್ಧವಾದ AFSPA ಕಾಯಿದೆಯು ಹಿಂದೆಗೆಯಲ್ಪಡುತ್ತಿತ್ತು. ಮತ್ತು ಇರೋಮ್ ಶರ್ಮಿಳಾರ ಒಂದು ದಶಕಗಳ ಕಾಲ ನಡೆದ ಅಮರಣಾಂತ ಸತ್ಯಾಗ್ರಹಕ್ಕೆ ವಿಜಯ ದೊರಕುತ್ತಿತ್ತು. ಅದು ರಾಷ್ಟ್ರದ ಸಾಂವಿಧಾನಿಕ ಮೌಲ್ಯ ಹಾಗೂ ಪ್ರಜಾಪ್ರಭುತ್ವದ ವಿಜಯವೂ ಆಗುತ್ತಿತ್ತು.

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

12ನೇ ಪುಟದಿಂದ...

## ಈ ಆಂದೋಲನ ಪ್ರಶ್ನಾತೀತವಲ್ಲ....

ಜನರನ್ನು ಒಳಗೊಂಡ, ಜನರ ಆಶೋತ್ತರಗಳನ್ನು ಒಳಗೊಂಡ ಮಸೂದೆಯಾಗಿದೆ ಎಂಬಂತೆ ಬಿಂಬಿಸಲಾಗುತ್ತಿದೆ. ವಾಸ್ತವದಲ್ಲಿ ಹಝಾರೆ ತಂಡವು ದೇಶವ್ಯಾಪಿ ಜನಾಭಿಪ್ರಾಯ ಸಂಗ್ರಹಿಸಿದ್ದೇ ಇಲ್ಲ. ಅಷ್ಟಕ್ಕೂ ಇದು ಜನಲೋಕಪಾಲ್ ಮಸೂದೆ ಎಂದಾಗಬೇಕಾದರೆ ದೇಶವ್ಯಾಪಿ ಕಾರ್ಯಾಚರಿಸುತ್ತಿರುವ ಪ್ರಗತಿಪರ ಸಂಘಸಂಸ್ಥೆಗಳ, ಬುದ್ಧಿಜೀವಿಗಳ ಅಭಿಪ್ರಾಯ ಪಡೆದು ಸಮಿತಿ ರಚಿಸಬೇಕಾಗಿತ್ತು. ಇದ್ಯಾವುದು ನಡೆಯದೆ ಕೇವಲ ಹಝಾರೆ ಮತ್ತು ಅವರಿಗೆ ಹತ್ತಿರ ಇರುವ ಕೆಲವು ಮಂದಿಯನ್ನು (ಅವರ್‍ಯಾರೂ ಭ್ರಷ್ಟಾಚಾರದ ಸಂತ್ರಸ್ತರಲ್ಲ, ಆಸ್ತಿ ಸಂಪತ್ತು, ಅಂತಸ್ತು ಹೊಂದಿರುವವರೇ) ಸೇರಿಕೊಂಡು ಮಂಡಿಸಲಾಗಿರುವ ಜನಲೋಕಪಾಲ್ ಮಸೂದೆಯು ದೇಶದ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತದೆ ಎಂಬುದು ಭ್ರಮೆ ಮಾತ್ರ.

ಇಂತಹ ಭ್ರಮೆಯನ್ನು ಬಂಡವಾಳವಾಗಿಸಿಕೊಂಡು ಅದರ ಲಾಭ ಪಡೆಯಲು ಕೇಸರಿ ಪಡೆ ಹವಣಿಸುತ್ತಿರುವುದನ್ನು ಮತ್ತು ಅಣ್ಣಾಂದೋಲನವು ದಿಕ್ಕು ತಪ್ಪುವುದನ್ನು ತಡೆಯಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ. ಹೋರಾಟದ ಆರಂಭದಲ್ಲೇ ''ಬಿಜೆಪಿ ಧ್ವಜವನ್ನು ಹಿಡಿಯಬೇಡಿ, ರಾಷ್ಟ್ರಧ್ವಜ ಮಾತ್ರ ಬಳಸಿರಿ'' ಎಂದಿದ್ದರು. ಕಳೆದ ಎಪ್ರಿಲ್‌ನಲ್ಲಿ ಸಂಘಪರಿವಾರದೊಂದಿಗೆ ಹಝಾರೆಯನ್ನು ಹೋಲಿಕೆ ಮಾಡಿದಾಗ ಅವರು ನೊಂದು ''ನನ್ನ ತೇಜೋವಧೆ ಮಾಡಬೇಡಿ'' ಎಂದು ಅಲವತ್ತುಕೊಂಡಿದ್ದರು. ಆದ್ದರಿಂದ ನಾವು ಸಂಘಪರಿವಾರದ ಕುತಂತ್ರದಿಂದ ಅಣ್ಣಾ ಹಝಾರೆಯನ್ನು ಮುಕ್ತಗೊಳಿಸಬೇಕಾಗಿದೆ. ಭ್ರಷ್ಟಾಚಾರ್ ಹಠಾವೋ... ಅಣ್ಣಾ ಬಚಾವೋ... ಆಂದೋಲನ ಇನ್ನಷ್ಟೇ ಆರಂಭವಾಗಬೇಕಾಗಿದೆ.




*ಕರ್ನಾಟಕ ಹಾಗೂ ಕೇರಳದಲ್ಲಿ ಈ ಬಾರಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಫ್ರೀಡಂ ಪರೇಡ್‌ಗೆ ಅನುಮತಿ ನಿರಾಕರಿಸಲಾಯಿತು. ಆದರೆ ಆರೆಸ್ಸೆಸ್‌ನ ಮುಖವಾಣಿ ಹೊಸದಿಗಂತ ದಿನ ಪತ್ರಿಕೆ ತನ್ನ ವಿಶೇಷ ಪುರವಣಿಯಲ್ಲಿ ಪ್ರಕಟಿಸಿದ 'ಹುತಾತ್ಮರಿಗೆ ನಮನ' ಎಂಬ ಲೇಖನಕ್ಕೆ ಪೂರಕವಾಗಿ ಹಾಗೂ ಕಾಂಗ್ರೆಸ್‌ನ ಅಧ್ಯಾಪಕ ಸಂಘಟನೆಯಾಗಿರುವ ಕೇರಳ ಪ್ರಾಥಮಿಕ ಮತ್ತು ಸೆಕೆಂಡರಿ ಟೀಚರ್ಸ್ ಯೂನಿಯನ್ ಹೊರತಂದ ಪುರವಣಿಯೊಂದರ ಮುಖಪುಟಲ್ಲಿ ಪಾಪ್ಯುಲರ್ ಫ್ರಂಟ್‌ನ ಫ್ರೀಡಂ ಪರೇಡ್‌ನ ಛಾಯಾಚಿತ್ರವನ್ನು ಬಳಸಿಕೊಂಡು ಫ್ರೀಡಂ ಪರೇಡ್‌ಗೆ ವಿಶೇಷ ಆಕರ್ಷಣೆ ನೀಡಿದವು.*

■ಕೆ.ವೈ ಅಬ್ದುಲ್ ಹಮೀದ್
kukkaje09@gmail.com

# ಈದುಲ್-ಫಿತ್ರ್‌ನ ಚಂದಿರ

ರಂಝಾನ್ ತಿಂಗಳಲ್ಲಿ ಸುಬ್‌ಹಿ ನಮಾಝ್ ಮಸ್ಜಿದ್‌ನಲ್ಲಿ ನಿರ್ವಹಿಸಿದ ಬಳಿಕ ಮನೆಗೆ ಮರಳಿ ಸ್ವಲ್ಪ ಹೊತ್ತು ಮಲಗಿ ನಿದ್ರಿಸುವುದನ್ನು ಶಫೀಕ್ ರೂಢಿ ಮಾಡಿಕೊಂಡಿದ್ದ. ಇಂದು ಮಾತ್ರ ಆತನ ಕಣ್ಣಿಗೆ ನಿದ್ದೆಯೇ ಹತ್ತಿರಲಿಲ್ಲ. ಚಾಪೆಯಲ್ಲಿ ಎಷ್ಟೇ ಹೊರಳಾಡಿದರೂ ಅವನ ಕಣ್ಣ ಮುಂದೆ ಅಂದಿನ ಅವನ ಕಾರ್ಯಕ್ರಮ ಸಾಲುಗಟ್ಟಿ ನಿಲ್ಲುತ್ತಿದ್ದವು. ಅದನ್ನು ಮರೆಯಲು ಅವನು ಪ್ರಯತ್ನಿಸಿದಷ್ಟು ಅದು ಅವನನ್ನು ಮತ್ತೆ ಮತ್ತೆ ಕಾಡತೊಡಗಿತ್ತು. ನಿರ್ವಾಹವಿಲ್ಲದೆ ಚಾಪೆಯಿಂದ ಎದ್ದ ಶಫೀಕ್ ಗೋಡೆಗೆ ನೇತು ಹಾಕಿದ್ದ ಪ್ಲಾಸ್ಟಿಕ್ ಕೈಚೀಲವನ್ನು ತೆಗೆದು ಅದರಲ್ಲಿ ಮಡಚಿಟ್ಟಿದ್ದ ಬಿಳಿ ಹಾಳೆಯನ್ನು ಬಿಡಿಸಿ ಅದರಲ್ಲಿ ಬರೆದಿರುವುದನ್ನು ಪಿಸು ಧ್ವನಿಯಲ್ಲಿ ಓದಿ ಮನನ ಮಾಡತೊಡಗಿದ. ಕಂಠಪಾಟವಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಅವನು ಕಣ್ಣು ಮುಚ್ಚಿಕೊಂಡು ಧ್ವನಿ ಸ್ವಲ್ಪ ಎತ್ತರಿಸಿ ಪುನಃ ಒಂದು ಬಾರಿ ಹೇಳತೊಡಗಿದ.



ಅಲ್ಲೇ ಬಳಿಯಲ್ಲಿ ತಾಯಿಯ ಜತೆಯಲ್ಲಿ ಮಲಗಿ ಸುಖ ನಿದ್ದೆಯಲ್ಲಿದ್ದ ಅವನ ಪುಟ್ಟ ತಮ್ಮನ ಸವಿ ನಿದ್ದೆಗೆ ಶಫೀಕ್‌ನ ಭಾಷಣ ಅಡ್ಡಿಯಾಯಿತೋ ಏನೋ, ಅವನಂತು ಮೆಲ್ಲನೆ ಅರೆ ಕಣ್ಣು ತೆರೆದು ರಾಗವಾಗಿ ಆಳತೊಡಗಿದ್ದ. ಮಗುವಿನ ಅಳು ಮನೆ ಕೆಲಸದಲ್ಲಿ ಬಸವಳಿದು ಗಾಢ ನಿದ್ರೆಗೆ ಶರಣಾಗಿದ್ದ ತಾಯಿಯ ನಿದ್ದೆಗೂ ಭಂಗ ತಂದಿತ್ತು. ಅವಳು ನಿದ್ದೆ ಗಣ್ಣಿನಲ್ಲೆ ''ಛೇ, ಇವನದೊಂದು 'ಉರ್ದಿ', ಯಾರಿಗೂ ನಿದ್ರಿಸಲು ಬಿಡುವುದಿಲ್ಲ '' ಎಂದು ಗೊಣಗುತ್ತಲೇ ಅಳುತ್ತಿದ್ದ ಮಗುವನ್ನು ಅಪ್ಪಿ ಹಿಡಿದು ಸಂತೈಸುತ್ತಾ ಮತ್ತೆ ನಿದ್ದೆಗೆ ಜಾರಿದ್ದಳು. ಶಫೀಕ್ ಮತ್ತೆ ಮಗು ಎಚ್ಚರಗೊಳ್ಳದಂತೆ ಪಿಸು ದನಿಯಲ್ಲಿ ತನ್ನ ವಾಳ್ ಮುಂದುವರಿಸಿದ್ದ. ಕಂಠಪಾಟ ಸರಿಯಾಗಿ ಮಾಡಿದ್ದರೂ ಮಧ್ಯದಲ್ಲಿ ಎಲ್ಲಾದರೂ 'ಉರ್ದಿ' ಕೈಕೊಡುವುದೋ ಎಂಬ ಅಳುಕು ಅವನನ್ನು ಸದಾ ಕಾಡುತ್ತಲೇ ಇತ್ತು. ಅದಾಗಲೆ ಅವನು ಆ ಉರ್ದಿಯನ್ನು ಸಾವಿರಾರು ಬಾರಿ ಒಬ್ಬನೆ ಕೂತು ಹೇಳಿ ತನ್ನ ಕಂಠಪಾಟ ಸರಿಯಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಂಡಿದ್ದ. ಆದರೂ ಅವನಿಗೆ ಪೂರ್ಣ ಆತ್ಮವಿಶ್ವಾಸ ಇನ್ನೂ ಮೂಡಿರಲಿಲ್ಲ.

ಇನ್ನೂ ಹದಿನೈದರ ಅಸುಪಾಸಿನಲ್ಲಿದ್ದ ಅವನಿಗೆ ಕಂಠಪಾಠ ಮಾಡುವುದು ದೊಡ್ಡ ಸಮಸ್ಯೆಯೇನೂ ಆಗಿರಲಿಲ್ಲ. ಆದರೆ ಮಸ್ಜಿದ್‌ನಲ್ಲಿ ಅಪರಿಚಿತ ಜನರ ಗುಂಪಿನ ಮುಂದೆ ನಿಂತು ಉರ್ದಿ ಹೇಳ ತೊಡಗಿದಾಗ ಹೆದರಿಕೆಯಿಂದ ಎಲ್ಲಿ ಕಂಠಪಾಟ ಮರೆತು ಹೋಗುವುದೋ ಎಂಬ ಆತಂಕ ಅವನನ್ನು ಬಿಡದೆ ಕಾಡುತ್ತಿತ್ತು. ಆ ದೃಶ್ಯವನ್ನು ಕಲ್ಪಿಸಿಕೊಳ್ಳುವಾಗಲೆಲ್ಲಾ ಅವನ ಎದೆಯಲ್ಲಿ ಅವಲಕ್ಕಿ ಕುಟ್ಟತೊಡಗುತ್ತಿತ್ತು. ರಂಝಾನ್ ರಜೆ ಮುಗಿದು ಮರಳಿ ಸುರಿಬೈಲ್ ದರ್ಸ್‌ಗೆ ಹಾಜರಾಗುವಾಗ ಒಳ್ಳೆಯ ಒಂದು ಜೋಡಿ ಬಟ್ಟೆಗಳನ್ನು ಖರೀದಿಸುವ ಹಣವನ್ನಾದರೂ ಸಂಪಾದಿಸಬೇಕೆಂಬುದು ಅವನ ಮನದಾಶೆಯಾಗಿತ್ತು. ಅವನ ಉಸ್ತಾದರೂ ಅದನ್ನೆ ಹೇಳಿದ್ದರು, ''ನೋಡು ಮಗೂ ಇಲ್ಮು ಕಲಿತ ಬಳಿಕ ಜನರ ಮುಂದೆ ಮಾತನಾಡಬೇಕಾಗುತ್ತದೆ. ನೋಂಬ್‌ನಲ್ಲಿ ಉರ್ದಿಗೆ ಹೋದರೆ

*ಸಮಯ ಒಂಭತ್ತಾದರೂ ಶಫೀಕ್‌ನ ತಾಯಿ ನಿದ್ದೆಯಿಂದ ಎದ್ದಿರಲಿಲ್ಲ. ತಾಯಿಯ ಬಳಲಿದ ಮುಖವನ್ನು ಕಾಣುವಾಗ ಶಫೀಕ್‌ಗೆ ಅವಳನ್ನು ಎಬ್ಬಿಸುವ ಮನಸ್ಸಾಗಲಿಲ್ಲ. ಸ್ವಲ್ಪ ಹೊತ್ತು ಕಾದ ಅವನು ಸಮಯ ಮೀರುವುದನ್ನು ಕಂಡು ಮೆಲ್ಲನೆ ಸಹನೆ ಕಳೆದುಕೊಳ್ಳತೊಡಗಿದ್ದ. ತಡವಾಗಿ ಹೋದರೆ ಉರ್ದಿಗೆ ಚಾನ್ಸ್ ಸಿಗದು ಎಂಬುದನ್ನು ಅವನ ಮಿತ್ರರು ಒತ್ತಿ ಹೇಳಿದ್ದರು. 'ಉಮ್ಮಾ , ನಾನು ಹೋಗುತ್ತೇನೆ ' ಎಂಬ ಶಫೀಕ್‌ನ ಕರೆಗೆ ಅವನ ತಾಯಿಯ ನಿದ್ದೆ ಸಂಪೂರ್ಣ ಹಾರಿ ಹೋಗಿತ್ತು. 'ಎಲ್ಲಿಗೆ ಮಗನೇ..' ಎನ್ನುತ್ತಾ ಅವಳು ಗಡಬಡಿಸಿ ಎದ್ದಳು. ಶಫೀಕ್ ಬಿಳಿ ಲುಂಗಿ ಉಟ್ಟು ಅದೇ ಬಣ್ಣದ ಶರ್ಟ್‌ತೊಟ್ಟಿದ್ದ. ಒಂದು ಸಣ್ಣ ಮುಂಡಾಸನ್ನು ಕಲಾತ್ಮಕವಾಗಿ ತಲೆಗೆ ಸುತ್ತಿ ಕೊಂಡಿದ್ದ. ತನ್ನ ಮಗನನ್ನು ಮೌಲಾರ್ ವೇಷದಲ್ಲಿ ಕಂಡ ತಾಯಿ ಮನದಲ್ಲೆ ಹಿಗ್ಗಿದಳು.*

ಬಟ್ಟೆ ಬರೆಗೂ ಹಣ ಆಗುತ್ತದೆ, ಜನರ ಮುಂದೆ ಮಾತನಾಡುವ ತರಬೇತಿಯೂ ಸಿಗುತ್ತದೆ '' ಎಂಬ ಉಸ್ತಾದರ ಮಾತು ಅವನ ಕಿವಿಯಲ್ಲಿ ಈಗಲೂ ಪ್ರತಿಧ್ವನಿಸುತ್ತಿತ್ತು.

ತಾಯಿ ಬೀಡಿ ಕಟ್ಟಿದ ಸಂಪಾದನೆಯಲ್ಲಿ ಪೆರ್ನಾಲಿಗೆ ಬಟ್ಟೆ ಕೊಳ್ಳುವುದು ಅಸಾಧ್ಯ ಎಂಬುದು ಅವನ ಎಳೆಯ ಪ್ರಾಯಕ್ಕೂ ತಿಳಿದಿತ್ತು. ''ಎಲ್ಲಾ ಮುತಅಲ್ಲಿಮರೂ ವಾಳ್‌ಗೆ ಹೋಗಿ ಖರ್ಚಿನ ಹಣ ಮಾಡುತ್ತಾರೆ, ನೀನೂ ಹೋಗು, ಹೆದರಬೇಡ, ಅಲ್ಲಾ ಇದ್ದಾನೆ '' ಎಂಬ ಅವನು ಕಲಿಯುತ್ತಿದ್ದ ದರ್ಸಿನ ಹಿರಿಯ ಮುತಅಲ್ಲಿಮರ ಉಪದೇಶ ಅವನಿಗೆ ಧೈರ್ಯ ನೀಡುತ್ತಿತ್ತು. ಏನೇ ಆಗಲಿ ಇಂದು ಹೋಗಿಯೇ ತೀರುತ್ತೇನೆ ಎಂದು ತನ್ನಲ್ಲೆ ಹೇಳಿಕೊಂಡು ಅಲ್ಲಿಂದೆದ್ದು ಮೊದಲೆ ಸಿದ್ದಪಡಿಸಿಟ್ಟಿದ್ದ ಪ್ಲಾಸ್ಟಿಕ್ ಕೈ ಚೀಲವನ್ನು ತೆಗೆದು ಅದರೊಳಗಿದ್ದ ವಸ್ತುವನ್ನು ಸುರಿದು ನೋಡಿದ.

ಹಳೆಯ ಒಂದು ಟೀಶರ್ಟ್, ಒಂದು ಚೌಕಳಿ ಲುಂಗಿ, ಮಾಸಿದ ಬಣ್ಣದ ಒಂದು ಟವೆಲ್ ಮತ್ತು ಹಲ್ಲು ತಿಕ್ಕುವ ಬ್ರಶ್ ಇವಿಷ್ಟು ಅದರೊಳಗಿತ್ತು. ಪ್ರಯಾಣಕ್ಕೆ ಬೇಕಾದ ಎಲ್ಲಾ ವಸ್ತು ಸರಿ ಇದೆ ಎಂಬುದನ್ನು ಖಾತ್ರಿಪಡಿಸಿಕೊಂಡು ಶಫೀಕ್ ಅದನ್ನೆಲ್ಲಾ ಮರಳಿ ಚೀಲದಲ್ಲಿ ತುಂಬಿ ಗೋಡೆಗೆ ಹೊಡೆದಿದ್ದ ಮೊಳೆಗೆ ನೇತು ಹಾಕಿಟ್ಟ.

ಸಮಯ ಒಂಭತ್ತಾದರೂ ಶಫೀಕ್‌ನ ತಾಯಿ ನಿದ್ದೆಯಿಂದ ಎದ್ದಿರಲಿಲ್ಲ. ತಾಯಿಯ ಬಳಲಿದ ಮುಖವನ್ನು ಕಾಣುವಾಗ ಶಫೀಕ್‌ಗೆ ಅವಳನ್ನು ಎಬ್ಬಿಸುವ ಮನಸ್ಸಾಗಲಿಲ್ಲ. ಸ್ವಲ್ಪ ಹೊತ್ತು ಕಾದ ಅವನು ಸಮಯ ಮೀರುವುದನ್ನು ಕಂಡು ಮೆಲ್ಲನೆ ಸಹನೆ ಕಳೆದುಕೊಳ್ಳತೊಡಗಿದ್ದ. ತಡವಾಗಿ ಹೋದರೆ ಉರ್ದಿಗೆ ಚಾನ್ಸ್ ಸಿಗದು ಎಂಬುದನ್ನು ಅವನ ಮಿತ್ರರು ಒತ್ತಿ ಹೇಳಿದ್ದರು. 'ಉಮ್ಮಾ, ನಾನು ಹೋಗುತ್ತೇನೆ ' ಎಂಬ ಶಫೀಕ್‌ನ ಕರೆಗೆ ಅವನ ತಾಯಿಯ ನಿದ್ದೆ ಸಂಪೂರ್ಣ ಹಾರಿ ಹೋಗಿತ್ತು. 'ಎಲ್ಲಿಗೆ ಮಗನೇ..' ಎನ್ನುತ್ತಾ ಅವಳು ಗಡಬಡಿಸಿ ಎದ್ದಳು. ಶಫೀಕ್ ಬಿಳಿ ಲುಂಗಿ ಉಟ್ಟು ಅದೇ ಬಣ್ಣದ ಶರ್ಟ್‌ತೊಟ್ಟಿದ್ದ. ಒಂದು ಸಣ್ಣ ಮುಂಡಾಸನ್ನು ಕಲಾತ್ಮಕವಾಗಿ ತಲೆಗೆ ಸುತ್ತಿ ಕೊಂಡಿದ್ದ. ತನ್ನ ಮಗನನ್ನು ಮೌಲಾರ್ ವೇಷದಲ್ಲಿ ಕಂಡ ತಾಯಿ ಮನದಲ್ಲೆ ಹಿಗ್ಗಿದಳು. ಕಡು ಬಡತನದ ಜೀವನ ತನ್ನದಾಗಿದ್ದರೂ ಅಲ್ಲಾಹನು ತನ್ನ ಮಗನನ್ನು ಕುರ್‌ಆನ್ ಕಲಿಯುವಂತೆ ಮಾಡಿದನಲ್ಲಾ ಎಂಬುದು ಅವಳ ಹಿಗ್ಗಿಗೆ ಕಾರಣವಾಗಿತ್ತು. ಅವಳ ಅನಾರೋಗ್ಯ ಪೀಡಿತ ಪತಿ ಸಂಪಾದನೆ ಮಾಡುವ ಸಾಮರ್ಥ್ಯ ಕಳೆದುಕೊಂಡ ಬಳಿಕ ಶಫೀಕ್‌ನನ್ನು ಅವಳು ಸುರಿಬೈಲ್ ದರ್ಸಿಗೆ ಸೇರಿಸಿದ್ದಳು. ಇದೀಗ ಆತ ಮಸೀದಿಯಲ್ಲಿ ಉರ್ದಿ ಮಾಡಲು ಹೊರಟು ನಿಂತಿದ್ದಾನೆ. ಅವಳ ಮನದಲ್ಲಿ ಸಂತೋಷದ ಅಲೆ ಏಳುತ್ತಿದ್ದರೂ ಏನೂ ಅರಿಯದ ಮಗ ಉರ್ದಿ ಹೇಳಲು ಅಲೆದಾಡುವ ಮಧ್ಯೆ ಎಲ್ಲಿ ಕಷ್ಟಕ್ಕೀಡಾಗಬಹುದೊ ಎಂಬ ಆತಂಕ ಅವಳ ಮನವನ್ನು ಚುಚ್ಚತೊಡಗಿತ್ತು. ತಾಯಿಯ ಮುಖದಲ್ಲಿದ್ದ ಆತಂಕ ಶಫೀಕ್‌ಗೆ ಸ್ಪಷ್ಟವಾಗಿ ಕಂಡಿತ್ತು. 'ಏನು ಹೆದರಬೇಡಿ ಉಮ್ಮಾ , ನಾನು ನಾಳೆಯೆ ಬರುತ್ತೇನೆ ' ಎಂದು ಅವನು ಧೈರ್ಯದ ಮಾತನಾಡಿದಾಗ ಒಲ್ಲದ ಮನಸ್ಸಿನಿಂದ ಅವಳು ತಲೆಯಾಡಿಸಿದ್ದಳು.

ಶಫೀಕ್ ತನ್ನ ಪುಟ್ಟ ತಮ್ಮನನ್ನು ಅಪ್ಪಿ ಹಿಡಿದು ಮುತ್ತೊಂದನ್ನು ನೀಡಿ 'ನಾನು ಬರುವಾಗ ನಿನಗೆ ಚಾಕಿ ತರುತ್ತೇನೆ ' ಎಂದು ಹೇಳಿ ಮಗುವನ್ನು ತಾಯಿಗೆ ಮರಳಿ ನೀಡಿ ಅಲ್ಲೆ ಕುಳಿತು ಫಾತಿಹ ಓದಿ ಕಣ್ಣು ಮುಚ್ಚಿ ಪ್ರಾರ್ಥಿಸತೊಡಗಿದ. ತನ್ನ ಮಗನ ಕಷ್ಟವನ್ನು ಕಂಡು ತಾಯಿಯ ಕಣ್ಣಲ್ಲಿ ನಿಯಂತ್ರಣ ಮೀರಿ ಹರಿದ ಕಣ್ಣೀರನ್ನು ಕಂಡರೂ ಕಾಣದಂತೆ ನಟಿಸಿದ ಶಫೀಕ್ ಚೀಲವನ್ನು ಕೈಗೆತ್ತಿಕೊಂಡು ತಲೆತಗ್ಗಿಸಿ ಹೊರಟುನಿಂತ. ಅಪ್ಪಿ ಹಿಡಿದು ತಲೆ ಸವರಿ ತಾಯಿ ಕಳಿಸಿ ಕೊಟ್ಟಾಗ ಆತನ ಕಣ್ಣಂಚಿನಲ್ಲಿ ರತ್ನಮಣಿಯೊಂದು ಜಾರಿ ಬೀಳಲು ಅಣಿಯಾಗಿ ನಿಂತಿತ್ತು. ಶಫೀಕ್ ಮನೆಯಿಂದ ಹೊರಟು ದೂರ ಸಾಗಿ ಈದುಲ್ ಫಿತ್ರ್‌ನ ಚಂದ್ರನಂತೆ ಅಸ್ಪಷ್ಟವಾಗಿ ಗೋಚರಿಸುವ ತನಕ ಅವನ ತಾಯಿ ಬಾಗಿಲ ಬಳಿ ನಿಂತು ಆತನನ್ನು ನೋಡುತ್ತಲೇ ಇದ್ದಳು.

★★★

# ಸಂಘರ್ಷದ ಮಧ್ಯೆ ಈದ್ ಸಂಭ್ರಮ

**● ಮುರ್ಶಿದ್**

**ಅಬೂಹುರೈರಾ(ರ) ರಿಂದ ವರದಿ: ಪ್ರವಾದಿ(ಸ) ಹೇಳಿದರು- ''ಮೂರು ಮಂದಿಯ ಪ್ರಾರ್ಥನೆಯನ್ನು ಅಲ್ಲಾಹನು ತಿರಸ್ಕರಿಸಲಾರನು: ವ್ರತಧಾರಿ ಇಫ್ತಾರ್ ಮಾಡುವವರೆಗೆ, ನ್ಯಾಯವಂತನಾದ ಆಡಳಿತಗಾರ, ಮರ್ದಿತನ ಪ್ರಾರ್ಥನೆ. ಮೋಡಗಳ ಮೇಲೆ ಅಲ್ಲಾಹನು ಅದನ್ನು ಎತ್ತರಿಸಿಕೊಂಡು ಹೋಗುವನು, ಆಕಾಶ ದ್ವಾರಗಳು ಅದಕ್ಕಾಗಿ ತೆರೆಯಲ್ಪಡುವುದು. ಅಲ್ಲಾಹು ಹೇಳುವನು 'ನನ್ನ ಪ್ರತಾಪದ ಮೇಲಾಣೆ, ನಿನಗೆ ನಾನು ಖಂಡಿತ ಸಹಾಯ ಮಾಡುವೆನು- ತುಸು ಕಳೆದು ನಂತರವಾದರೂ ಸರಿ''**



ಬೈಹಖೀ ವರದಿ ಮಾಡಿದ ಹದೀಸನ್ನು ಸಮಕಾಲೀನ ಸಂದರ್ಭದಲ್ಲಿ ಸಮೀಕರಿಸಿ ವ್ಯಾಖ್ಯಾನಿಸಬಹುದಾಗಿದೆ. ಆತ್ಮಸಂಸ್ಕರಣೆ ಮತ್ತು ಸಹನೆಯ ಮಾಸವು ನಮ್ಮಿಂದ ವಿದಾಯ ಹೇಳಿದೆ. ಹಗಲೂ ರಾತ್ರಿ ಆರಾಧನೆಯಲ್ಲಿ ತಲ್ಲೀನರಾಗಿ ತನುಮನವನ್ನು ಪ್ರಫುಲ್ಲಗೊಳಿಸಿ ಸತ್ಯವಿಶ್ವಾಸಿಗಳು ತಮ್ಮ ಆರಾಧನೆಯ ಖಬೂಲಿಯ ಸಾರ್ಥಕತೆಯೊಂದಿಗೆ ಈದುಲ್ ಫಿತ್ರ್‌ನ್ನು ಸ್ವಾಗತಿಸುವಲ್ಲಿ ತಲ್ಲೀನರಾಗಿದ್ದಾರೆ.

ಖಂಡಿತವಾಗಿಯೂ ಈದುಲ್ ಫಿತ್ರ್ ಸತ್ಯವಿಶ್ವಾಸಿಗೆ ಸಂತೋಷಾಚರಣೆ ಮಾಡಲು ಹೇಳಿದ ವೇಳೆಯಾಗಿದೆ. ಆದರೆ ನಮ್ಮ ಸುತ್ತಮುತ್ತಲಿನ ಮತ್ತು ರಾಜ್ಯ ದೇಶದ ಸಾಮಾಜಿಕ ರಾಜಕೀಯ ಪರಿಸ್ಥಿತಿ ಚಿಂತಾಜನಕವಾಗಿದೆ. ನಾಗರಿಕ ಸಮಾಜವು ಅನುಭವಿಸಬೇಕಾದ ಸಂಪತ್ತನ್ನು ಪ್ರಭುತ್ವವು ಯಾವುದೇ ನಾಚಿಕೆಯಿಲ್ಲದೆ ಕೊಳ್ಳೆಹೊಡೆಯುತ್ತಿದೆ. ತಮಗೆ ರಕ್ಷಣೆ ನೀಡಬೇಕಾದ ಸರಕಾರ ರಾಷ್ಟ್ರದ ಸಂಪತ್ತನ್ನು ಸಮಾನತೆಯಿಂದ ವಿತರಿಸಬೇಕಾದ ಸರಕಾರ, ಜಾತಿ, ಧರ್ಮ, ವರ್ಣ , ಲಿಂಗ ಬೇಧವಿಲ್ಲದೆ ಅವರವರ ಹಕ್ಕನ್ನು ನೀಡಬೇಕಾದ ಸರಕಾರ, ಮರ್ದಿತನಿಗೆ ನ್ಯಾಯ ಮತ್ತು ಭದ್ರತೆಯನ್ನು ನೀಡಬೇಕಾದ ಸರಕಾರ, ನ್ಯಾಯಕ್ಕಾಗಿ ಮೊರೆಯಿಟ್ಟರೆ ಪ್ರತಿಭಟಿಸಿದರೆ ಬಲಪ್ರಯೋಗದಿಂದ ಮರ್ದಿಸಿ ದಮನಿಸುತ್ತಿದೆ. ಸರಕಾರ, ಇಂತಹ ಕಠಿಣ ಪರಿಸ್ಥಿತಿಯ ಮಧ್ಯೆ ಸತ್ಯವಿಶ್ವಾಸಿಯು ಈದುಲ್ ಫಿತ್ರ್‌ನ್ನು ಆಚರಿಸುತ್ತಿದ್ದಾನೆ.

ಮನಸ್ಸನ್ನು ವ್ಯಗ್ರಗೊಳಿಸುವ ಈ ಎಲ್ಲ ಸನ್ನಿವೇಶಗಳ ಮಧ್ಯೆಯೂ ಕೂಡ ಸತ್ಯವಿಶ್ವಾಸಿ ಸಂತಸದಲ್ಲಿದ್ದಾನೆ. ಏಕೆಂದರೆ, ಕಳೆದ ಒಂದು ತಿಂಗಳ ಕಾಲದ ಹಸಿವು, ದಾಹ, ಕಾಮನೆಗಳನ್ನು ಹತ್ತಿಕ್ಕಿದ ಆತನ ನಮಾಝ್, ವ್ರತ, ದ್ಸಿಕ್ರ್, ತಸ್ಬೀಹ್, ತಹ್ಲೀಲ್ ವಗೈರೆ ಎಲ್ಲ ಸತ್ಕರ್ಮಗಳ ಸ್ವೀಕೃತಿಯ ಸಂತಸದಲ್ಲಿದ್ದಾನೆ ಆತ.

**ಪ್ರವಾದಿ(ಸ) ಹೇಳಿದರು- ''ಅಲ್ಲಾಹನು ಹೇಳುತ್ತಾನೆ, ಉಪವಾಸವು ನನಗೇ ಇರುವುದು. ಅದಕ್ಕೆ ಪ್ರತಿಫಲ ನೀಡುವವನೂ ನಾನೇ ಆಗಿರುತ್ತೇನೆ''.**

ಇದು ಉಪವಾಸ ವ್ರತದ ಘನತೆ ಮತ್ತು ಗಾಂಭೀರ್ಯತೆಯನ್ನು ಎತ್ತಿ ತೋರಿಸುತ್ತದೆ. ಅಂತಹ ವಿಶಿಷ್ಟ ಕರ್ಮವನ್ನು ಆಚರಿಸಿ ಒಡೆಯನ ಸಂತೃಪ್ತಿಯನ್ನು ಗಳಿಸಿಕೊಂಡ ವಿಶ್ವಾಸಿಗೆ ಈದುಲ್ ಫಿತ್ರ್ ದಿನದಲ್ಲಿ ಸಂತೋಷವನ್ನಾಚರಿಸದೇ ಇರಲು ಅದ್ಹೇಗೆ ಸಾಧ್ಯ? ಆದ್ದರಿಂದಲೇ ಅಲ್ಲಾಹನು ಸಂತೋಷಾಚರಣೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ಅಂದು ಉಪವಾಸವನ್ನು ನಿಷಿದ್ಧಗೊಳಿಸಿದನು. ಅಂದರೆ ಸಂತೋಷ ಸಂಭ್ರಮಕ್ಕೆ ತಡೆಯಾಗುವ ಯಾವುದೇ ವಿಚಾರ ಅಂದು ಇರಲೇಬಾರದು. **ಪ್ರವಾದಿ(ಸ) ಹೇಳಿದರು- ಈದುಲ್ ಫಿತ್ರ್ ತಿನ್ನುವ, ಕುಡಿಯುವ, ಸಂತೋಷ ಪಡುವ ದಿನವಾಗಿದೆ''.**

ಈ ಸಂತೋಷವು ಮುಸ್ಲಿಮ್ ಸಮಾಜದಲ್ಲಿ ವ್ಯಾಪಕಗೊಳಿಸಲು ಇಸ್ಲಾಮ್ ಇನ್ನಷ್ಟು ಪ್ರಾಯೋಗಿಕ ರೂಪವನ್ನು ನೀಡಿತು. ಅದುವೇ ಕಡ್ಡಾಯ ಫಿತ್ರ್ ಝಕಾತ್. ಆ ದಿನದ ತನ್ನ ಭಕ್ಷ್ಯ ಸಾಮಗ್ರಿಗಳಿಗಿಂತ ಮಿಕ್ಕಿ ಇರುವುದನ್ನು ಪ್ರತಿಯೊಬ್ಬನೂ ಕಡ್ಡಾಯವಾಗಿ ನೀಡಿ ಈದುಲ್ ಫಿತ್ರ್‌ನ ಸಂತಸ ಯಾವುದೇ ಓರ್ವ ವಿಶ್ವಾಸಿಗೆ ನಷ್ಟವಾಗದಂತೆ ನೋಡಿಕೊಳ್ಳುವುದನ್ನು ಇಸ್ಲಾಮ್ ನಿಷ್ಕರ್ಷಿಸಿತು.

ಇದು ಮುಸ್ಲಿಮ್ ಸಮಾಜವು ಆಚರಿಸುವ ಈದುಲ್ ಫಿತ್ರ್‌ನ ಶೈಲಿ. ಖಂಡಿತವಾಗಿಯೂ ಇದು ಜಗತ್ತಿನ ಯಾವುದೇ ನಾಗರಿಕ ಸಮಾಜಕ್ಕೆ ಅನುಕರಣಾಯೋಗ್ಯವಾದ ಆಚರಣೆಯಾಗಿದೆ. ಇಲ್ಲಿ ಆತ್ಮಶುದ್ಧಿಯ ಚೈತನ್ಯವಿದೆ. ಇಹಪರ ಗೆಲುವಿನ ಹುಮ್ಮಸ್ಸಿದೆ. ಮಾನಸಿಕ ಶಾಂತಿಯಿದೆ. ಅಲ್ಲಿ ಯಾವನೇ ಓರ್ವ ದುಗುಡದಿಂದಿಲ್ಲ. ಇಂತಹ ಸಮಾಜದ ನಿರ್ಮಾಣವೇ ಇಸ್ಲಾಮಿನ ಬೇಡಿಕೆ. ಸತ್ಯವಿಶ್ವಾಸಿಗಳು ಅಂತಹ ಬದುಕನ್ನು ಬಯಸುತ್ತಾರೆ.

ಮಾನವನ ಬದುಕು ಧಾರ್ಮಿಕ, ಲೌಕಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಹಕ್ಕುಗಳು ಯಾವುದೇ ಅಡೆತಡೆಯಿರದೆ ಲಭ್ಯವಾಗಲು ಪ್ರತಿಯೋರ್ವನೂ ಬಯಸುತ್ತಾನೆ. ಅದು ಒಂದು ನ್ಯಾಯವಂತ ಸರಕಾರದಿಂದ ಮಾತ್ರ ಸಾಧ್ಯ. ಭ್ರಷ್ಟ, ದುಷ್ಟ, ಪಕ್ಷಪಾತವನ್ನು ತೋರುವ ಸರಕಾರಕ್ಕೆ ಈ ರೀತಿಯ ಹಕ್ಕುಗಳನ್ನು ಒದಗಿಸಿಕೊಡಲು ಸಾಧ್ಯವಾಗದು.

ಈ ಹದೀಸಿನಲ್ಲಿ ಉಲ್ಲೇಖಿಸಿದಂತೆ ನ್ಯಾಯವಂತನಾದ ಅಧಿಕಾರಿಯ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸುತ್ತಾನೆ. ಜಗತ್ತನ್ನಾಳುವ ಯಾವುದೇ ಸರಕಾರಗಳಿರಲಿ ಶಕ್ತಿಗಳೇ ಇರಲಿ, ಅವು ನಾಗರಿಕನಿಗೆ ಒಳಿತನ್ನು ಬಯಸುವ ವ್ಯವಸ್ಥೆಯಾಗಬೇಕು. ಆದರೆ ಬದುಕುವ ಹಕ್ಕನ್ನೂ ನಿರಾಕರಿಸಲ್ಪಡುವ ಶಕ್ತಿಗಳು ವಿವಿಧ ರೀತಿಗಳಿಂದ ನಾಗರಿಕರ ಹಕ್ಕುಗಳನ್ನು ದಮನಿಸಿ ಅವರ ಬದುಕನ್ನೇ ದುಸ್ತರಗೊಳಿಸುವಂತೆ ಮಾಡಿದರೆ ಅಂತಹ ದುಷ್ಟ ವ್ಯಕ್ತಿ - ಶಕ್ತಿಗಳ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸಿಯಾನೆ?

ಜಗತ್ತನ್ನೇ ಆಳಲು ಹೊರಟ ಪೌರಾಣಿಕ ಶಕ್ತಿಗಳು ಜಗತ್ತಿನಲ್ಲಿ ಕ್ಷೋಭೆಯನ್ನು ಹರಡಿದಾಗ ಅಂತಹ ಶಕ್ತಿಗಳನ್ನು ವಿವಿಧ ರೀತಿಯಲ್ಲಿ ಶಿಕ್ಷಿಸಿ ನಾಶಪಡಿಸಿದ ಅಲ್ಲಾಹನು, ಅವೆಲ್ಲವೂ ಒಂದು ಪಾಠವೆಂಬಂತೆ ಜಗತ್ತಿನ ಮುಂದೆ ಅವಶೇಷಗಳನ್ನೂ, ಕುರುಹುಗಳನ್ನೂ ಬಾಕಿಯುಳಿಸಿದನು. ಇದೀಗ ಆಧುನಿಕ ಶಕ್ತಿಗಳು ಸರ್ವಾಧಿಕಾರದಿಂದ ಮತ್ತು ತನ್ನ ಧನ, ಬಾಹು, ಸೈನಿಕ ಬಲದಿಂದ ಜಗತ್ತನ್ನೇ ಆಳಲು ಹೊರಟು ಇದೀಗ ಜಗತ್ತಿನ ಕಣ್ಣ ಮುಂದೆ ಆರ್ಥಿಕವಾಗಿ, ನೈತಿಕವಾಗಿ, ರಾಜಕೀಯವಾಗಿ ನೆಲಕಚ್ಚುತ್ತಿರುವುದಕ್ಕೆ ಇಡೀ ಜಗತ್ತು ಸಾಕ್ಷಿಯಾಗುತ್ತಿದೆ. ಕಾರಣ, ಈ ಮಂದಿಯ ಅನಾಗರಿಕ ಕಾನೂನು, ಒಪ್ಪಂದ, ಕರಾರುಗಳು ದಿನದಿಂದ ದಿನಕ್ಕೆ ದುರ್ಬಲವಾಗುತ್ತಾ ಹೋಗುತ್ತಿದೆ. ಈ ಶಕ್ತಿಗಳು ಅನ್ಯಾಯದ ಪ್ರತೀಕಗಳಂತಿರುವುದರಿಂದ ಇವರ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸಲೇ ಇಲ್ಲ.

ಕೊನೆಯ ಹದೀಸಿನಲ್ಲಿ ಪ್ರಸ್ತಾಪಗೊಂಡ ಮರ್ದಿತನ ಪ್ರಾರ್ಥನೆ. ಮರ್ದಿತನ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸಿಯೇ ಬಿಡುವನು.

ಜನಬಲ, ಬಾಹುಬಲ, ಅಧಿಕಾರ ಬಲ, ಆಯುಧ ಬಲದಿಂದ ಒಂದೊಮ್ಮೆ ದುರ್ಬಲರನ್ನು ಶೋಷಿಸಲು ಮರ್ದಿಸಲು ಸಾಧ್ಯವಾಗಬಹುದು. ಆದರೆ ಇದ್ದಬಿದ್ದ ಶಕ್ತಿಯನ್ನು ಪ್ರಯೋಗಿಸಿ ಅದನ್ನೆದುರಿಸುವುದೇ ಮಾನವೀಯ ಧರ್ಮ. ಆದರೂ ಕೂಡ ಎಲ್ಲ ಕಾಲಗಳಲ್ಲೂ ದುಷ್ಟಶಕ್ತಿಗಳನ್ನು ವಿರೋಧಿಸುವ ಶಕ್ತಿ ದುರ್ಬಲರಲ್ಲಿ ಇರಬೇಕೆಂದಿಲ್ಲ. ಇದ್ದರೂ ಅದು ಬೇಕಾದದ್ದಷ್ಟು ಇರಲಾರದು. ಅಂತಹ ವೇಳೆ ಅಲ್ಲಿ ಲಿಂಗ, ವರ್ಣ, ಧರ್ಮ, ವರ್ಗ ಬೇಧವಿಲ್ಲದ ಮರ್ದಿತರ ಪ್ರಾರ್ಥನೆಯನ್ನು ಅಲ್ಲಾಹನು ಖಂಡಿತ ಸ್ವೀಕರಿಸುವನು. ಯಾವ ಕಾಲದಲ್ಲೂ ಕೂಡ ಶಾಶ್ವತವಾಗಿ ದುಷ್ಟಶಕ್ತಿಗಳು ವಿಜೃಂಭಿಸಿದ ಉದಾಹರಣೆ ಇತಿಹಾಸದಲ್ಲಿ ಎಲ್ಲೂ ದಾಖಲಿಸಲ್ಪಟ್ಟಿಲ್ಲ. ಆದ್ದರಿಂದ ಅನ್ಯಾಯವನ್ನು ತನಗೆ ದೇವನು ನೀಡಿದ ಶಕ್ತಿ ಯುಕ್ತಿಯನ್ನೆಲ್ಲ ಉಪಯೋಗಿಸಿ ವಿರೋಧಿಸುವುದು ನಾಗರಿಕತೆಯಲ್ಲಿ ನಂಬಿಕೆಯಿಟ್ಟ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರುತ್ತದೆ.

ನೈಜ ಒಡೆಯನನ್ನು ಆರಾಧಿಸಿ ನಿರೀಕ್ಷೆಯಿಟ್ಟು ಬದುಕಿ ಕಣ್ಣ ಮುಂದೆ ನಡೆಯುವ ಅನ್ಯಾಯ, ತಾರತಮ್ಯ, ಅಕ್ರಮಗಳನ್ನು ವಿರೋಧಿಸಿ ಅದರ ವಿರುದ್ಧ ಜನಶಕ್ತಿಯನ್ನು ಒಗ್ಗೂಡಿಸುವುದು ಮತ್ತು ಕೊನೆಯದಾಗಿ ಎಲ್ಲವನ್ನೂ ನೈಜ ಒಡೆಯನಾದ ಅಲ್ಲಾಹನ ಮೇಲೆ ಭಾರವಿರಿಸಿ ಪ್ರಾರ್ಥಿಸಬೇಕೆಂದಲ್ಲವೇ ಈ ಹದೀಸಿನ ತಾತ್ಪರ್ಯ.

ನಾಡಿನ ಸಮಸ್ತ ಜನತೆಗೆ ಈದುಲ್ ಫಿತ್ರ್‌ನ ಶುಭಾಶಯಗಳು.

■ ಅರಬಿ ಮೂಲ: ಸುವರುನ್ ಮಿನ್ ಹಯಾತಿಸ್ಸಹಾಬಾ
ಮಳಯಾಳಂ: ಡಾ.ಎ.ಐ.ವಿಲಾಯತುಲ್ಲಾ
ಕನ್ನಡಕ್ಕೆ: ಮುರ್ಷಿದ್

# ಉಮೈರುಬ್‌ನು ವಹ್‌ಬ್(ರ)

*''ಉಮೈರುಬ್‌ನು ವಹ್‌ಬ್ ಸ್ವಂತ ಮಕ್ಕಳಿಗಿಂತ ನನಗೆ ಹೆಚ್ಚು ಪ್ರಿಯನು-ಉಮರುಬ್‌ನುಲ್ ಖತ್ತಾಬ್(ರ)*

★★★

ಉಮೈರುಬ್‌ನು ವಹ್‌ಬ್ ಅಲ್‌ಜುಮಹೀ ಬದ್ರ್ ಯುದ್ಧದಲ್ಲಿ ಶತ್ರು ಪಾಳಯದಲ್ಲಿದ್ದರು. ಯುದ್ಧ ಕಳೆದು ಹೇಳತಕ್ಕಂತಹ ಗಾಯಗಳೇನೂ ಇಲ್ಲದೆ ಮನೆಗೆ ಮರಳಿದ್ದರು. ಆದರೆ, ಅವರ ಮಗ ವಹ್‌ಬ್ ಮುಸ್ಲಿಮರ ಕೈಯಲ್ಲಿ ಖೈದಿಯಾಗಿ ಬಂಧನದಲ್ಲಿದ್ದರು. ಇದನ್ನು ಮೊದಲೇ ಅವರು ಅಂದಾಜು ಮಾಡಿದ್ದರು. ತಾನು ನೆಬಿಯವರೊಂದಿಗೆ ತೋರಿದ ಕ್ರೌರ್ಯ ಮತ್ತು ಉಪಟಳಗಳ ಕಾರಣದಿಂದ ತನ್ನ ಮಗನನ್ನು ಮುಸ್ಲಿಮರು ಕ್ರೂರವಾಗಿ ಮರ್ದಿಸುವರೆಂದು ಅವರು ಭಯಪಟ್ಟಿದ್ದರು. ಪ್ರವಾದಿ(ಸ)ಮತ್ತು ಅನುಚರರೊಂದಿಗೆ ಅಷ್ಟೊಂದು ಕ್ರೌರ್ಯವನ್ನು ಅವರು ತೋರಿದ್ದರು.

ಒಂದು ಪ್ರಭಾತ ವೇಳೆಯಲ್ಲಿ ಉಮೈರ್ ಮಸ್ಜಿದುಲ್ ಹರಂನ ಕಡೆಗೆ ನಡೆದುಕೊಂಡು ಹೋಗುತ್ತಿದ್ದರು. ಕಅಬಾ ಪ್ರದಕ್ಷಿಣೆ ಮತ್ತು ಪ್ರಿಯ ವಿಗ್ರಹಗಳನ್ನು ವಂದಿಸುವುದಾಗಿತ್ತು ಅವರ ಉದ್ದೇಶ. ಸೂರ್ಯ ಅದಾಗಲೇ ಮೇಲೇರುತ್ತಿದ್ದ. ಮಸ್ಜಿದುಲ್ ಹರಂಗೆ ತಲುಪಿದಾಗ ಸಫ್‌ವಾನುಬ್‌ನು ಉಮಯ್ಯ ಕಅಬಾಲಯದ ಹಿಜ್‌ರ್ ಇಸ್ಮಾಯೀಲ್ ಬಳಿ ಕುಳಿತಿದ್ದನ್ನು ಉಮೈರ್ ನೋಡಿದರು. ಆ ಕಡೆ ನಡೆದುಕೊಂಡು ಹೋಗುವಾಗ ಅವರು ನಮಸ್ಕರಿಸಿದರು. ''ಕುರೈಷಿಗಳ ನೇತಾರರೇ ತಮಗೆ ಸುಪ್ರಭಾತ!

''ಅಬೂವಹ್‌ಬ್, ತಮಗೂ ಸುಪ್ರಭಾತ!

ಹತ್ತಿರ ಬನ್ನಿ ನಮಗೆ ಒಂದಿನಿತು ಮಾತನಾಡೋಣ''- ಸಫ್‌ವಾನ್ ಹೇಳಿದರು.

ಉಮೈರ್ ಮತ್ತು ಸಫ್‌ವಾನ್ ಇಬ್ಬರೂ ಮಾತನಾಡತೊಡಗಿದರು. ಬದ್ರ್ ಯುದ್ಧದ ಕುರಿತಾಗಿತ್ತು ಮಾತುಕತೆ. ಬದ್‌ರ್‌ನಲ್ಲಿ ಅನುಭವಿಸಬೇಕಾಗಿ ಬಂದ ದುರಂತವನ್ನು ಮೆಲುಕು ಹಾಕುತ್ತಾ ಅವರು ಮಾತನಾಡುತ್ತಿದ್ದರು. ಬದ್ರ್‌ನಲ್ಲಿ ಮುಸ್ಲಿಮರ ಕೈಯಲ್ಲಿ ಸಿಕ್ಕಿಹಾಕಿಕೊಂಡು ಮತ್ತು ಮುಸ್ಲಿಮರ ಖಡ್ಗಗಳಿಗೆ ಬಲಿಯಾಗಿ ಕೊನೆಗೆ ಅಲ್‌ಖಲೀಬ್ ಎಂಬ ಹೆಸರಿನ ಬದ್ರ್‌ನ ಪಾಳುಬಾವಿಯಲ್ಲಿ ಎಸೆಯಲ್ಪಟ್ಟ ಖುರೈಷಿ ಪ್ರಮುಖರ ವರೆಗೆ ಮಾತುಕತೆ ಮುಂದುವರಿಯಿತು. ಒಂದು ದೊಡ್ಡ ನಿಟ್ಟುಸಿರಿನೊಂದಿಗೆ ಸಫ್‌ವಾನ್ ಹೇಳಿದರು.

''ಇಲ್ಲ ಅವರ ನಂತರವೂ ಜೀವನದಲ್ಲಿ ಏನಾದರೊಂದು ಹಿತವು ಉಂಟಾಗಬಹುದು.''

''ತಾವು ಹೇಳಿದ್ದು ಸರಿ.'' ಅಲ್ಪ ವೇಳೆಯ ನಿಶ್ಶಬ್ದದ ನಂತರ ಉಮೈರ್ ಪ್ರತಿಕ್ರಿಯಿಸಿದರು. ''ಕಅಬಾಲಯದ ಒಡೆಯನ ಮೇಲಾಣೆ, ಕೊಟ್ಟು ತೀರಿಸಬೇಕಾದ ಸಾಲ ಮತ್ತು ಏನಾದರೂ ಸಂಭವಿಸಿದರೆ ತೊಂದರೆಗೊಳಗಾಗುವ ಪತ್ನಿ ಮಕ್ಕಳನ್ನು ಭಯಪಡದೇ ಇರುತ್ತಿದ್ದರೆ ನಾನು ಹೋಗಿ ಮುಹಮ್ಮದನ ಕತೆ ಮುಗಿಸುತ್ತಿದ್ದೆ. ನಂತರ ಆತನಿಂದ ಯಾವುದೇ ರೀತಿಯ ಕಷ್ಟ ತೊಂದರೆಗಳು ಉಂಟಾಗಲಾರದು.''

ನಂತರ ಶಾಂತಸ್ವರದಲ್ಲಿ ಹೀಗೆಂದರು:

''ನನ್ನ ಮಗ ವಹಬ್ ಅವರ ಕೈಯಲ್ಲಿ ಯುದ್ಧ ಖೈದಿಯಾಗಿದ್ದಾನಲ್ಲವೆ? ಆದುದರಿಂದ ನಾನು ಮದೀನಾಗಿ ಹೋದರೆ ಅವರಿಗೇನೂ ಸಂಶಯ ಬರಲಾರದು.

ಉಮೈರುಬ್‌ನು ವಹ್‌ಬ್ ಹೇಳಿದ್ದು ಸರಿ ಎಂದು ಸಫ್‌ವಾನ್ ಬಿನ್ ಉಮಯ್ಯನಿಗೆ ತೋರಿತು. ಅವಕಾಶವನ್ನು ಕಳೆದುಕೊಳ್ಳಲು

*ಆತ ಮುಂದುವರಿದು: ''ಅಲ್ಲಾಹನ ದೂತರೇ ಆಕಾಶದಿಂದ ನಮಗಾಗಿ ತಾವುಗಳು ಕೊಂಡು ತಂದ ವೃತ್ತಾಂತಗಳು ಮತ್ತು ದಿವ್ಯ ಸಂದೇಶಗಳನ್ನು ನಾವು ನಿರಾಕರಿಸಿದೆವು. ಆದರೆ ನಾನು ಮತ್ತು ಸಫ್‌ವಾನ್ ನಡೆಸಿದ ಮಾತುಕತೆ ನನಗೂ, ಸಫ್‌ವಾನ್‌ಗೂ ಬಿಟ್ಟು ಬೇರೆ ಯಾರಿಗೂ ತಿಳಿಯದು. ಆದರೆ ಅದನ್ನು ಅಲ್ಲಾಹನು ನಿಮಗೆ ತಲುಪಿಸಿದನೆಂದು ನನಗೀಗ ತಿಳಿಯಿತು. ನನ್ನನ್ನು ನಿಮ್ಮ ಬಳಿ ತಲುಪಿಸಿದ ಅಲ್ಲಾಹನಿಗೆ ಸರ್ವಸ್ತುತಿಗಳು. ನನ್ನನ್ನು ಇಸ್ಲಾಮಿನೆಡೆಗೆ ಒಯ್ಯಲು ಅಲ್ಲಾಹನು ಈ ರೀತಿ ಮಾಡಿದನು.''*

ಅವರಿಗೂ ಇಷ್ಟವಿಲ್ಲ. ಆತ ಉಮೈರರ ಮುಂದೆ ತಿರುಗಿ ನಿಂತು ಹೇಳಿದನು:

''ಉಮೈರ್, ತಮ್ಮ ಸಂಪೂರ್ಣ ಸಾಲವನ್ನು ನಾನು ವಹಿಸಿಕೊಳ್ಳುವೆನು. ನಂತರ ನಿಮ್ಮ ಮನೆಮಂದಿಯ ವಿಚಾರ. ನಾನು ಬದುಕಿರುವ ವರೆಗೆ ನನ್ನ ಕುಟುಂಬವನ್ನು ಸಂರಕ್ಷಿಸುವಂತೆ ಅವರನ್ನೂ ಸಂರಕ್ಷಿಸುವೆನು. ನನಗೆ ತುಂಬಾ ಸಂಪತ್ತಿದೆ. ನಾನು ಅವರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳಬಲ್ಲೆ.''

ಹಾಗಿದ್ದರೆ ಈ ವಿಚಾರವನ್ನು ನಾವು ತುಂಬಾ ರಹಸ್ಯವಾಗಿ ಇಟ್ಟುಕೊಳ್ಳಬೇಕು. ಇದನ್ನು ಯಾರೂ ತಿಳಿಯಬಾರದು. ''ಈ ವಿಚಾರದಲ್ಲಿ ನಿಮಗೆ ನಾನು ಖಾತರಿಯನ್ನು ನೀಡುವೆನು.

ಮಸ್ಜಿದುಲ್ ಹರಾಂನ ಪರಿಸರದಿಂದೆದ್ದು ನಡೆಯಬೇಕಾದರೆ ಉಮೈರ್‌ರವರ ಮನದಲ್ಲಿ ಪ್ರವಾದಿ (ಸ)ಯೊಂದಿಗಿರುವ ಪ್ರತೀಕಾರದ ಅಗ್ನಿ ಜ್ವಲಿಸುತ್ತಿತ್ತು. ತನ್ನ ಯೋಜನೆಯನ್ನು ಕೃತಿಗಿಳಿಸುವ ಕುರಿತಾಗಿತ್ತು ಅವರ ಮನದ ತುಂಬಾ ಯೋಚನೆ. ತನ್ನ ಪ್ರಯಾಣದ ಕುರಿತು ಯಾರಿಗಾದರೂ ಏನಾದರೂ ಸಂಶಯವಿರಬಹುದೆಂಬ ಯಾವ ಆಶಂಕೆಯೂ ಅವರಿಗಿರಲಿಲ್ಲ. ಯುದ್ಧ ಖೈದಿಗಳಾಗಿ ಮದೀನದಲ್ಲಿರುವವರ ಸಂಬಂಧಿಕರು ಹೆಚ್ಚಿನ ವೇಳೆ ಯಸ್ರಿಬಾಗೆ ಬಂದು ಹೋಗುತ್ತಿದ್ದರು. ದಂಡವನ್ನು ಪಾವತಿಸಿ ಅವರನ್ನು ಮುಸ್ಲಿಮರ ಕೈಯಿಂದ ರಕ್ಷಿಸುವ ತೀವ್ರ ಪ್ರಯತ್ನದಲ್ಲಿ ಅವರಿದ್ದರು.

ಉಮೈರ್ ತನ್ನ ಖಡ್ಗವನ್ನು ಹರಿತಗೊಳಿಸಿ ಅದರಲ್ಲಿ ವಿಷವನ್ನು ಲೇಪಿಸಿ ತಯಾರುಗೊಳಿಸಿದರು. ಪ್ರಯಾಣಕ್ಕೆ ಬೇಕಾದ ವಾಹನವನ್ನು ಸಜ್ಜುಗೊಳಿಸಿದರು. ತಯಾರಿಗಳನ್ನೆಲ್ಲಾ ಪೂರ್ತಿಗೊಳಿಸಿದ ನಂತರ ಅವರು ವಾಹನವನ್ನೇರಿ ಮದೀನಾದ ಕಡೆಗೆ ಪ್ರಯಾಣ ಬೆಳೆಸಿದರು. ಅವರ ಮನದ ತುಂಬಾ ದುರಾಲೋಚನೆಗಳೂ ದುಷ್ಟ ಯೋಜನೆಗಳೂ ತುಂಬಿದ್ದವು.

ಮದೀನಾ ತಲುಪಿದ ಉಮೈರ್ ನೇರವಾಗಿ ಮಸ್ಜಿದುನ್ನಬವೀ ಕಡೆಗೆ ಹೋದರು. ಪ್ರವಾದಿ(ಸ) ಅವರ ಗುರಿಯಾಗಿದ್ದರು. ಉಮೈರ್ ಮಸ್ಜಿದ್‌ನ ಬಾಗಿಲ ಬಳಿ ತಲುಪಿ ಒಂಟೆಯನ್ನು ಮಂಡಿಯೂರಿಸಿ ತಾನು ಕೆಳಗಿಳಿದರು.

ಆ ವೇಳೆ ಉಮರ್(ರ) ಮತ್ತಿತರ ಸಹಾಬಿಗಳು ಅಲ್ಲಿ ಕುಳಿತಿದ್ದರು. ಅವರೂ ಸಹ ಬದ್ರ್ ಯುದ್ಧದ ಘಟನೆಗಳ ಕುರಿತು ಮೆಲುಕು ಹಾಕುತ್ತಿದ್ದರು. ಖುರೈಷಿ ಪಾಳಯದಿಂದ ಕೊಲ್ಲಲ್ಪಟ್ಟ ಮತ್ತು ಬಂಧಿಗಳಾದವರ ಕುರಿತೂ ಮಾತು ಸಾಗಿದ್ದವು. ಅನ್ಸಾರ್ ಮುಹಾಜಿರ್‌ಗಳು ತೋರಿದ ಕೆಚ್ಚೆದೆಯ ಕುರಿತೂ ಚರ್ಚಿಸಲ್ಪಟ್ಟಿತ್ತು. ಬದ್ರ್‌ನಲ್ಲಿ ಅಲ್ಲಾಹನು ತೋರಿದ ಪೂರ್ವ ಸಹಾಯ ಮತ್ತು ವೈರಿಗಳು ಅನುಭವಿಸಿದ ಸೋಲು ಮತ್ತು ದುರಂತ ಸಂಕಷ್ಟಗಳೂ ಅವರ ನೆನಪಿನಂಗಳದಲ್ಲಿ ಹರಿದು ಬಂತು.

ಮಾತುಕತೆಯ ಮಧ್ಯೆ ಉಮರ್(ರ) ಕಾಕತಾಳೀಯವಾಗಿ ಹಿಂದಿರುಗಿ ನೋಡಿದರು. ಆದಾಗಲೇ ಖಡ್ಗಧಾರಿ ಉಮೈರ್ ಬಿನ್ ವಹ್‌ಬ್ ಒಂಟೆಯಿಂದಿಳಿದು ಮಸ್ಜಿದುನ್ನಬವಿಯ ಕಡೆಗೆ ನಡೆದು ಬರುತ್ತಿರುವುದನ್ನು ಅವರು ಕಂಡರು. ಅಷ್ಟರಲ್ಲೇ ರಭಸದಿಂದ ಮೇಲೆದ್ದ ಉಮರ್(ರ)ಹೀಗೆಂದರು:

''ಈ ನಾಯಿ, ಅಲ್ಲಾಹನ ಶತ್ರುವಾದ ಉಮೈರುಬ್‌ನು ವಹ್‌ಬ್ ಅಲ್ಲವೇ? ಅಲ್ಲಾಹನಾಣೆ, ಕೆಡುಕು ಮತ್ತು ದುಷ್ಟ ಉದ್ದೇಶದಿಂದ ಆತ ಬಂದಿದ್ದಾನೆಂಬುದು ಖಂಡಿತ. ಮಕ್ಕಾದಲ್ಲಿರುವ ವೇಳೆ ಜನರನ್ನು ನಮ್ಮ ವಿರುದ್ಧ ಎತ್ತಿಕಟ್ಟುವುದರಲ್ಲಿ ಈತ ತಲ್ಲೀನನಾಗಿದ್ದ. ಬದ್ರ್ ವೇಳೆಯ ವರೆಗೆ ಆತ ಅವರಿಗಾಗಿ ಗೂಢಚರ್ಯೆ ಮಾಡುತ್ತಲಿದ್ದ.''

ನಂತರ ಸಂಗಡಿಗರೊಂದಿಗೆ ಉಮರ್(ರ) ಹೇಳಿದರು. ''ತಕ್ಷಣ ಪ್ರವಾದಿ (ಸ) ಬಳಿ ಹೊರಡಿ. ಅಲ್ಲಿ ಪ್ರವಾದಿ(ಸ)ಯ ಸುತ್ತಲೂ ಸರಿಯಾದ ಬಂದೋಬಸ್ತ್ ಮಾಡಿರಿ. ದುಷ್ಟನಾದ ವಂಚಕ ಪ್ರವಾದಿ(ಸ)ವರ್ಯರನ್ನು ವಂಚಿಸುವ ಭಯವಿದೆ. ಆದುದರಿಂದ ಜಾಗರೂಕರಾಗಿರಿ.''

ನಂತರ ಉಮರ್(ರ) ಪ್ರವಾದಿ (ಸ)ಯ ಬಳಿಗೆ ಲಗುಬಗೆಯಿಂದ ಧಾವಿಸಿದರು. ಪ್ರವಾದಿ(ಸ)ಯೊಂದಿಗೆ ಉಮರ್(ರ) ಹೇಳಿದರು. ''ಅಲ್ಲಾಹನ ಶತ್ರು ಉಮೈರುಬ್‌ನು ವಹ್‌ಬ್ ಖಡ್ಗ ಹಿಡಿದು ಇದೋ ಬಂದಿರುತ್ತಾನೆ. ಖಂಡಿತವಾಗಿಯೂ ಆತ ಬರಿಯ ದುರುದ್ದೇಶದಿಂದ ಬಂದಿದ್ದಾನೆಂದು ನಾನು ಭಾವಿಸುತ್ತೇನೆ.''

ಪ್ರವಾದಿ(ಸ) ಹೇಳಿದರು. ''ಆತನನ್ನು ನನ್ನ ಬಳಿಗೆ ಕಳುಹಿಸಿ ಬಿಡಿ.''

ಉಮರ್ ಫಾರೂಖ್(ರ) ಉಮೈರುಬ್‌ನು ವಹ್‌ಬ್‌ನ ಬಳಿ

ಬಂದು ಆತನ ಕತ್ತಿನ ಪಟ್ಟಿ ಹಿಡಿದು ಬಟ್ಟೆಯೊಳಗೆ ಖಡ್ಗವನ್ನು ಅವಿತಿಟ್ಟ ಸ್ಥಳವನ್ನು ಹಿಡಿದುಕೊಂಡು ಪ್ರವಾದಿ (ಸ)ರವರ ಬಳಿಗೆ ಎಳೆದುಕೊಂಡು ಬಂದರು. ಆ ವೇಳೆ ಪ್ರವಾದಿ (ಸ) ಹೇಳಿದರು. ''ಉಮರ್ ಆತನನ್ನು ಬಿಟ್ಟು ಬಿಡಿ.''

ಉಮರ್(ರ) ಆತನನ್ನು ಬಿಟ್ಟುಬಿಟ್ಟರು. ಆ ವೇಳೆ ಪ್ರವಾದಿ(ಸ) ಹೇಳಿದರು: ''ಉಮರ್, ಆತನ ಬಳಿಯಿಂದ ಸ್ವಲ್ಪ ದೂರ ಸರಿದು ನಿಲ್ಲಿ.''

ಉಮರ್(ರ) ಸ್ವಲ್ಪ ಹಿಂದೆ ಸರಿದು ನಿಂತರು. ನಂತರ ಪ್ರವಾದಿ (ಸ) ಉಮೈರ್ ಬಿನ್ ವಹ್‌ಬ್‌ನ ಕಡೆಗೆ ಮುಖ ಮಾಡಿ ನಿಂತರು. ''ಉಮೈರ್ ಹತ್ತಿರ ಬನ್ನಿ.'' ಪ್ರವಾದಿ (ಸ)ಯ ಬಳಿಗೆ ಬಂದ ಅವರು ಅರಬರ ಪುರಾತನ ರೀತಿಯಲ್ಲಿ ಪ್ರವಾದಿ(ಸ)ಗೆ ನಮಸ್ಕರಿಸಿದರು. ''ತಮಗೆ ಅನುಗ್ರಹೀತವಾದ ಪ್ರಭಾತ!''

ಅದನ್ನು ಕೇಳಿದ ಪ್ರವಾದಿ(ಸ) ಹೇಳಿದರು: ''ಓ ಉಮರ್, ತಮ್ಮ ನಮಸ್ಕರಿಸುವ ರೀತಿಗಿಂತ ಉತ್ತಮವಾಗಿ ನಮಸ್ಕರಿಸುವ ರೀತಿಯನ್ನು ಅಲ್ಲಾಹನು ನಮಗೆ ಕಲಿಸಿ ಅನುಗ್ರಹಿಸಿರುವನು. ಅದು ಶಾಂತಿ ಸಮಾಧಾನದ ಅಭಿಸಂಬೋಧನೆಯಾಗಿದೆ.''

ಉಮೈರ್ ಹೇಳಿದರು: ''ಅಲ್ಲಾಹನ ಮೇಲಾಣೆ, ನಮ್ಮ ಅಭಿಸಂಬೋಧನಾ ರೀತಿಗಿಂತ ಹೆಚ್ಚಿನ ವ್ಯತ್ಯಾಸವೇನೂ ನಿಮ್ಮ ಅಭಿಸಂಬೋಧನಾ ರೀತಿಯಲ್ಲಿ ಇಲ್ಲವಲ್ಲಾ. ಖಂಡಿತವಾಗಿಯೂ ತಮ್ಮ ಅಭಿಸಂಬೋಧನಾ ರೀತಿ ಒಂದು ಚರ್ಚಾ ವಿಷಯವಾಗಿದೆ.

ಪ್ರವಾದಿ(ಸ) ನಂತರ ಕೇಳಿದರು. ''ಉಮೈರ್, ತಾವುಗಳು ಬಂದ ವಿಚಾರ.''

''ತಮ್ಮ ಕೈಯಲ್ಲಿ ಬಂಧಿಗಳಾಗಿರುವವರ ಬಿಡುಗಡೆಗಾಗಿ ಆಗ್ರಹಿಸಲು. ಆ ಬಗ್ಗೆ ತಾವುಗಳು ಒಂದು ಗೌರವಪೂರ್ಣ ನಿಲುವನ್ನು ಸ್ವೀಕರಿಸಬೇಕು.

''ಹಾಗಿದ್ದರೆ ನಿಮ್ಮ ಕಂಕುಳಲ್ಲಿ ಬಚ್ಚಿಟ್ಟ ಖಡ್ಗದ ರಹಸ್ಯ?

ಅಲ್ಲಾಹನು ಈ ಖಡ್ಗವನ್ನು ಶಪಿಸಲಿ. ಬದ್ರ್ ಯುದ್ಧದ ದಿನದಂದು ಇದರಿಂದ ಯಾವುದೇ ರೀತಿಯ ಪ್ರಯೋಜನ ಉಂಟಾಗಲಿಲ್ಲ.''

''ಉಮೈರ್ ನಿಜವಾಗಿಯೂ ನೀವು ಯಾತಕ್ಕಾಗಿ ಬಂದಿರಿ?''

''ನಾನು ಹೇಳಿದ ಮಾತಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ.''

''ಅದಲ್ಲ, ತಾವು ಮತ್ತು ಸಫ್‌ವಾನ್ ಬಿನ್ ಉಮಯ್ಯ ಇಬ್ಬರೂ ಹಿಜ್ರ್ ಇಸ್ಮಾಯೀಲ್ ಬಳಿ ಕುಳಿತು ಬದ್ರ್‌ನಲ್ಲಿ ವಧಿಸಲ್ಪಟ್ಟ 'ಖಲೀಬಿ'ಯಲ್ಲಿ ಎಸೆಯಲ್ಪಟ್ಟ ಖುರೈಷಿಗಳ ಕುರಿತು ನೆನಪಿಸಿಕೊಂಡಿದ್ದರಲ್ಲವೇ?'' ಆ ವೇಳೆ ತಾವು ಹೇಳಿದಿರಲ್ಲ ''ದೊಡ್ಡ ಸಾಲದ ಬಾಧ್ಯತೆ ಮತ್ತು ನನ್ನ ನಂಬಿರುವ ಕುಟುಂಬವು ಇಲ್ಲದೇ ಇರುತ್ತಿದ್ದರೆ ನಾವು ಮುಹಮ್ಮದ್‌ನನ್ನು ಕೊಲ್ಲದೆ ಹಿಂದಿರುಗಲಾರೆನೆಂಬ ದೃಢ ನಿಶ್ಚಯದಿಂದ ನಾನು ಹೊರಡುತ್ತಿದ್ದೆ.'' ತಮ್ಮ ಸಾಲದ ಬಾಧ್ಯತೆಯನ್ನು ಮತ್ತು ಕುಟುಂಬದ ಜವಾಬ್ದಾರಿಯನ್ನು ಸಫ್‌ವಾನ್ ವಹಿಸಿಕೊಂಡಿರುವವರು. ಆ ಪ್ರಕಾರ ನನ್ನನ್ನು ಕೊಲ್ಲುವ ಉದ್ದೇಶದಿಂದ ತಾವು ಹೊರಟು ಬಂದಿದ್ದು. ನಿಜತಾನೆ?''

ಪ್ರವಾದಿ (ಸ) ಈ ರೀತಿಯಾಗಿ ಬಹಿರಂಗಗೊಳಿಸಿದ್ದನ್ನು ಕೇಳಿ ಉಮೈರ್ ಒಂದು ಕ್ಷಣ ಸ್ಥಂಭೀಭೂತರಾದರು. ನಂತರ

*''ಓ ಸಫ್‌ವಾನ್ ತಾನೋರ್ವ ಮಕ್ಕಾದ ಗಣ್ಯವ್ಯಕ್ತಿಯಲ್ಲವೆ. ಮಾತ್ರವಲ್ಲ ಖುರೈಷಿ ಬುದ್ಧಿ ಜೀವಿಗಳ ಗುಂಪಿನಲ್ಲೋರ್ವ. ನೀವು ಉತ್ಸಾಹದಿಂದ ಆರಾಧಿಸುತ್ತಿರುವುದು ಕೆಲವೊಂದು ಶಿಲಾರೂಪಗಳನ್ನಷ್ಟೆ. ಹಾಗೆ ಮಾಡುತ್ತಿರುವುದು ಸರಿಯಾದ ಧಾರ್ಮಿಕ ವಿಚಾರವೆಂದು ನಿಮಗನಿಸುತ್ತಿದೆಯೇ? ಹಾಗಿದ್ದರೆ ಕಿವಿಗೊಟ್ಟು ಕೇಳಿ. ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದೂ ಮುಹಮ್ಮದ್ (ಸ) ಅಲ್ಲಾಹನ ಪ್ರವಾದಿ ಎಂದೂ ನಾನು ಸಾಕ್ಷ್ಯ ವಹಿಸಿಯಾಯಿತು.*

*ಅದರ ನಂತರ ಉಮೈರ್ ಬಿನ್ ವಹ್‌ಬ್(ರ) ಮಕ್ಕಾದ ಜನರನ್ನು ನಿರಂತರ ಇಸ್ಲಾಮಿನೆಡೆಗೆ ಆಹ್ವಾನಿಸುತ್ತಾ ಕೆಲಸದಲ್ಲಿ ತಲ್ಲೀನರಾದರು. ಅಪಾರ ಮಂದಿ ಅವರ ಪ್ರಯತ್ನದ ಫಲವಾಗಿ ಇಸ್ಲಾಮ್ ಸ್ವೀಕರಿಸಿದರು.*

ಒಂದಿನಿತೂ ಸಂಶಯ ಪಡದೆ ಅವರು ಹೇಳಿದರು: ''ಖಂಡಿತವಾಗಿಯೂ ತಾವುಗಳು ಅಲ್ಲಾಹನ ದೂತನೆಂದು ನಾನು ಸಾಕ್ಷ್ಯ ವಹಿಸುತ್ತೇನೆ.''

ಆತ ಮುಂದುವರಿದು: ''ಅಲ್ಲಾಹನ ದೂತರೇ ಆಕಾಶದಿಂದ ನಮಗಾಗಿ ತಾವುಗಳು ಕೊಂಡು ತಂದ ವೃತ್ತಾಂತಗಳು ಮತ್ತು ದಿವ್ಯ ಸಂದೇಶಗಳನ್ನು ನಾವು ನಿರಾಕರಿಸಿದೆವು. ಆದರೆ ನಾನು ಮತ್ತು ಸಫ್‌ವಾನ್ ನಡೆಸಿದ ಮಾತೆಕತೆ ನನಗೂ, ಸಫ್‌ವಾನ್‌ಗೂ ಬಿಟ್ಟು ಬೇರೆ ಯಾರಿಗೂ ತಿಳಿಯದು. ಆದರೆ ಅದನ್ನು ಅಲ್ಲಾಹನು ನಿಮಗೆ ತಲುಪಿಸಿದನೆಂದು ನನಗೀಗ ತಿಳಿಯಿತು. ನನ್ನನ್ನು ನಿಮ್ಮ ಬಳಿ ತಲುಪಿಸಿದ ಅಲ್ಲಾಹನಿಗೆ ಸರ್ವಸ್ತುತಿಗಳು. ನನ್ನನ್ನು ಇಸ್ಲಾಮಿನೆಡೆಗೆ ಒಯ್ಯಲು ಅಲ್ಲಾಹನು ಈ ರೀತಿ ಮಾಡಿದನು.''

''ಅಲ್ಲಾಹನಲ್ಲದೆ ಬೇರಾವುದೇ ಆರಾಧ್ಯನಿಲ್ಲವೆಂದು ಮುಹಮ್ಮದ್(ಸ) ಅಲ್ಲಾಹನ ರಸೂಲರೆಂದು ನಾನು ಸಾಕ್ಷ್ಯ ವಹಿಸುತ್ತೇನೆ'' ಎಂಬ ಸತ್ಯಪ್ರತಿಜ್ಞೆಯನ್ನು ಮಾಡಿ ಅವರು ಇಸ್ಲಾಂ ಸ್ವೀಕರಿಸಿದರು. ನಂತರ ಪ್ರವಾದಿ(ಸ) ಅನುಚರರೊಂದಿಗೆ ಹೇಳಿದರು:

''ನೀವು ಈ ಸಹೋದರನಿಗೆ ದೀನೀ ವಿಚಾರಗಳನ್ನು ಕಲಿಸಿ ಕೊಡಿ. ಅವರಿಗೆ ಕುರ್‌ಆನ್ ಕಲಿಸಿಕೊಡಿ ಮತ್ತು ಅವರ ಬಂಧಿಗಳನ್ನು ಬಿಡುಗಡೆಗೊಳಿಸಿ.''

ಉಮೈರುಬ್‌ನು ವಹ್‌ಬ್ ಇಸ್ಲಾಂ ಸ್ವೀಕರಿಸಿದ್ದನ್ನು ಕೇಳಿ ಮುಸ್ಲಿಮರು ಸಂಭ್ರಮಿಸಿದರು. ಸಂತೋಷದ ಅಲೆಯಲ್ಲಿ ಉಮರ್ ಬಿನ್ ಖತ್ತಾಬ್(ರ) ಈ ರೀತಿ ಹೇಳಿದರು.

''ಪ್ರವಾದಿ (ಸ)ಯವರ ಬಳಿ ಉಮರು ಬಿನ್ ವಹ್‌ಬ್ ಸಾಗಿ ಬಂದಾಗ ಅವರಿಗಿಂತ ಹಂದಿಯೊಂದು ನನಗೆ ಮೆಚ್ಚುಗೆಯಾಗಿತ್ತು. ಆದರೆ ಇಂದು ನನ್ನ ಸ್ವಂತ ಮಕ್ಕಳಿಗಿಂತ ಆತ ನನಗೆ ಮೆಚ್ಚುಗೆಯಾಗಿದ್ದಾರೆ.''

ಇಸ್ಲಾಮ್ ಸ್ವೀಕರಿಸಿದ ಆ ಕ್ಷಣದಿಂದ ಉಮೈರ್(ರ)ರವರ ಬದುಕು ಕ್ರಿಯಾಶೀಲತೆಯಿಂದ ತುಂಬಿತು. ಇಸ್ಲಾಮೀ ಶಿಕ್ಷಣಕ್ಕೆ ಅನುಸಾರವಾಗಿ ಸ್ವತಃ ಸಂಸ್ಕಾರವನ್ನು ಪಡೆಯುತ್ತಾ ಪವಿತ್ರ ಕುರ್‌ಆನಿನ ಪ್ರಕಾಶದಿಂದ ಹೃದಯವನ್ನು ಬೆಳಗಿದರು. ತನ್ನ ಬದುಕಿನ ಅತ್ಯಂತ ಧನ್ಯತೆಯ ಕ್ಷಣಗಳನ್ನು ಜೀವಂತಗೊಳಿಸುವ ಮಧ್ಯೆ ತನ್ನ ಊರಾದ ಮಕ್ಕಾ ಮತ್ತು ಅಲ್ಲಿರುವವನ್ನು ಮರೆತೇ ಬಿಟ್ಟಂತೆ ಇದ್ದರು.

ಅತ್ತ ಮಕ್ಕಾದಲ್ಲಿ ಸಫ್‌ವಾನ್ ಬಿನ್ ಉಮಯ್ಯ ತನ್ನದೇ ಆದ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದನು. ಖುರೈಷಿಗಳ ಸಭೆಯಲ್ಲಿ ಆತ ಹೇಳುವನು: ''ಬದ್ರ್‌ನ ಪರಾಜಯದ ನೆನಪನ್ನು ಅಳಿಸುವ ರೀತಿಯಲ್ಲಿ ಭಾರೀ ವಾರ್ತೆಯೊಂದು ಬರಲಿದೆ. ಆದುದರಿಂದ ಸಂತೋಷಗೊಳ್ಳಿ.''

ಆದರೆ ಸಫ್‌ವಾನ್ ಬಿನ್ ಉಮಯ್ಯ ಕಾದು ನಿಂತದ್ದೇ ಬಂತು. ಇನ್ನಷ್ಟು ಕಾಯಬೇಕಾಗಿ ಬಂದಾಗ ಉಮಯ್ಯನ ಮನಸ್ಸು ಅಸ್ವಸ್ಥಗೊಂಡಿತು. ಬೆಂಕಿಯ ಕೆಂಡದಂತೆ ಅದು ಆತನನ್ನು ಸುಡತೊಡಗಿತು. ಪ್ರಯಾಣಿಕರು ಯಾರೇ ಬರಲಿ ಅವರ ಬಳಿ ನಡೆದು ಉಮೈರ್ ಬಿನ್ ವಹ್‌ಬ್‌ರ ಕುರಿತು ವಿಚಾರಿಸುವನು. ಆದರೆ ಸಮಾಧಾನ ಆಗುವ ಯಾವುದೇ ಮಾತುಗಳು ಅವರಿಂದ ಕೇಳಲೇ ಇಲ್ಲ. ಹೀಗಿರಲು ಓರ್ವ ಪ್ರಯಾಣಿಕ ಮಕ್ಕಾಗೆ ತಲುಪುತ್ತಾನೆ. ಆತ ಸಫ್‌ವಾನ್‌ನೊಂದಿಗೆ ಹೇಳಿದನು: ''ಉಮೈರ್ ಇಸ್ಲಾಂ ಸ್ವೀಕರಿಸಿದರು.''

ಈ ಸುದ್ದಿಯು ಸಫ್‌ವಾನ್‌ರ ಮೇಲೆ ಸಿಡಿಲೆರಗಿದಂತೆ ಇತ್ತು. ಭೂಮಿಯ ಮೇಲಿರುವವರೆಲ್ಲರೂ ಇಸ್ಲಾಂ ಸ್ವೀಕರಿಸಿದರೂ ಉಮೈರ್ ಇಸ್ಲಾಂ ಸ್ವೀಕರಿಸಲಾರರು ಎಂದು ಸಫ್‌ವಾನ್ ಭಾವಿಸಿದ್ದರು. ಆದರೆ ಉಮೈರ್ ಬಿನ್ ವಹ್‌ಬ್‌ರವರು ಮದೀನಾದಲ್ಲಿ ಪ್ರವಾದಿ (ಸ)ಯವರ ಅನುಚರರೊಂದಿಗೆ ಸೇರಿ ಕುರ್‌ಆನ್ ಕಂಠಪಾಠ ಮಾಡುತ್ತಾ, ಧಾರ್ಮಿಕ ಶಿಕ್ಷಣವನ್ನು ಪಡೆಯುತ್ತಾ ಸ್ವಯಂ ಬೆಳವಣಿಗೆಯನ್ನು ಕಂಡರು. ಒಂದು ದಿನ ಉಮೈರ್ (ರ) ಪ್ರವಾದಿ(ಸ)ಯವರ ಬಳಿಗೆ ಬಂದು ಹೀಗೆಂದರು:

''ಅಲ್ಲಾಹನ ದೂತರೆ, ಅಲ್ಲಾಹನ ಪ್ರಕಾಶವನ್ನು ಊದಿ ನಂದಿಸಲು ನಾನು ಜೀವನದ ಹೆಚ್ಚಿನ ವೇಳೆಯನ್ನು ಕಳೆದೆನು. ಇಸ್ಲಾಮ್ ಸ್ವೀಕರಿಸಿದ ಮಂದಿಗೆಲ್ಲಾ ಭಾರೀ ಕಿರುಕುಳವನ್ನು ಕೊಟ್ಟೆನು. ಆದುದರಿಂದ ಮಕ್ಕಾ ನಗರಕ್ಕೆ ಮರಳಲು ಮತ್ತು ಖುರೈಷಿಗಳನ್ನು ಇಸ್ಲಾಮಿನೆಡೆಗೆ ಆಹ್ವಾನಿಸಲು ನನಗೆ ಅನುಮತಿ ನೀಡಬೇಕು. ನನ್ನ ಸಂದೇಶವನ್ನು ಅವರು ಸ್ವೀಕರಿಸುವಂತಿದ್ದರೆ ಅದು ಅವರಿಗೆ ಎಷ್ಟೊಂದು ಒಳಿತು! ಅದಲ್ಲ ಅವರು ಬೆನ್ನು ತಿರುಗಿಸಿ ನಿರಾಕರಿಸಿದರೆ ಈ ಹಿಂದೆ ಅಲ್ಲಾಹನ ಪ್ರವಾದಿಗೂ, ಅನುಚರರಿಗೂ ಕಿರುಕುಳ ನೀಡಿದಂತೆ ನಾನು ಅವರಿಗೆ ಕಿರುಕುಳ ಮತ್ತು ಶಿಕ್ಷೆಯನ್ನು ನೀಡುವೆನು.''

ಇದನ್ನು ಕೇಳಿದ ಪ್ರವಾದಿ(ಸ) ಉಮೈರ್(ರ)ರಿಗೆ ಮಕ್ಕಾಗೆ ಮರಳಲು ಪ್ರವಾದಿ(ಸ) ಸಮ್ಮತಿಸಿದರು. ಮಕ್ಕಾ ತಲುಪಿದ ಉಮೈರ್ ನೇರವಾಗಿ ಸಫ್‌ವಾನ್ ಬಿನ್ ಉಮಯ್ಯರ ಮನೆಗೆ ಕಡೆಗೆ ಹೋದರು. ಸಫ್‌ವಾನ್‌ನ ಮನೆಯ ಬಳಿ ನಿಂತು ಉಮೈರ್ ಈ ರೀತಿ ಕೂಗಿ ಹೇಳಿದರು.

''ಓ ಸಫ್‌ವಾನ್ ತಾನೋರ್ವ ಮಕ್ಕಾದ ಗಣ್ಯವ್ಯಕ್ತಿಯಲ್ಲವೆ. ಮಾತ್ರವಲ್ಲ ಖುರೈಷಿ ಬುದ್ಧಿ ಜೀವಿಗಳ ಗುಂಪಿನಲ್ಲೋರ್ವ. ನೀವು ಉತ್ಸಾಹದಿಂದ ಆರಾಧಿಸುತ್ತಿರುವುದು ಕೆಲವೊಂದು ಶಿಲಾರೂಪಗಳನ್ನಷ್ಟೆ. ಹಾಗೆ ಮಾಡುತ್ತಿರುವುದು ಸರಿಯಾದ ಧಾರ್ಮಿಕ ವಿಚಾರವೆಂದು ನಿಮಗನಿಸುತ್ತಿದೆಯೇ? ಹಾಗಿದ್ದರೆ ಕಿವಿಗೊಟ್ಟು ಕೇಳಿ. ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದೂ ಮುಹಮ್ಮದ್ (ಸ) ಅಲ್ಲಾಹನ ಪ್ರವಾದಿ ಎಂದೂ ನಾನು ಸಾಕ್ಷ್ಯ ವಹಿಸಿಯಾಯಿತು.

ಅದರ ನಂತರ ಉಮೈರ್ ಬಿನ್ ವಹ್‌ಬ್(ರ) ಮಕ್ಕಾದ ಜನರನ್ನು ನಿರಂತರ ಇಸ್ಲಾಮಿನೆಡೆಗೆ ಆಹ್ವಾನಿಸುವ ಕೆಲಸದಲ್ಲಿ ತಲ್ಲೀನರಾದರು. ಅಪಾರ ಮಂದಿ ಅವರ ಪ್ರಯತ್ನದ ಫಲವಾಗಿ ಇಸ್ಲಾಮ್ ಸ್ವೀಕರಿಸಿದರು.

ಉಮೈರ್ (ರ)ರಿಗೆ ಅಲ್ಲಾಹನು ಉದಾರ ಪ್ರತಿಫಲವನ್ನು ನೀಡಲಿ.

# ಪ್ರಚಾರ ವಂಚಿತ ವಿಚಾರಗಳು

■ ಶಾಹಿದಾ ಎ.

ಜಾಗತಿಕ ಮಾಧ್ಯಮವು ಇಂದು ಸಮಾಜದಲ್ಲಿ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ಹೆಚ್ಚು ಪರಿಣಾಮಕಾರಿ ವರದಿಗಳನ್ನು ಪ್ರಕಟಿಸಲು ಪೈಪೋಟಿ ನಡೆಸುತ್ತಿದೆ. ಪರಿಣಾಮಕಾರಿ ವರದಿಗಳೆಂದರೆ ಅವು ಸಮಾಜವನ್ನು ಸುಧಾರಿಸುವ, ನೈತಿಕ ಮೌಲ್ಯವನ್ನು ಜಾಗೃತಗೊಳಿಸುವ ವಿಚಾರಗಳು, ನ್ಯಾಯ, ಮಾನವ ಹಕ್ಕು ಮತ್ತು ಜೀವನ ಮೌಲ್ಯಗಳನ್ನು ಪ್ರತಿಬಿಂಬಿಸುವಂಥದ್ದಲ್ಲ. ಅಪರೂಪವೆಂಬಂತೆ ಮನುಷ್ಯನ ಅಪ್ರತಿಮ ಸಾಧನೆ, ಸಮಾಜ ಸೇವೆಗಳು, ಮಾನವ ಹಕ್ಕು ಕಾಳಜಿ, ಹೋರಾಟಗಳು ಪ್ರಸಾರವಾಗುತ್ತಿರುತ್ತವೆ. ಸಮಾಜದಲ್ಲಿ ಸುಧಾರಣೆ ತರುವ ಹಲವು ವಿಚಾರ, ಸುದ್ದಿಗಳಿದ್ದರೂ ಅದನ್ನು ಬಹಿರಂಗಪಡಿಸಲು ಮತ್ತು ಅಂತಹ ವಿಚಾರಗಳಿಗೆ ಪ್ರಚಾರ ನೀಡಲು ಪೂರ್ವಗ್ರಹ ಪೀಡಿತ ಮತ್ತು ಸ್ವಾರ್ಥ ಮನೋಭಾವದ ಮಾಧ್ಯಮಗಳು ನಿರಾಕರಿಸುತ್ತವೆ. ಅಂತಹ ಸುದ್ದಿಗಳಿಗೆ ಮಾಧ್ಯಮಗಳಲ್ಲಿ ಸ್ಥಳಾವಕಾಶ ಸಿಗದಂತೆ ತಡೆಯೊಡ್ಡಲು ಪೂರ್ವಾಗ್ರಹಪೀಡಿತ ಸ್ಥಾಪಿತಹಿತಾಸಕ್ತಿಗಳು ಹೊಂಚುಹಾಕಿ ಕಾಯುತ್ತಿರುತ್ತವೆ. ಇಂಥದ್ದೊಂದು ಪ್ರಕ್ರಿಯೆಗೆ ಇರಾನ್‌ನಲ್ಲಿ ಇತ್ತೀಚೆಗಿನ ಒಂದು ಘಟನೆ ಹೊಸ ಸೇರ್ಪಡೆಯಷ್ಟೆ.

ಜಗತ್ತಿನಲ್ಲಿ ಇಂದು ಇಸ್ಲಾಮ್ ಧರ್ಮದ ಬಗ್ಗೆ ಅಪಪ್ರಚಾರ ನಡೆಸಿದಷ್ಟು ಬೇರೆ ಯಾವ ಧರ್ಮವನ್ನೂ ಗೊಳಿಸಲಾಗಿಲ್ಲ. ವಿಶೇಷವಾಗಿ ಇಸ್ಲಾಮಿನ ಕಾನೂನು ಹಾಗೂ ಶಿಕ್ಷೆಯ ಬಗ್ಗೆ ಬಹಳಷ್ಟು ಅಪಪ್ರಚಾರಗಳನ್ನು ನಡೆಸಲಾಗುತ್ತದೆ. ಇಸ್ಲಾಮ್ ಹಾಗೂ ಮುಸ್ಲಿಮ್ ರಾಷ್ಟ್ರಗಳ ಕಾನೂನು ವ್ಯವಸ್ಥೆಯ ಬಗ್ಗೆ ಅನಾಗರಿಕರು, ಅಮಾನವೀಯ ಎಂಬಿತ್ಯಾದಿಯಾಗಿ ಪ್ರಚುರಪಡಿಸಲಾಗುತ್ತದೆ. ಆದರೆ ಇಸ್ಲಾಮಿನ ಶಿಕ್ಷಾ ಪದ್ಧತಿಯಿಂದ ಸಮಾಜದಲ್ಲಿ ಯಾವ ರೀತಿಯ ಬದಲಾವಣೆ ಉಂಟಾಗಿದೆ? ಒಂದು ಶಿಕ್ಷೆಯ ಮೂಲಕ ಸಮಾಜದಲ್ಲಿ ಅಪರಾಧ ಕೃತ್ಯಗಳನ್ನು



ಹೇಗೆ ನಿಯಂತ್ರಿಸಲಾಗಿದೆ? ಇತರರು ಪಾಪ ಕೃತ್ಯಗಳಲ್ಲಿ ತೊಡಗದಂತೆ ಹೇಗೆ ಎಚ್ಚರವಹಿಸಲಾಗಿದೆ? ಎಂಬುದರ ಬಗ್ಗೆ ಮಾಧ್ಯಮಗಳು ವಸ್ತುನಿಷ್ಠ ವರದಿಗಳನ್ನು ಪ್ರಕಟಿಸುತ್ತಿಲ್ಲ.

ಇರಾನ್‌ನ ಟೆಹ್ರಾನ್‌ನಲ್ಲಿ 2004ರಲ್ಲಿ ಮಜೀದ್ ಮೊವಾಹಿದೀ ಎಂಬಾತ ಆಮಿನಾ ಬೆಹ್ರಾಮೀ ಎಂಬಾಕೆಯ ಮುಖಕ್ಕೆ ಆ್ಯಸಿಡ್ ಎರಚಿದ. ಇದರಿಂದ ಆಕೆಯು ತನ್ನ ಒಂದು ಕಣ್ಣನ್ನು ಕಳೆದುಕೊಳ್ಳಬೇಕಾಯಿತು. ಮತ್ತು ಸುಂದರಿಯಾಗಿದ್ದ ಆಕೆಯ ಮುಖ ವಿರೂಪಗೊಂಡಿತು. ಮಜೀದ್ ಮೊವಾಹಿದೀಯ ಪ್ರೇಮ ಪ್ರಸ್ತಾಪಕ್ಕೆ ಆಮಿನಾ ಬೆಹ್ರಾಮಿ ತಿರಸ್ಕಾರ ವ್ಯಕ್ತಪಡಿಸಿದ್ದರಿಂದ ಆತ ಈ ಕೃತ್ಯವೆಸಗಿದ್ದ.

ಇಂತಹ ಕೃತ್ಯವು ಮುಂದೆ ಯಾರಿಗೂ ಆಗಬಾರದು. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿ ಆಕೆ ನಿರಂತರ 7 ವರ್ಷಗಳ ಕಾಲ ಕಾನೂನು ಹೋರಾಟ ನಡೆಸಿದಳು. ನ್ಯಾಯಾಲಯವು ಕಣ್ಣಿಗೆ ಕಣ್ಣು ತೀರ್ಪು ನೀಡಿ, ಆರೋಪಿಯ ಕಣ್ಣು ಕೀಳುವಂತೆ ಆದೇಶ ಹೊರಡಿಸಿತು. ಇದು ಆಕೆಯ

*ವಾಸ್ತವದಲ್ಲಿ ಇಸ್ಲಾಮಿನ ಶಿಕ್ಷಾ ನಿಯಮವು ಸಮಾಜದಲ್ಲಿ ಅಪರಾಧ ಕೃತ್ಯಗಳನ್ನು ತಡೆಯುವುದಕ್ಕೆ ಪೂರಕವಾಗಿದೆ. ಆರೋಪಿಯನ್ನು ಕೂಡಲೇ ಕ್ಷಮಿಸುವುದಕ್ಕೂ, ಶಿಕ್ಷೆ ಘೋಷಣೆಯಾದ ನಂತರ ಕ್ಷಮಿಸುವುದಕ್ಕೆ ಬಹಳಷ್ಟು ವ್ಯತ್ಯಾಸವಿದೆ. ಒಂದು ವೇಳೆ ಮಜೀದ್‌ನನ್ನು ಆಕೆ ಮೊದಲೇ ಕ್ಷಮಿಸಿಬಿಟ್ಟಿದ್ದರೆ ಅಪರಾಧಿ ಮನೋಭಾವವುಳ್ಳವರಿಗೆ ಹೆದರಿಕೆ, ಪಶ್ಚಾತ್ತಾಪ ಉಂಟಾಗುವ ಸಾಧ್ಯತೆ ಇರುವುದಿಲ್ಲ. ಅಥವಾ ಇನ್ನಷ್ಟು ಅಪರಾಧ ಕೃತ್ಯಗಳಿಗೆ ಹೇತುವಾಗುವ ಸಾಧ್ಯತೆ ಇತ್ತು. ಇದು ಆಕೆಯ ಸಾಮಾಜಿಕ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ.*

ಕಾನೂನು ಹೋರಾಟಕ್ಕೆ ಸಂದ ಜಯವಾಗಿತ್ತು. ಇಂತಹ ಅಮಾನೀಯ ಕೃತ್ಯ ಎಸಗುವವರಿಗೆ ಇದೊಂದು ಎಚ್ಚರಿಕೆಯೂ ಆಗಿತ್ತು.

ತೀರ್ಪಿನಂತೆ ಶಿಕ್ಷೆ ನೀಡಲು ಇನ್ನೇನು ಕೆಲವೇ ಗಂಟೆ ಇರುವಾಗಲೇ ಇಸ್ಲಾಮಿನ ಕಾನೂನನ್ನು ಗೌರವಿಸುತ್ತಾ, ಕುರ್‌ಆನ್‌ನ ಆಶಯದಂತೆ ಕಣ್ಣಿಗೆ ಕಣ್ಣು ಕೀಳುವುದಕ್ಕಿಂತ ಕ್ಷಮೆಯೇ ಶ್ರೇಷ್ಠ ಎಂಬ ದಿವ್ಯನುಡಿಗೆ ತಲೆಬಾಗಿ ಆಮಿನಾ ಆತನಿಗೆ ಕ್ಷಮಾದಾನ ನೀಡಿದಳು. ಪಶ್ಚಾತ್ತಾಪಪಟ್ಟಿದ್ದ ಮಜೀದ್‌ನನ್ನು ಆಕೆ ಕ್ಷಮಾದಾನ ನೀಡುವ ಮೂಲಕ ಕತ್ತಲಿಗೆ ನೂಕಲ್ಪಡುತ್ತಿದ್ದ ಆತನ ಬದುಕನ್ನು ಬೆಳಕಾಗಿಸಿದಳು.

''ಇಡೀ ಜಗತ್ತು ನಮ್ಮ ದೇಶವನ್ನು ಕುತೂಹಲದಿಂದ ನೋಡುತ್ತಿರುವಾಗ ನಾನು ನನ್ನ ಕ್ಷಮಾದಾನವನ್ನು ನನ್ನ ದೇಶಕ್ಕೆ ಸಮರ್ಪಿಸುತ್ತಿದ್ದೇನೆ'' ಎಂದು ಆಮಿನಾ ಬೆಹ್ರಾಮಿ ಪ್ರತಿಕ್ರಿಯಿಸುತ್ತಾಳೆ. ನೋವಿನ ನಡುವೆಯೂ ಆಕೆಯ ದೇಶಪ್ರೇಮ ಕೂಡ ಪ್ರಶಂಸನೀಯ.

ವಾಸ್ತವದಲ್ಲಿ ಇಸ್ಲಾಮಿನ ಶಿಕ್ಷಾ ನಿಯಮವು ಸಮಾಜದಲ್ಲಿ ಅಪರಾಧ ಕೃತ್ಯಗಳನ್ನು ತಡೆಯುವುದಕ್ಕೆ ಪೂರಕವಾಗಿದೆ. ಆರೋಪಿಯನ್ನು ಕೂಡಲೇ ಕ್ಷಮಿಸುವುದಕ್ಕೂ, ಶಿಕ್ಷೆ ಘೋಷಣೆಯಾದ ನಂತರ ಕ್ಷಮಿಸುವುದಕ್ಕೆ ಬಹಳಷ್ಟು ವ್ಯತ್ಯಾಸವಿದೆ. ಒಂದು ವೇಳೆ ಮಜೀದ್‌ನನ್ನು ಆಕೆ ಮೊದಲೇ ಕ್ಷಮಿಸಿಬಿಟ್ಟಿದ್ದರೆ ಅಪರಾಧಿ ಮನೋಭಾವವುಳ್ಳವರಿಗೆ ಹೆದರಿಕೆ, ಪಶ್ಚಾತ್ತಾಪ ಉಂಟಾಗುವ ಸಾಧ್ಯತೆ ಇರುವುದಿಲ್ಲ. ಅಥವಾ ಇನ್ನಷ್ಟು ಅಪರಾಧ ಕೃತ್ಯಗಳಿಗೆ ಹೇತುವಾಗುವ ಸಾಧ್ಯತೆ ಇತ್ತು. ಇದು ಆಕೆಯ ಸಾಮಾಜಿಕ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ.

ಪ್ರವಾದಿ ಮುಹಮ್ಮದ್(ಸ)ರನ್ನು ಮಕ್ಕಾದ ಜನತೆ ನಿರಂತರ ನಾನಾ ರೀತಿಯಲ್ಲಿ ಪೀಡಿಸುತ್ತಿದ್ದರು. ಮಕ್ಕಾ ವಿಜಯದ ನಂತರ ಅದರ ಮುಯ್ಯಿ ತೀರಿಸಬಹುದಿತ್ತು. ಆದರೆ ಪ್ರವಾದಿ(ಸ)ರವರು ಪ್ರತೀಕಾರದ ಸನ್ನಿವೇಶ ಇದ್ಯಾಗ್ಯೂ ಕ್ಷಮಿಸಿರುವುದು ಅಧಿಕಾರ ಸಾಮರ್ಥ್ಯವಿದ್ದ ಸಂದರ್ಭದಲ್ಲಾಗಿತ್ತು. ಆಮಿನಾ ಬೆಹ್ರಾಮಿ ತನ್ನ ಮೇಲಾದ ಅನ್ಯಾಯದ ವಿರುದ್ಧ ಹೋರಾಡಿ ನ್ಯಾಯ ಸಿಕ್ಕಿದ ಬಳಿಕ ಕ್ಷಮಿಸಿರುವುದು ಎಲ್ಲರಿಗೂ ಪಾಠವಾಗಿದೆ.

ನಮ್ಮ ದೇಶದಲ್ಲಿ ಮಹಿಳೆಯರ ಮೇಲೆ ಅಲ್ಲಲ್ಲಿ ಅತ್ಯಾಚಾರ, ಆ್ಯಸಿಡ್ ಎರಚುವಿಕೆ, ಹಲ್ಲೆ ಇಂತಹ ಅನೇಕ ಕೃತ್ಯಗಳು, ದೌರ್ಜನ್ಯಗಳು ನಡೆಯುತ್ತಲೇ ಇರುತ್ತವೆ. ಆದರೆ ಈ ಎಲ್ಲ ಪ್ರಕರಣಗಳಲ್ಲಿ ಮಹಿಳೆಯರಿಗೆ ನ್ಯಾಯ ದೊರೆತಿರುವುದು ಅಪರೂಪವೆಂದೇ ಹೇಳಬಹುದು. ಮಹಿಳೆಯರು ನ್ಯಾಯಕ್ಕಾಗಿ ಹೋರಾಟ ನಡೆಸದಿದ್ದರೆ ಮಹಿಳಾ ದೌರ್ಜನ್ಯಗಳು ಹೆಚ್ಚುತ್ತಲೇ ಇರುವುದು. ಇಂತಹ ಸಂದರ್ಭದಲ್ಲಿ ಆಮಿನಾ ಬೆಹ್ರಾಮಿಯ ಹೋರಾಟವು ನಮಗೆಲ್ಲರಿಗೂ ಸ್ಫೂರ್ತಿಯಾಗಿದೆ.

## ನಮ್ಮ ದೇಶದ ರಾಜಕೀಯ

ನಮ್ಮ ದೇಶದ ರಾಜಕೀಯ
ಬರೀ ಸುಳ್ಳು ಕಂತೆಗಳ ನಾಟಕೀಯ

ಅಧಿಕಾರ ಏರುವಾಗ ಪ್ರಜೆಗಳ ಮುಂದೆ ಪ್ರಮಾಣ
ಅಧಿಕಾರ ಭ್ರಷ್ಟರಾದಾಗ ಮಂಜುನಾಥನ ಸ್ಮರಣೆ

ಆಣೆ ಪ್ರಮಾಣದ ರಾಜಕೀಯ
ಇವರ ಸ್ಥಿತಿಯಂತೂ ದಯನೀಯ

ಬಡಜನತೆಯಿಂದ ಕಂದಾಯ ವಸೂಲಿ
ಆದರೂ ಸರಕಾರದ ಬೊಕ್ಕಸ ಖಾಲಿ... ಖಾಲಿ...

ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ
ಹಸಿವು ನಿವಾರಿಸುವುದೇ ಕಷ್ಟವಾಗಿದೆ

ಭಾರತದ ಕೀರ್ತಿ ಪತಾಕೆ ಬಾನೆತ್ತರ
ಬಡ ಜನತೆಗೆ ತುಂಡು ಬಟ್ಟೆಗೂ ತತ್ತರ

ಅಮಾಯಕರು ಜೈಲಿನಲ್ಲಿ
ಕಳ್ಳ ರಾಜಕಾರಣಿಗಳು ಪ್ರಭುತ್ವದಲ್ಲಿ

ನಿತ್ಯ ಶೋಷಣೆ ನಿರಂತವಿಲ್ಲಿ
ಮಾನವೀಯತೆಗೆ ಬೆಲೆಯೆಲ್ಲಿ...?

**ರೇಶ್ಮಾ ಝೂಕೀರ್, ಮುಲ್ಕಿ**

ಕೆ.ಎಂ.ಶರೀಫ್
ಪ್ರಧಾನ ಕಾರ್ಯದರ್ಶಿ
ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ

# ಪಾಪ್ಯುಲರ್ ಫ್ರಂಟ್‌ನ್ನು ಗುರಿಪಡಿಸುತ್ತಿರುವ ಮಾಧ್ಯಮಗಳು




ಮಾಧ್ಯಮದಲ್ಲಿರುವ ಒಂದು ವರ್ಗಕ್ಕೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ನೆಚ್ಚಿನ ಗುರಿಯಾಗಿದೆ. ಹೆಚ್ಚಿನ ದಿನ ಪತ್ರಿಕೆಗಳು ಮತ್ತು ನ್ಯೂಸ್ ಚಾನೆಲ್‌ಗಳಲ್ಲಿ ಸಂಘಟನೆಯ ವಿರುದ್ಧ ಸುದ್ದಿ ಹಾಗೂ ಲೇಖನಗಳು ಕಾಣಿಸಿಕೊಳ್ಳುವುದು ಅಸಾಧಾರಣವೇನಲ್ಲ. ಈ ಮಾಧ್ಯಮ ದಾಳಿಯು ಯಾವುದೇ ನಿಶ್ಚಿತವಾದ ರಾಜ್ಯಕ್ಕೆ ಸೀಮಿತವಾದುದಲ್ಲ ಮತ್ತು ಇತ್ತೀಚೆಗೆ ವಿವಿಧ ರಾಜ್ಯಗಳ ಹಲವು ಭಾಷೆಗಳ ದಿನ ಪತ್ರಿಕೆಗಳಲ್ಲಿ ವರದಿಯೊಂದನ್ನು ನಾವು ಕಂಡಿದ್ದೇವೆ. ಇಂತಹ ವರದಿಗಳು ಪಾಪ್ಯುಲರ್ ಫ್ರಂಟ್ ಅಸ್ತಿತ್ವದಲ್ಲೇ ಇರದ ಅಥವಾ ದುರ್ಬಲವಾಗಿರುವ ರಾಜ್ಯಗಳಲ್ಲೂ ಕಾಣಲು ಆರಂಭವಾಗಿರುವುದು ಇನ್ನೂ ಆಸಕ್ತಿದಾಯಕವಾಗಿದೆ. ಇಂತಹ ವರದಿಗಳು ಯಾವಾಗಲೂ ಹಾಸ್ಯಾಸ್ಪದವಾಗಿರುತ್ತದೆ ಮತ್ತು ಪ್ರಜ್ಞಾವಂತ ಮನಸ್ಸುಳ್ಳವರು ಮಾಧ್ಯಮಗಳ ವಿಶ್ವಾಸಾರ್ಹತೆಯನ್ನು ಎರಡು ಬಾರಿ ಆಲೋಚಿಸುವಂತೆ ನಿರ್ಬಂಧಿಸುತ್ತದೆ. ಈ ವರದಿಗಳನ್ನು ಪ್ರಕಟಿಸುವಾಗ ಮಾಧ್ಯಮ ನಿಯಮಗಳನ್ನು ಗಾಳಿಗೆ ತೂರಲಾಗುತ್ತದೆ ಮತ್ತು ವರದಿಗಳ ಸತ್ಯಾಸತ್ಯತೆಯ ಬಗ್ಗೆ ಮಾಧ್ಯಮ ವ್ಯಕ್ತಿಗಳು ಪ್ರಮಾಣೀಕರಿಸುವುದಿಲ್ಲ. ಕಳೆದ ಕೆಲವು ತಿಂಗಳುಗಳಲ್ಲಿ ಹಲವು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಗಮಿನಿಸುವಾಗ ಮಾಧ್ಯಮ ಭಾವನಾಶೂನ್ಯತೆ ಮತ್ತು ವ್ಯಾಪಕ ಪಕ್ಷಪಾತತೆಯ ಉದಾಹರಣೆಗಳನ್ನು ನಾವು ಗುರುತಿಸಬಹುದಾಗಿದೆ.

ಇತ್ತೀಚೆಗೆ ಕಾಣಿಸಿಕೊಂಡ ಕೆಲವು ವರದಿಗಳನ್ನು ಗಮನಿಸುವಾಗ ಮಾಧ್ಯಮ ದಾಳಿಯು ಕೇವಲ ಸಹಘಟನೆ ಮಾತ್ರವಲ್ಲ, ಬದಲಾಗಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವನ್ನು ಗುರಿಪಡಿಸುವುದಕ್ಕಾಗಿರುವ ಷಡ್ಯಂತ್ರದ ಭಾಗವಾಗಿದೆ. ಈ ತಾರತಮ್ಯ ನೀತಿಗಾಗಿ ಇಡೀ ಮಾಧ್ಯಮ ಸಮುದಾಯವನ್ನು ಆಕ್ಷೇಪಿಸಲು ಸಾಧ್ಯವಿಲ್ಲವಾದರೂ, ಸಂಘಪರಿವಾರದ ಅಸಹ್ಯ ಸಿದ್ಧಾಂತದ ಬಗೆಗೆ ಅಗಾಧ ಒಲವಿರುವ ವರ್ಗವೊಂದು ಮಾಧ್ಯಮದಲ್ಲಿದೆ. ಮುಸ್ಲಿಮ್ ಸಮುದಾಯ ಮತ್ತು ಭಾರತೀಯ ಮುಸ್ಲಿಮರ ಅಭಿವೃದ್ಧಿಗಾಗಿ ಕೆಲಸ ಮಾಡುವ ಮುಸ್ಲಿಮ್ ಸಂಘಟನೆಗಳ ವಿರುದ್ಧ ಈ ಮಾಧ್ಯಮ ವ್ಯಕ್ತಿಗಳಿಗೆ ಆಳವಾದ ಪಕ್ಷಪಾತವಿದೆ. ಭಯೋತ್ಪಾದನೆಗೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ಮಾಧ್ಯಮಗಳು ಇಡೀ ಭಾರತೀಯ ಮುಸ್ಲಿಮ್ ಸಮುದಾಯವನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಿದೆಯೆಂಬುದನ್ನು ನಾವು ಈ ಹಿಂದೆ ಕಂಡಿದ್ದೇವೆ. ಉದಾಹರಣೆಗೆ ಆಸ್ಟ್ರೇಲಿಯಾದಲ್ಲಿ ಬೆಂಗಳೂರಿನ ಡಾ। ಹನೀಫ್ ಬಂಧನಕ್ಕೊಳಗಾದಾಗ ಆಸ್ಟ್ರೇಲಿಯಾದ ಮಾಧ್ಯಮಗಳು ಆತನ ಅಮಾಯಕತೆಯನ್ನು ಸಾಬೀತುಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿತ್ತು. ಅದೇ ವೇಳೆ, ಭಾರತೀಯ ಮಾಧ್ಯಮಗಳು ಆತನನ್ನು ಭಯೋತ್ಪಾದಕನ ಸ್ಥಾನದಲ್ಲಿ ನಿಲ್ಲಿಸಲು ಎಲ್ಲಾ ಶ್ರಮವನ್ನು ವಹಿಸಿತು. ಇಡೀ ಮುಸ್ಲಿಮ್ ವೃತ್ತಿಪರ ಸಮುದಾಯವನ್ನು ಭೂತಗನ್ನಡಿಯಡಿಗೆ ತರಲಾಗಿತ್ತು ಮತ್ತು 'ಶಿಕ್ಷಣವಂತ ಮುಸ್ಲಿಮರು ಹೆಚ್ಚಾಗಿ ಭಯೋತ್ಪಾದಕ ಸಂಘಟನೆಗೆ ಸೇರುವ ಸಾಧ್ಯತೆಯಿದೆಯೇ?' ಎಂಬ ವಿಷಯಗಳ ಮೇಲೆ ದಿನ ಪತ್ರಿಕೆಗಳು ಮತ್ತು ಚಾನೆಲ್‌ಗಳಲ್ಲಿ ಜನಾಭಿಪ್ರಾಯ

ಸಂಗ್ರಹಗಳನ್ನು ನಾವು ಕಂಡಿದ್ದೇವೆ. ಹೊಸದಿಲ್ಲಿಯ ಬಾಟ್ಲಾ ಹೌಸ್‌ನಲ್ಲಿ ವಿದ್ಯಾರ್ಥಿಗಳ ನಕಲಿ ಎನ್‌ಕೌಂಟರ್ ಹತ್ಯೆಯಾದಾಗಲೂ ಮಾಧ್ಯಮಗಳು ಎನ್‌ಕೌಂಟರ್‌ಅನ್ನು ಸಮರ್ಥಿಸಿದವು ಮತ್ತು ಮುಸ್ಲಿಮ್ ವಿದ್ಯಾರ್ಥಿಗಳು -ವಿಶೇಷವಾಗಿ ಅಝ್ಮಗಢ್‌ನಿಂದ ಹೊರಬರುವ ವಿದ್ಯಾರ್ಥಿಗಳ - ಗೌರವಕ್ಕೆ ಮಸಿ ಬಳಿಯಲು ಯತ್ನಿಸಿದವು. ಮುಸ್ಲಿಮರು ಮತ್ತು ಮುಸ್ಲಿಮ್ ಸಂಘಟನೆಗಳನ್ನು ಗುರಿ ಪಡಿಸುವುದು ಮಾಧ್ಯಮದ ಒಂದು ಸಣ್ಣ ವರ್ಗಕ್ಕೆ ಸಾಂದರ್ಭಿಕ ವಿನೋದ ಮಾತ್ರವಲ್ಲ ಎಂಬ ಉಪಾಂತ್ಯಕ್ಕೆ ಬರಲು ಇದು ಸಾಕು.

ಮುಂಬೈಯಲ್ಲಿ ಜುಲೈ 13, 2011ರಂದು ನಡೆದ ದುರದೃಷ್ಟಕರ ಮತ್ತು ಅತ್ಯಂತ ಖಂಡನೀಯ ಬಾಂಬ್ ಸ್ಫೋಟಗಳು ಕೋಮು ಪಕ್ಷಪಾತಿ ವರದಿಗಾರರಿಗೆ ಮತ್ತು ಸಂಪಾದಕರಿಗೆ ತನಿಖೆಯಲ್ಲಿ ಯಾವುದೇ ಬೆಳವಣಿಗೆಗಳು ಕಾಣುವ ಮೊದಲೇ ಉಪಾಂತ್ಯಕ್ಕೆ ಬರಲು ಇನ್ನೊಂದು ಅವಕಾಶವನ್ನು ಒದಗಿಸಿದೆ. ಘಟನೆಯ ಕೆಲವು ದಿನಗಳ ನಂತರ ಮಿಡ್ ಡೇ ಪತ್ರಿಕೆಯು ಪೊಲೀಸರು ಪಾಪ್ಯುಲರ್ ಫ್ರಂಟ್ ಮತ್ತು ಇತರ ನಿಷೇಧಿತ ಸಂಘಟನೆಗಳ ಬಗ್ಗೆ ಕಳವಳವನ್ನು ಹೊಂದಿದ್ದಾರೆಂದು 'ಪುಣೆ ಸುದ್ದಿ'ಯನ್ನು ಪ್ರಕಟಿಸಿತು. ಲೋಕಮತ್ ಎಂಬ ಮರಾಠಿ ಪತ್ರಿಕೆಯು ರಾಜಕೀಯ ಪಕ್ಷವಾದ ಎಸ್‌ಡಿಪಿಐಯನ್ನು ಸ್ಫೋಟಕ್ಕೆ ಸಂಪರ್ಕ ಕಲ್ಪಿಸುವುದರೊಂದಿಗೆ ಒಂದು ಹೆಜ್ಜೆ ಮುಂದಡಿಯಿಟ್ಟಿತು. ಸ್ಥಳೀಯ ಕಾರ್ಯಕರ್ತರು ಪತ್ರಿಕೆಯ ಕಚೇರಿಯಲ್ಲಿ ಸುದ್ದಿಯ ಮೂಲದ ಬಗ್ಗೆ ಪ್ರಶ್ನಿಸಿದಾಗ ಈ ಬಗ್ಗೆ ಮಹಾರಾಷ್ಟ್ರ ಎಟಿಎಸ್‌ನ ನಿರಾಕರಣೆಯನ್ನು ಅವರು ಒಪ್ಪಿಕೊಳ್ಳಬೇಕಾಗಿತ್ತು ಮತ್ತು ಮರುದಿನ ಸುದ್ದಿಯನ್ನು ಸರಿಪಡಿಸಿ ಪ್ರಕಟಿಸಬೇಕಾಯಿತು. ನಂತರದ ದಿನಗಳಲ್ಲಿ ಮುಂಬೈ ಸ್ಫೋಟದಲ್ಲಿ ಪಾಪ್ಯುಲರ್ ಫ್ರಂಟ್‌ನ ಶಂಕಿತ ಕೈವಾಡದ ಬಗೆಗಿನ ಸುದ್ದಿಗಳು ಮೀರತ್, ಜೈಪುರ, ಬೆಂಗಳೂರು ಮತ್ತು ಕೊಚ್ಚಿಯಂತಹ ದೇಶದ ಬೇರೆ ಬೇರೆ ನಗರಗಳಲ್ಲಿ ಇಂಗ್ಲಿಷ್ ಮತ್ತು ಭಾಷಾ ದೈನಿಕಗಳಲ್ಲಿ ಕಾಣಿಸಿಕೊಳ್ಳಲು ಆರಂಭವಾಯಿತು.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗೆ ನಿಷೇಧಿತ ಸಿಮಿ ಸಂಘಟನೆಯೊಂದಿಗೆ ಕೈವಾಡವಿದೆಯೆಂಬುದು ಮಾಧ್ಯಮಗಳ ಒಂದು ಆರೋಪವಾಗಿದೆ. ಸಾಮಾನ್ಯ ಜನರಿಗೆ ಗೊತ್ತಿರದ 'ರಹಸ್ಯ ಭದ್ರತಾ ಸಂಸ್ಥೆ'ಯು ಈ ಮಾಹಿತಿಯನ್ನು ನೀಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವನ್ನು ಸಿಮಿ ಮತ್ತು ಇಂಡಿಯನ್ ಮುಜಾಹಿದೀನ್‌ಗೆ ನಂಟು ಕಲ್ಪಿಸಿ ಹಲವು ಕಪೋಲ ಕಲ್ಪಿತ ಸುದ್ದಿಗಳು ಆ ವರದಿಯಲ್ಲಿ ಪ್ರಕಟವಾಗಿತ್ತು ಮತ್ತು ಅವೆಲ್ಲಾ ವಾಸ್ತವಕ್ಕೆ ಯಾವುದೇ ಸಂಬಂಧವಿಲ್ಲದೆ ಕಟ್ಟುಕತೆಗಳಾಗಿವೆ. ಕಾನೂನು ಬದ್ಧ ಅಥವಾ ಕಾನೂನು ಬಾಹಿರ ಯಾವುದೇ ಇತರ ಸಂಘಟನೆಯೊಂದಿಗೆ ಪಾಪ್ಯುಲರ್ ಫ್ರಂಟ್ ಸಂಪರ್ಕ ಹೊಂದಿಲ್ಲ. ಇಂತಹ ವರದಿಗಳು ಯಾವಾಗಲೂ ಮೂಲದ ಬಗ್ಗೆ ಸ್ಪಷ್ಟಪಡಿಸಲು ವಿಫಲವಾಗಿದೆ. ಮಾಧ್ಯಮದಲ್ಲಿರುವ ಒಂದು ವರ್ಗಕ್ಕೆ ಇಂತಹ ವರದಿಗಳನ್ನು ಪ್ರಕಟಿಸುವುದು ಚಾಳಿಯಾಗಿದೆ ಮತ್ತು ನಂತರ ಇದನ್ನು ಸೋ ಕಾಲ್ಡ್ 'ಬೇಹುಗಾರಿಕಾ ಇಲಾಖೆ'ಯ ಮೇಲೆ ಹೇರ ಲಾಗುತ್ತದೆ. ಅವುಗಳಲ್ಲಿ ಹೆಚ್ಚಿನ ಪತ್ರಿಕೆಗಳು ಪಾಪ್ಯುಲರ್ ಫ್ರಂಟ್ ಕಳುಹಿಸಿದ ಪ್ರತ್ಯುತ್ತರಗಳನ್ನು ಪ್ರಕಟಿಸದಿರುವ ಮೂಲಕ ತಮ್ಮ ಕಪಟತೆಯನ್ನು ಸಾಬೀತುಪಡಿಸಿವೆ. ನಾವು ಇಂತಹ ವರದಿಗಳ ಸತ್ಯಾಸತ್ಯತೆಯ ಬಗ್ಗೆ ಕೇಳಿದ್ದೇವೆ ಮತ್ತು ಪತ್ರಿಕೆಗಳಿಂದ ಇದುವರೆಗೆ ಯಾವುದೇ ಪ್ರತಿಕ್ರಿಯೆಗಳು ಬಂದಿಲ್ಲ. ಅಲ್ಲದೆ ಇಂತಹ ಹೆಸರು ಕೆಡಿಸುವಂತಹ ವರದಿಗಳನ್ನು ಪ್ರಕಟಿಸುವಾಗ ಯಾವುದೇ ಪತ್ರಿಕೆಗಳು ವಿಷಯದ ಬಗ್ಗೆ ಅಭಿಪ್ರಾಯವನ್ನು ತಿಳಿಯಲು ಪಾಪ್ಯುಲರ್ ಫ್ರಂಟ್ ನಾಯಕರನ್ನು ಸಂಪರ್ಕಿಸಲು ಪ್ರಯತ್ನಿಸಿಲ್ಲ. ಎಲ್ಲಾ ರೀತಿಯ ಭಯೋತ್ಪಾದನೆ ಮತ್ತು ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಖಂಡಿಸುವುದರಲ್ಲಿ ಪಾಪ್ಯುಲರ್ ಫ್ರಂಟ್ ಯಾವಾಗಲೂ ಮುಂಚೂಣಿಯಲ್ಲಿದೆಯೆಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ.

ಮುಂಬೈಯಲ್ಲಿ ಇತ್ತೀಚಿಗಿನ ಸ್ಫೋಟಗಳ ನಂತರ 'ದೈನಿಕ ಜಾಗರಣ'ದ ಮೀರತ್ ಆವೃತಿಯು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಕೇಂದ್ರ ಸರಕಾರದಿಂದ ನಿಷೇಧಿಸಲ್ಪಟ್ಟಿದೆ ಮತ್ತು ಅದರ ನಾಯಕರು ಭೂಗತರಾಗಿದ್ದಾರೆ ಎಂಬ ವರದಿಯನ್ನು

ಮುಂಬೈಯಲ್ಲಿ ಇತ್ತೀಚಿಗಿನ ಸ್ಫೋಟಗಳ ನಂತರ 'ದೈನಿಕ ಜಾಗರಣ'ದ ಮೀರತ್ ಆವೃತಿಯು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಕೇಂದ್ರ ಸರಕಾರದಿಂದ ನಿಷೇಧಿಸಲ್ಪಟ್ಟಿದೆ ಮತ್ತು ಅದರ ನಾಯಕರು ಭೂಗತರಾಗಿದ್ದಾರೆ ಎಂಬ ವರದಿಯನ್ನು ಪ್ರಕಟಿಸಿತ್ತು. ಅಚ್ಚರಿದಾಯಕವೆಂದರೆ ಗೌರವಾನ್ವಿತ ದಕ್ಷಿಣ ಭಾರತದ ದಿನ ಪತ್ರಿಕೆಯಾಗಿರುವ 'ದಿ ಹಿಂದೂ' ಪಾಪ್ಯುಲರ್ ಫ್ರಂಟ್‌ಅನ್ನು ದೇಶ ಭ್ರಷ್ಟ ಸಂಘಟನೆಯಾಗಿ ಬ್ರ್ಯಾಂಡ್ ಮಾಡಲು ಧೈರ್ಯ ತೋರಿತು. ಅಲ್ಲದೆ ಇದು ಪ್ರಕಟವಾಗಿರುವುದು ಕೊಚ್ಚಿಯಲ್ಲಿ.

ಪ್ರಕಟಿಸಿತ್ತು. ಅಚ್ಚರಿದಾಯಕವೆಂದರೆ ಗೌರವಾನ್ವಿತ ದಕ್ಷಿಣ ಭಾರತದ ದಿನ ಪತ್ರಿಕೆಯಾಗಿರುವ 'ದಿ ಹಿಂದೂ' ಪಾಪ್ಯುಲರ್ ಫ್ರಂಟ್‌ಅನ್ನು ದೇಶ ಭ್ರಷ್ಟ ಸಂಘಟನೆಯಾಗಿ ಬ್ರ್ಯಾಂಡ್ ಮಾಡಲು ಧೈರ್ಯ ತೋರಿತು. ಅಲ್ಲದೆ ಇದು ಪ್ರಕಟವಾಗಿರುವುದು ಕೊಚ್ಚಿಯಲ್ಲಿ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಮೇಲೆ ಇಂತಹ ಆರೋಪಗಳನ್ನು ಹೊರಿಸುವ ಮಾಧ್ಯಮದ ಉದ್ದೇಶವನ್ನು ಅರಿಯಲು ಯಾವುದೇ ಪ್ರಜ್ಞಾವಂತ ವ್ಯಕ್ತಿಗಳಿಗೆ ಇದು ಸಾಕು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಪ್ರಧಾನ ಕಚೇರಿಯನ್ನು ದೇಶದ ರಾಜಧಾನಿಯಲ್ಲಿರುವ ನೋಂದಾಯಿತ ಸಂಘಟನೆಯಾಗಿರುವಾಗ, ಅದರ ಹಲವು ಇತರ ಕಚೇರಿಗಳು ವಿವಿಧ ರಾಜ್ಯ ಹಾಗೂ ಜಿಲ್ಲೆಗಳಲ್ಲಿರುವಾಗ ಇಂತಹ ವರದಿಗಳನ್ನು ಹೇಗೆ ತಾನೆ ಸಮರ್ಥಿಸಬಹುದು. ದೇಶಭ್ರಷ್ಟ ಸಂಘಟನೆಯೆಂದರೆ ಏನು ಎಂಬುದನ್ನು ತಿಳಿಯದ ದಿನ ಪತ್ರಿಕೆಯೊಂದರ ವರದಿಗಳನ್ನು ನಂಬುವುದಾದರೂ ಹೇಗೆ? ಭಾರತದಲ್ಲಿ ಅತ್ಯಂತ ದೊಡ್ಡ ನವ ಸಾಮಾಜಿಕ-ಚಳುವಳಿಯಲ್ಲೊಂದಾಗಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವನ್ನು ನಿಷೇಧಿತ ಸಂಘಟನೆಯೆಂದು ಪ್ರಕಟಿಸುವುದು ಕೇವಲ ಒಂದು ತಪ್ಪು ಅಥವಾ ಪ್ರಮಾದವಲ್ಲ. ಬದಲಾಗಿ ಸಂಘಟನೆಯ ಗೌರವವನ್ನು ಹಾನಿಪಡಿಸುವುದಕ್ಕಾಗಿರುವ ಯೋಜಿತ ಷಡ್ಯಂತ್ರ ಮತ್ತು ಸಂಘಟನೆಯ ಪ್ರಭಾವ ಹಾಗೂ ಬೆಳವಣಿಗೆಯನ್ನು ತಡೆಯುವ ಪ್ರಯತ್ನವಾಗಿದೆ. ದಕ್ಷಿಣ ಭಾರತದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಬೃಹತ್ ಅಸ್ತಿತ್ವವನ್ನು ಹೊಂದಿದೆ ಎಂಬುದನ್ನು ಉಲ್ಲೇಖಿಸುವುದು ಅಗತ್ಯವಾಗಿದೆ. ಆದರೆ ಕಳೆದ ಕೆಲವು ವರ್ಷಗಳಿಂದ ಇದು ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ವಿಸ್ತಾರವಾಗಿ ಹಬ್ಬುತ್ತಿದೆ. ಉತ್ತರ ರಾಜ್ಯದ ಜನರಿಗೆ ಪಾಪ್ಯುಲರ್ ಫ್ರಂಟ್ ತುಂಬಾ ಹೊಸದಾಗಿರುವುದರಿಂದ 'ಮಾಧ್ಯಮ-ಸಂಘಪರಿವಾರ-ಬೇಹುಗಾರಿಕಾ' ಜೋಡಣೆಯೊಂದಿಗೆ ಪಾಪ್ಯುಲರ್ ಫ್ರಂಟ್‌ನ ಬೆಳವಣಿಗೆಯನ್ನು ತಡೆಯುವ ಮತ್ತು ಸಂಘಟನೆಯ ಬಗ್ಗೆ ಜನರಲ್ಲಿ ಶಂಕೆಯನ್ನುಂಟುಮಾಡುವುದಕ್ಕಾಗಿ ಮಾಧ್ಯಮಗಳು ಉದ್ದೇಶಪೂರ್ವಕವಾಗಿ ಉತ್ತರ ರಾಜ್ಯಗಳಲ್ಲಿ ಇಂತಹ ವರದಿಯನ್ನು ಪ್ರಕಟಿಸಿವೆ.



Police track sleeper cells of fundamentalist groups

Staff Reporter



Correction: In the report from Kochi published on July 21, headlined 'Police tracking sleeper cells of fundamentalist groups,' the reference to the Popular Front of India as a proscribed organisation was erroneous. The error is regretted.

ದಿ ಹಿಂದೂ ಪತ್ರಿಕೆಯಲ್ಲಿ ಪಾಪ್ಯುಲರ್ ಫ್ರಂಟ್ ಬಗೆಗೆ ಪ್ರಕಟವಾದ ನಿರಾಧಾರ ವರದಿ ಮತ್ತು ಮರುದಿನ ಅದೇ ಪತ್ರಿಕೆಯಲ್ಲಿ ಸ್ಪಷ್ಟನೆ

ಫ್ರೀಡಂ ಪರೇಡ್, ಸಾರ್ವಜನಿಕ ಸಭೆಗಳು ಮತ್ತು ರ್‍ಯಾಲಿಗಳಂತಹ ಹಲವು ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತದೆ. ಕಳೆದ ವರ್ಷ ಕರ್ನಾಟಕದ ಪತ್ರಿಕೆಯೊಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಮೈಸೂರಿನಲ್ಲಿ ಪಾಕಿಸ್ತಾನದ ಧ್ವಜವನ್ನು ಹಾರಿಸುವ ಮೂಲಕ ನಗರದಲ್ಲಿ ಸಮಸ್ಯೆಯನ್ನುಂಟುಮಾಡಲು ಪ್ರಯತ್ನಿಸುತ್ತಿದೆ ಎಂದು ವರದಿ ಮಾಡಿತ್ತು. ಈ ಹೇಳಿಕೆಯು ಮೊದಲು ಸ್ಥಳೀಯ ಆರೆಸ್ಸೆಸ್ ನಾಯಕನಿಂದ ಹೊರಡಿಸಲ್ಪಟ್ಟಿತ್ತು. ಆದರೆ ಮಾಧ್ಯಮಗಳು ಇದನ್ನು ಅಂತಿಮ ಸತ್ಯವಾಗಿ ಒಪ್ಪಿಕೊಂಡವು ಮತ್ತು ಆಗಸ್ಟ್ 15ರಂದು ಮೈಸೂರಿನಲ್ಲಿ ನಿಜವಾಗಿ ಏನು ನಡೆದಿದೆಯೆಂಬ ಬಗ್ಗೆ ಅನ್ವೇಷಿಸಲು ಹೋಗಲಿಲ್ಲ. ಮೈಸೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪಾಪ್ಯುಲರ್ ಫ್ರಂಟ್‌ನ ಜಿಲ್ಲಾ ನಾಯಕರು ವಾಸ್ತವದ ಬಗ್ಗೆ ವಿವರಿಸಿದ್ದರು. ಆದರೆ ಕರ್ನಾಟಕದ ಯಾವುದೇ ಪತ್ರಿಕೆಗಳು ಈ ಸುದ್ದಿಗೆ ಸ್ಥಳವನ್ನು ನೀಡಲಿಲ್ಲ. ಗಾಯಕ್ಕೆ ಬರೆಯೆಳೆದಂತೆ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕಾರ್ಯಕರ್ತರಿಗೆ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡುವ ಮತ್ತು ರಾಷ್ಟ್ರ ಧ್ವಜವನ್ನು ಹಾರಿಸುವ ಕನಿಷ್ಠ ಹಕ್ಕನ್ನೂ ನಿರಾಕರಿಸಿದ ಮೈಸೂರಿನ ಜಿಲ್ಲಾಡಳಿತದ ತಾರತಮ್ಯ ನೀತಿಯ ಬಗ್ಗೆ ಮಾಧ್ಯಮಗಳು ಹೈಲೈಟ್ ಮಾಡಲಿಲ್ಲ. ಜನರು ಮತ್ತು ಸಂಘಟನೆಗಳ ಪ್ರಾಥಮಿಕ ಮೂಲಭೂತ ಹಕ್ಕುಗಳ ಉಲ್ಲಂಘನೆ

ಹಾಗೂ ನಿರಾಕರಣೆಯನ್ನು ತಿರಸ್ಕರಿಸುವ ಮಾಧ್ಯಮಗಳು, ಸಂತ್ರಸ್ತರನ್ನೇ ರಾಷ್ಟ್ರ ವಿರೋಧಿಗಳು ಎಂದು ಕರೆಯುವ ಮೂಲಕ ಒಂದಡಿ ಮುಂದಿಡುತ್ತದೆ. ಇದು ಮುಸ್ಲಿಮರ ಬಗ್ಗೆ ಮಾಧ್ಯಮಗಳ ತಾರತಮ್ಯ ನೀತಿಯನ್ನು ತೋರ್ಪಡಿಸುವುದಿಲ್ಲವೇ? ಪ್ರಜೆಗಳಲ್ಲಿರುವ ಒಂದು ವರ್ಗವು ಸ್ವಾತಂತ್ರ್ಯ ದಿನವನ್ನು ಆಚರಿಸುವುದು ಮಾಧ್ಯಮಗಳ ಕಣ್ಣಿಗೆ ಅಪರಾಧವೇ? ಅದೇ ರೀತಿ, ಲಕ್ನೋದಲ್ಲಿ ಪಾಪ್ಯುಲರ್ ಫ್ರಂಟ್‌ನ ನಾಯಕರೊಬ್ಬರನ್ನು ಕಾನೂನು ಬಾಹಿರವಾಗಿ ಹೌಸ್ ಅರೆಸ್ಟ್‌ನಲ್ಲಿ ಇಡಲಾಯಿತು ಮತ್ತು ಪೊಲೀಸರು ಆಗಸ್ಟ್ 15, 2010ರಂದು ಅವರಿಗೆ ಧ್ವಜಾರೋಹಣ ಕಾರ್ಯಕ್ರಮವನ್ನು ಸಂಘಟಿಸಲು ಅನುಮತಿಸಲಿಲ್ಲ. ಆದರೆ ಈ ಅನ್ಯಾಯವನ್ನು ವರದಿ ಮಾಡುವ ಬದಲು ಮಾಧ್ಯಮಗಳು ಪೊಲೀಸ್ ಹೇಳಿಕೆಯನ್ನು ಪ್ರಕಟಿಸಿದವು ಮತ್ತು ಸ್ವಾತಂತ್ರ್ಯ ದಿನಾಚರಣೆಯಂದು ಪಾಪ್ಯುಲರ್ ಫ್ರಂಟ್ ಉದ್ವಿಗ್ನತೆ ಸೃಷ್ಟಿಸುತ್ತದೆ ಎಂದು ಆರೋಪಿಸಿದವು.

ಇತ್ತೀಚೆಗೆ ನ್ಯೂಸ್ ಚಾನೆಲ್‌ಗಳೂ ಕೂಡ ಅನೈತಿಕ ಪತ್ರಿಕೋದ್ಯಮವನ್ನು ಸೇರಿಕೊಂಡಿದೆ. ಭಾರತದಲ್ಲಿ ಅತ್ಯಂತ ನಂಬಲಾರ್ಹ ನ್ಯೂಸ್ ಚಾನೆಲ್‌ಗಳಲ್ಲೊಂದು ಎಂದು ಭಾವಿಸಲಾಗುವ ಸಿಎನ್‌ಎನ್-ಐಬಿಎನ್ ಮೇ 30, 2011ರಂದು 'ಕಾಯ್ದಾ, ಪಿಎಫ್‌ಐ ನಂಟು ಬಂಧನ: ಪಿಎಫ್‌ಐ ನಿಷೇಧಿಸಲ್ಪಡಲಿದೆಯೇ?' ಎಂಬು ಸುದ್ದಿಯನ್ನು ಬಿತ್ತರಿಸಿ ಪಾಪ್ಯುಲರ್ ಫ್ರಂಟ್‌ನ ಅಲ್ ಕಾಯಿದಾ ನಂಟು ಸಾಬೀತಾಗಿದೆ ಎಂದು ಹೇಳಿತ್ತು. ಪಾಪ್ಯುಲರ್ ಫ್ರಂಟ್ ಆಫ್ ಫ್ರಾನ್ಸನ್ನು ಸ್ಥಾಪಿಸುವುದಕ್ಕಾಗಿ ಯೋಜನೆ ರೂಪಿಸಿದ್ದ ಪಾಪ್ಯುಲರ್ ಫ್ರಂಟ್‌ನ ಸದಸ್ಯನೆಂದು ಹೇಳಲಾದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ವರದಿಯು ಪ್ರತಿಪಾದಿಸಿತು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಕೇವಲ ಭಾರತದಲ್ಲಿ ಅಸ್ತಿತ್ವದಲ್ಲಿರುವ ಸಂಘಟನೆ ಯಾಗಿರುವುದರಿಂದ ಮತ್ತು ಫ್ರಾನ್ಸ್‌ನಲ್ಲಿ ಯಾವುದೇ ಚಟುವಟಿಕೆಗಳು ಇಲ್ಲದಿರುವುದರಿಂದ ಇದು ಗಂಭೀರವಾದ ಆರೋಪವಾಗಿದೆ. ಈ ಸುದ್ದಿಯ ಮೂಲದ ಬಗ್ಗೆ ನಾವು ಸಿಎನ್‌ಎನ್-ಐಬಿಎನ್‌ನ ವರದಿಗಾರನನ್ನು ಸಂಪರ್ಕಿಸಿದಾಗ ಆರಂಭದಲ್ಲೇ ಅದೇ ಹಳೆಯ 'ರಹಸ್ಯ ಸಂಸ್ಥೆಗಳು' ಎಂಬ ಉತ್ತರವನ್ನು ಪಡೆದೆವು. ನಂತರ ಸಂಘಟನೆಯು ನ್ಯೂಸ್ ಚಾನೆಲ್‌ನ ಮೇಲೆ ಒತ್ತಡ ಹಾಕಿದಾಗ ಇದು ಗೃಹ ಸಚಿವಾಲಯದ ಮೂಲಗಳಿಂದ ಬಂದಿದೆ ಎಂದು ಚಾನೆಲ್ ಹೇಳಿತು. ಅದೊಂದು ಸಂಪೂರ್ಣ ಸುಳ್ಳಾಗಿತ್ತು. ವಾಸ್ತವದಲ್ಲಿ 'ದೇಶ ಭಕ್ತ' ಚಾನೆಲ್ ಪಾಕಿಸ್ತಾನಿ ಸುದ್ದಿ ವರದಿಯೊಂದನ್ನು ಪುನರ್‌ಬಳಕೆ ಮಾಡಿತ್ತು. ಬಂಧನಕ್ಕೊಳಗಾದ ವ್ಯಕ್ತಿ ಪಾಪ್ಯುಲರ್ ಫ್ರಂಟ್‌ನ ಸದಸ್ಯನೆಂಬುವುದಕ್ಕೆ ಯಾವುದೇ ಉಲ್ಲೇಖಗಳು ಆ ವರದಿಯಲ್ಲಿರಲಿಲ್ಲ. ಚಾನೆಲ್ ಸ್ವತ: ಕತೆಯನ್ನು ಹೆಣೆದಿತ್ತು. ಈ ವರದಿಯು ದಿನದುದ್ದಕ್ಕೂ ಚಾನೆಲ್‌ನಲ್ಲಿ ಬಿತ್ತರಿಸಲಾಗಿತ್ತು. ಆದರೆ ಈ ಸುಳ್ಳು ವರದಿಯು ಇತರ ಯಾವುದೇ ದಿನ ಪತ್ರಿಕೆಗಳಲ್ಲಿ ಅಥವಾ ಚಾನೆಲ್‌ಗಳಲ್ಲಿ ಕಾಣಿಸಲಿಲ್ಲ. ನಂತರ ನ್ಯೂಸ್ ಚಾನೆಲ್ ಕ್ಷಮೆ ಕೇಳುವ ಬದಲು ಬದಲು ಮೌನವನ್ನು ಪಾಲಿಸಿತು. ಈ ಸುದ್ದಿಯನ್ನು ಬಚ್ಚಿಡಲು ಇನ್ನೊಂದು ಕಾರಣವೆಂದರೆ ಫ್ರಾನ್ಸ್‌ನಲ್ಲಿ ಬಂಧಿಸಲ್ಪಟ್ಟ ವ್ಯಕ್ತಿ ಭಾರತೀಯ ಬೇಹುಗಾರಿಕಾ ಸಂಸ್ಥೆಯಾದ RAWದ ಸದಸ್ಯನೆಂದೂ, ಈತನನ್ನು ಮತ್ತು ಇತರ ಆರು ಮಂದಿಯನ್ನು ಬಂಧಿಸಲು ಐಎಸ್‌ಐ ಫ್ರೆಂಚ್ ಸಂಸ್ಥೆಗಳಿಗೆ ನೆರವಾಗಿತ್ತೆಂದೂ ಪಾಕಿಸ್ತಾನದ ಕೆಲವು ಪತ್ರಿಕೆಗಳು ಪ್ರತಿಪಾದಿಸಿದ್ದವು.

ಮೇಲಿನ ಉದಾಹರಣೆಗಳನ್ನು ಗಮನಿಸುವಾಗ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವಿರುದ್ಧ ಮಾಧ್ಯಮದ ಒಂದು ವರ್ಗವು ಸುಳ್ಳು ಸುದ್ದಿ ಮತ್ತು ವರದಿಗಳನ್ನು ನಿರಂತರವಾಗಿ ಪ್ರಚಾರಪಡಿಸುತ್ತಿದೆ ಎಂಬುದು ಸಾಬೀತಾಗುತ್ತದೆ. ಕೆಲವು ಪತ್ರಿಕೆಗಳು ಇಂತಹ ವರದಿಗಳನ್ನು ತಪ್ಪಾಗಿ ಪ್ರಕಟಿಸಿರುವ ನಿದರ್ಶನವಿರಬಹುದು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸ್ಥಳೀಯ ನಾಯಕರು ಇಂತಹವರನ್ನು ಸಂಪರ್ಕಿಸಿದಾಗ ಅವರು ಸ್ಪಷ್ಟನೆ ಅಥವಾ ನಮ್ಮ ಪ್ರತಿಕ್ರಿಯೆಯನ್ನು ಪ್ರಕಟಿಸುವ ಮೂಲಕ ಸಕಾರಾತ್ಮಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ ಮತ್ತು ಇದನ್ನು ನಾವು ನೈತಿಕ ಪತ್ರಿಕೋದ್ಯಮದ ರೂಪವಾಗಿ ಹೃತ್ಪೂರ್ವಕವಾಗಿ ಅಭಿನಂದಿಸಿದ್ದೇವೆ. ಆದರೆ ಕೆಲವು ದಿನಪತ್ರಿಕೆಗಳು, ಮ್ಯಾಗಝಿನ್‌ಗಳು ಮತ್ತು ಟಿ.ವಿ ಚಾನೆಲ್‌ಗಳು ನಮ್ಮ ಹೇಳಿಕೆಗಳಿಗೆ ಅಥವಾ ಪ್ರತಿಕ್ರಿಯೆಗಳಿಗೆ ಯಾವುದೇ ಗೌರವವನ್ನು ತೋರ್ಪಡಿಸಿಲ್ಲ ಮತ್ತು ಸುಳ್ಳನ್ನು ಪ್ರಕಟಿಸುವುದನ್ನು ಮುಂದುವರಿಸಲು ಬಯಸಿದ್ದವು. ಇಂತಹ ದಿನ ಪತ್ರಿಕೆಗಳ ವಿರುದ್ಧ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಾನೂನು ಕ್ರಮವನ್ನು ಆರಂಭಿಸಿದೆ.

ಮುಸ್ಲಿಮರು ಮತ್ತು ಸಮಾಜದ ಇತರ ಹಿಂದುಳಿದ ವರ್ಗಗಳ ಅಭಿವೃದ್ಧಿಯ ತನ್ನ ಉದ್ದೇಶಕ್ಕೆ ಪಾಪ್ಯುಲರ್ ಫ್ರಂಟ್ ಬದ್ಧವಾಗಿದೆ ಮತ್ತು ಮಾಧ್ಯಮದ ಒಂದು ವರ್ಗದ ಈ ಎಲ್ಲಾ ಪ್ರಯತ್ನಗಳನ್ನು ಸವಾಲಾಗಿ ಸ್ವೀಕರಿಸುತ್ತದೆ. ಪಾಪ್ಯುಲರ್ ಫ್ರಂಟ್‌ಗೆ ಜನ ಬೆಂಬಲವು ತುಂಬಾ ಬಲಿಷ್ಠವಾಗಿದ್ದು, ಇಂತಹ ಸುಳ್ಳು ಹಾಗೂ ಆಧಾರ ರಹಿತ ಆರೋಪಗಳು ಈ ಜನರಲ್ಲಿ ಗಾಯವುಂಟುಮಾಡಲಿದೆ. ದಕ್ಷಿಣ, ಉತ್ತರ, ಪೂರ್ವ ಮತ್ತು ಪಶ್ಚಿಮಗಳಲ್ಲಿ ಪಾಪ್ಯುಲರ್ ಫ್ರಂಟ್‌ಗೆ ಏರುತ್ತಿರುವ ಬೆಂಬಲ ಮತ್ತು ಅದನ್ನು ಸ್ವೀಕರಿಸುತ್ತಿರುವುದು, ಸಂಘಟನೆಯ ವಿರುದ್ಧದ ಷಡ್ಯಂತ್ರವನ್ನು ಜನರು ಅರಿತುಕೊಳ್ಳುತ್ತಿದ್ದಾರೆ ಎಂಬುದಕ್ಕೆ ಪುರಾವೆಯಾಗಿದೆ ಮತ್ತು ಸಬಲೀಕರಣದ ಹಾದಿಯಲ್ಲಿ ಅವರು ಪಾಪ್ಯುಲರ್ ಫ್ರಂಟ್‌ನೊಂದಿಗೆ ನಿಲ್ಲಲಿದ್ದಾರೆ.

# ದ್ವೇಷವೇಕೆ? ಪ್ರೀತಿ ಇರಲಿ



ಶಾಲಾ ಶಿಕ್ಷಕಿಯೊಬ್ಬಳು ತನ್ನ ತರಗತಿಯಲ್ಲಿದ್ದ ಮಕ್ಕಳಿಗೆ ಆಟವೊಂದನ್ನು ಆಯೋಜಿಸಲು ನಿರ್ಧರಿಸದಳು. ಪ್ರತಿಯೋರ್ವರೂ ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಕೆಲವೊಂದು ಟೊಮೊಟೊಗಳನ್ನು ತರುವಂತೆ ತರಗತಿಯಲ್ಲಿದ್ದ ಮಕ್ಕಳಿಗೆ ಶಿಕ್ಷಕಿ ಸೂಚಿಸಿದಳು.

ಪ್ರತಿಯೊಂದು ಟೊಮೆಟೊವಿಗೂ ಮಕ್ಕಳು ದ್ವೇಷಿಸುವ ವ್ಯಕ್ತಿಗಳ ಹೆಸರನ್ನಿಡಲು ಶಿಕ್ಷಕಿ ಹೇಳಿದಳು. ಅದರಂತೆ ಮಕ್ಕಳು ತಾವು ದ್ವೇಷಿಸುವವರ ಹೆಸರನ್ನು ಟೊಮೆಟೊಗಳಿಗಿಟ್ಟ ಪ್ಲಾಸ್ಟಿಕ್ ಬ್ಯಾಕ್‌ಗಳಲ್ಲಿ ಇಟ್ಟರು.

ಎಲ್ಲಾ ಮಕ್ಕಳು ತಾವು ದ್ವೇಷಿಸುವವರ ಹೆಸರನ್ನು ನಾಮಕರಣ ಮಾಡಿಟ್ಟಿದ್ದ ಟೊಮೆಟೊಗಳನ್ನು ತಂದರು. ಕೆಲವರು 2 ಟೊಮೆಟೊಗಳನ್ನು ಹೊಂದಿದ್ದರು. ಇನ್ನು ಕೆಲವರು 3 ಟೊಮೆಟೊ ಹೊಂದಿದ್ದರು. ಇನ್ನು ಕೆಲವು ಮಕ್ಕಳು 5 ಟೊಮೆಟೊಗಳನ್ನು ಹೊಂದಿದ್ದರು. ಶಿಕ್ಷಕಿ ಮಕ್ಕಳೊಂದಿಗೆ ಪುನಃ ಹೇಳಿದಳು. ಒಂದು ವಾರದ ವರೆಗೆ ನೀವು ಎಲ್ಲಿಗೆಲ್ಲಾ ಹೋಗುತ್ತೀರೋ ಇದನ್ನು ಅಲ್ಲಿಗೆಲ್ಲಾ ಕೊಂಡೊಯ್ಯಬೇಕು ಎಂದು ಹೇಳಿದಳು.

ದಿನಗಳೆದಂತೆ ಮಕ್ಕಳು ಶಿಕ್ಷಕಿಯೊಂದಿಗೆ ಟೊಮೆಟೊಗಳು ಕೊಳೆತು ನಾರುತ್ತಿರುವ ಬಗ್ಗೆ ದೂರು ನೀಡಲು ಪ್ರಾರಂಭಿಸಿದರು. 5 ಟೊಮೆಟೊ ಹೊಂದಿದ್ದವರು ಇನ್ನೂ ಸುಸ್ತಾದರು. ಒಂದು ವಾರದ ಬಳಿಕ ಆಟ ಮುಕ್ತಾಯ ವಾಗುತ್ತಿದ್ದಂತೆಯೇ ಮಕ್ಕಳು ತುಂಬಾ ರಿಲೀವ್ ಆದಂತೆ ಕಂಡು ಬಂದರು.

ಬಳಿಕ ಶಿಕ್ಷಕಿ ಮಕ್ಕಳೊಂದಿಗೆ ಕೇಳಿದಳು:'' ಮಕ್ಕಳೇ ನಿಮ್ಮ ಈ ಒಂದು ವಾರದ ಟೊಮೆಟೊಗಳನ್ನು ಹೊಂದಿದ್ದ ಪ್ಲಾಸ್ಟಿಕ್ ಬ್ಯಾಗ್ ಕೊಂಡೊಯ್ಯುತ್ತಿದ್ದ ಅನುಭವ ಹೇಗಿತ್ತು? ಅದಕ್ಕೆ ಆಕ್ರೋಶಭರಿತರಾಗಿದ್ದ ಮಕ್ಕಳು ತಮ್ಮ ಒಂದೊಂದೇ ದೂರುಗಳನ್ನು ಸಲ್ಲಿಸಲು ಪ್ರಾರಂಭಿಸಿದರು. ''ತಾವು ಬ್ಯಾಗ್‌ನಲ್ಲಿ ಕೊಂಡೊಯ್ಯುತ್ತಿದ್ದ ಟೊಮೆಟೊಗಳು ಭಾರವಾಗಿದ್ದವು, ಅವು ಕೊಳೆತು ನಾರುತ್ತಿತ್ತು.'' ಎಂದು ಹೇಳಿದರು.

ಈಗ ಶಿಕ್ಷಕಿ ಆ ಆಟದ ಗೂಡಾರ್ಥವನ್ನು ಮಕ್ಕಳಿಗೆ ತಿಳಿಸಿದಳು. ''ಮಕ್ಕಳೇ, ನಾವು ಹೃದಯದಲ್ಲಿ ಎಷ್ಟೊಂದು ದ್ವೇಷವನ್ನು ಒಟ್ಟುಗೂಡಿಸಿಟ್ಟಿರುತ್ತೇವೆ. ಮಾತ್ರವಲ್ಲ, ನಾವು ಹೋಗುವ ಕಡೆಗಳಿಗೆಲ್ಲಾ ಅದನ್ನು ಕೊಂಡೊಯ್ಯುತ್ತಿದ್ದೇವೆ. ನಿಮಗೆ ಆ ಕೊಳೆತ ಟೊಮೆಟೊಗಳ ಗಬ್ಬುನಾತವನ್ನು ಕೇವಲ ಒಂದು ವಾರಗಳ ಕಾಲವೂ ಸಹಿಸಲು ಸಾಧ್ಯವಾಗಲಿಲ್ಲ. ಇದೀಗ ನೀವೇ ಊಹಿಸಿಕೊಳ್ಳಿ, ನಾವು ನಮ್ಮ ಹೃದಯದಲ್ಲಿ ದ್ವೇಷವನ್ನು ತುಂಬಿಕೊಳ್ಳುತ್ತಾ ಅದನ್ನು ಜೀವನಾದ್ಯಂತ ಇಟ್ಟುಕೊಳ್ಳುತ್ತೇವಲ್ಲಾ. ಇದನ್ನು ನಮ್ಮಿಂದ ಇಷ್ಟಪಡಲು ಸಾಧ್ಯವೇ?'' ಎಂದು ಮಕ್ಕಳಿಗೆ ಬೋಧಿಸಿದಳು.

ನೀತಿ: ನಿಮ್ಮ ಹೃದಯದಲ್ಲಿ ದ್ವೇಷವನ್ನು ಇಟ್ಟುಕೊಳ್ಳದಿರಿ. ದ್ವೇಷದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಅದು ನಮ್ಮ ಹೃದಯವನ್ನೇ ಕೊಳೆಯುವಂತೆ ಮಾಡುತ್ತದೆ. ಇನ್ನೊಬ್ಬರನ್ನು ಅರಿತು ಅವರಿಗೆ ಸ್ಪಂದಿಸುತ್ತಾ ಜೀವನ ಸಾಗಿಸಿದರೆ ಅದೇ ಸಂತೋಷಕರ ಜೀವನ.

ಅಫ್ರಿನ್, ಮಡಿಕೇರಿ

# ಕೆಲಸಕ್ಕೆ ಹೆದರಬೇಡ

ಶ್ರೀಮಂತನೊಬ್ಬ ಹಡಗಿನಲ್ಲಿ ಪ್ರಯಾಣಿಸುತ್ತಿದ್ದಾಗ ಕ್ಯಾಪ್ಟನ್‌ನೊಂದಿಗೆ ಮಾತಿಗಿಳಿದ. ಶ್ರೀಮಂತ ಕ್ಯಾಪ್ಟನ್‌ನೊಂದಿಗೆ ಕೇಳಿದ. ''ನಿಮ್ಮ ತಂದೆ ಏನು ಮಾಡುತ್ತಿದ್ದರು?'' ಅದಕ್ಕೆ ಕ್ಯಾಪ್ಟನ್, ''ಅವರು ಕೂಡ ಹಡಗಿನಲ್ಲಿ ಕ್ಯಾಪ್ಟನ್ ಆಗಿದ್ದರು ಎಂದು ಪ್ರತಿಕ್ರಿಯಿಸಿದ.

ಅದಕ್ಕೆ ಶ್ರೀಮಂತ ''ನಿನ್ನ ತಂದೆಯ ಗೋರಿ ಎಲ್ಲಿದೆ?'' ಎಂದು ಮರು ಪ್ರಶ್ನಿಸಿದ. ಕಳೆದೆರಡು ವರ್ಷಗಳ ಹಿಂದೆ ಪ್ರಯಾಣದಲ್ಲಿದ್ದಾಗ ತುಂಬಾ ಜೋರಾಗಿ ಚಂಡ ಮಾರುತ ಬಂದಿತ್ತು. ತನ್ನ ತಂದೆ ಹಡಗಿನಲ್ಲಿದ್ದ ಸಿಬ್ಬಂದಿಗಳನ್ನು ಬಹಳ ಪ್ರಯಾಸದಿಂದ ರಕ್ಷಿಸಿದ್ದರು. ಆದರೆ ಅವರು ಮಾತ್ರ ಹಡಗಿನೊಂದಿಗೆ ಸಮುದ್ರ ಪಾಲಾದರು.

ಶ್ರೀಮಂತ ದುಃಖ ವ್ಯಕ್ತಪಡಿಸುತ್ತಾ ಕೆಲ ಹೊತ್ತಿನ ಬಳಿಕ ''ನಿಮ್ಮ ಅಜ್ಜ ಹೇಗೆ ಮರಣವನ್ನಪ್ಪಿದ್ದರು? ಎಂದು ಕೇಳಿದ. ಹಡಗು ಮುಳುಗಿದ ದುರ್ಘಟನೆಯಲ್ಲಿಯೇ ಅವರು ಮೃತ್ಯುವಶವಾದರು ಎಂದು ಆತ ಹೇಳಿದ. ಶ್ರೀಮಂತ ತುಂಬಾ ಹೊತ್ತಿನವರೆಗೆ ಯೋಚಿಸುತ್ತಾ, ನಿಮ್ಮ ತಂದೆ, ನಿಮ್ಮ ಅಜ್ಜ ಹಡಗಿನಲ್ಲಿಯೇ ಕೆಲಸ ಮಾಡುತ್ತಾ ಮೃತ್ಯುವಶವಾಗಿದ್ದಾರೆ. ಆದರೂ ತಾವು ಕೂಡ ಈ ಅಪಾಯಕಾರಿ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡಿದ್ದೀರಲ್ಲಾ. ಇದು ತನಗೆ ತುಂಬಾ ಆಶ್ಚರ್ಯ ತಂದಿದೆ ಎಂದು ಹೇಳಿದ.

ಹಡಗಿನ ಕ್ಯಾಪ್ಟನ್ ಶ್ರೀಮಂತನೊಂದಿಗೆ ಕೇಳಿದ. ನೀವು ಯಾವ ವೃತ್ತಿಯನ್ನು ಮಾಡುತ್ತಿದ್ದೀರಿ? ಅದಕ್ಕೆ ಶ್ರೀಮಂತ ನಾನೊಂದು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ನಿಮ್ಮ ತಂದೆ ಯಾವ ವೃತ್ತಿಯಲ್ಲಿದ್ದರು? ಎಂದು ಕ್ಯಾಪ್ಟನ್ ಮರು ಪ್ರಶ್ನಿಸಿದ. ಅದಕ್ಕೆ ಅದೇ ಅಂಗಡಿಯಲ್ಲಿದ್ದರು ಎಂದು ಶ್ರೀಮಂತ ಉತ್ತರಿಸಿದ. ಕ್ಯಾಪ್ಟನ್ ಮುಂದುವರಿದು ತಮ್ಮ ಅಜ್ಜ ಯಾವ ವೃತ್ತಿಯನ್ನು ಮಾಡುತ್ತಿದ್ದರು? ಅದಕ್ಕೆ ಶ್ರೀಮಂತ ಅದೇ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದು ಹೇಳಿದ.

ನಿಮ್ಮ ತಂದೆ, ಅಜ್ಜ ಯಾವ ವೃತ್ತಿಯಲ್ಲಿದ್ದುಕೊಂಡು ಮರಣ ಹೊಂದಿದರು? ಎಂದು ಕ್ಯಾಪ್ಟನ್ ಕೇಳಿದಾಗ, ಶ್ರೀಮಂತ ಅದೇ ಅಂಗಡಿಯಲ್ಲಿ ಎಂದು ಉತ್ತರಿಸಿದ.

ನಿಮ್ಮ ತಂದೆ, ಅಜ್ಜ ಯಾವ ವೃತ್ತಿಯಲ್ಲಿದ್ದುಕೊಂಡು



ಮರಣಹೊಂದಿದರೋ ಅದೇ ಅಂಗಡಿಯಲ್ಲಿ ನೀವು ಮುಂದುವರಿಯುತ್ತಿದ್ದೀರಲ್ಲಾ ನನಗೆ ಇದು ತುಂಬಾ ಆಶ್ಚರ್ಯ ತಂದಿದೆ ಎಂದು ಕ್ಯಾಪ್ಟನ್ ಅದೇ ಧಾಟಿಯಲ್ಲಿ ಪ್ರತಿಕ್ರಿಯಿಸಿದ.

**ಫುರ್ಕಾನ್, ಮಂಗಳೂರು**

## ಹೆಲ್ಮೆಟ್ ಬೇಕಿಲ್ಲ

ಕಿಟ್ಟು ಟ್ರಾಫಿಕ್ ಪೊಲೀಸ್ ಸಂದರ್ಶಕ್ಕೆ ಹೋದ.

ಟ್ರಾಫಿಕ್ ಪೊಲೀಸ್: ಒಬ್ಬ ಮನುಷ್ಯ ರಸ್ತೆಯಲ್ಲಿ ಕತ್ತೆಯ ಮೇಲೆ ಸವಾರಿ ಮಾಡುತ್ತಾ ಬರುತ್ತಿರುತ್ತಾನೆ. ಆತ ಹೆಲ್ಮೆಟ್ ಧರಿಸಿರುವುದಿಲ್ಲ. ನೀನು ಆತನನ್ನು ದಂಡಿಸುವೆಯಾ?

ಕಿಟ್ಟು: ಇಲ್ಲ.

ಟ್ರಾಫಿಕ್ ಪೊಲೀಸ್: ಯಾಕೆ?

ಕಿಟ್ಟು: ಯಾಕೆಂದರೆ ಹೆಲ್ಮೆಟ್ ದ್ವಿಚಕ್ರ ವಾಹನ ಸವಾರರಿಗೆ ಮಾತ್ರ ಕಡ್ಡಾಯ !!!

# ''ಸಾರೇ ಜಹಾಂಸೆ ಅಚ್ಛಾ ಹಿಂದುಸ್ಥಾನ್ ಹಮಾರಾ''

ಪ್ರಸಿದ್ಧ ಕವಿ ಅಲ್ಲಾಮಾ ಇಕ್ಬಾಲ್ ಲಾಹೋರ್‌ನ ಒಂದು ಸರಕಾರಿ ಕಾಲೇಜಿನಲ್ಲಿ 106 ವರ್ಷಗಳ ಹಿಂದೆ ಅಧ್ಯಾಪಕನಾಗಿ ಸೇವೆಯಲ್ಲಿದ್ದ ಸಮಯ. ಕಾಲೇಜಿನಲ್ಲಿ ನಡೆಯುವ ಒಂದು ಕಾರ್ಯಕ್ರಮವನ್ನು ಉದ್ಘಾಟಿಸಲು ಅವರ ಶಿಷ್ಯನಾದ ಲಾಲಾ ಹರ್‌ದಯಾಳ್ ಅಲ್ಲಾಮಾ ಇಕ್ಬಾಲರನ್ನು ಕರೆದನು. ಉದ್ಘಾಟನಾ ಭಾಷಣಕ್ಕೆ ಬದಲು ಅಲ್ಲಾಮಾ ಇಕ್ಬಾಲ್ ''ಸಾರೇ ಜಹಾಂಸೆ ಅಚ್ಛಾ ಹಿಂದುಸ್ಥಾನ್ ಹಮಾರಾ'' ಎಂಬ ತಾನು ರಚಿಸಿದ ಹಾಡನ್ನು ಹಾಡಿದರು. ಇಂಡಿಯಾದ ಕೀರ್ತನೆ ಮತ್ತು ಇಂಡಿಯಾದ ವಿವಿಧ ಸಮುದಾಯದ ಜನರನ್ನು ಪರಸ್ಪರ ಉಕ್ಕಿನಂತೆ ಬೆಸೆಯಲು ಉಪದೇಶವಿರುವ ದ್ವಿಪದಿಗಳಾಗಿದ್ದವು ಅದು. ಅದರಲ್ಲಿರುವ ಪ್ರತಿಸಾಲುಗಳೂ ಇಂಡಿಯಾದ ಪ್ರಜೆಗಳಿಗೆ ಮಾತೃದೇಶದ ಮೇಲಿರಬೇಕಾದ ಗೌರವ ಮತ್ತು ಪ್ರೀತಿಯನ್ನು ಸಾರುತ್ತದೆ. ಇಂಡಿಯಾದ ಪರಂಪರೆ ಮತ್ತು ಮೌಲ್ಯಗಳು ಇದರಲ್ಲಿರುವ ಸಾಲುಗಳಲ್ಲಿ ಗುರುತು ಮೂಡಿಸಿವೆ.

ಲಾಹೋರ್‌ನ ಕಾಲೇಜಿನ ಒಂದು ಸಣ್ಣ ಹಾಲ್‌ನಲ್ಲಿ ಅಲ್ಲಾಮಾ ಇಕ್ಬಾಲ್ ಹಾಡಿದ ಈ ಸಾಲುಗಳು ಬಹಳ ಬೇಗನೆ ದೇಶದ ಹಳ್ಳಿ ಹಳ್ಳಿಗೂ ತಲುಪಿತು. ಹಾಗೆ ಆ ಹಾಡು ದೇಶದ ಮಹತ್ವವಾದ ರಾಷ್ಟ್ರಗೀತೆಯಾಗಿ ಪ್ರಖ್ಯಾತಿಹೊಂದಿತು.

1950ರಲ್ಲಿ ಪ್ರಖ್ಯಾತ ಸಂಗೀತಕಾರ ಹಾಗು ವಿದ್ವಾಂಸರಾಗಿದ್ದ ಪಂಡಿತ್ ರವಿಶಂಕರ್‌ರವರು ''ಸಾರೇ ಜಹಾಂಸೆ ಅಚ್ಛಾ ಹಿಂದುಸ್ಥಾನ್ ಹಮಾರಾ'' ಎಂಬ ಹಾಡಿಗೆ ಸಂಗೀತ ನೀಡಿದರು. ಮುಂದೆ ದೇಶದ ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳಲ್ಲೂ ಈ ಸಾಲುಗಳು ಹಾಡಲ್ಪಟ್ಟವು.

ಮಾಜಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಇಂಡಿಯಾದ ಪ್ರಪ್ರಥಮ ಬಾಹ್ಯಾಕಾಶ ಯಾನಿ ರಾಕೇಶ್ ಶರ್ಮಾರು ಅಂತರಿಕ್ಷದಲ್ಲಿರುವ ವೇಳೆ ''ಬಾಹ್ಯಾಕಾಶದಲ್ಲಿರುವಾಗ ಇಂಡಿಯಾ ನಿಮಗೆ ಹೇಗೆ ಕಾಣುತ್ತದೆ ?'' ಎಂದು ಕೇಳಿದರು. ತಕ್ಷಣ ಅದಕ್ಕವರು ನೀಡಿದ ಉತ್ತರ ''ಸಾರೇ ಜಹಾಂಸೆ ಅಚ್ಛಾ ಹಿಂದುಸ್ಥಾನ್ ಹಮಾರಾ '' ಎಂದಾಗಿತ್ತು.

1938 ರಲ್ಲಿ ಅಲ್ಲಾಮಾ ಇಕ್ಬಾಲ್ ನಿಧನ ಹೊಂದಿದರು. ಆ ವೇಳೆ ಮಹಾತ್ಮಾ ಗಾಂಧಿಯವರು ತನ್ನ ಸಂತಾಪ ಸೂಚಕ





ಪತ್ರದಲ್ಲಿ ಹೀಗೆ ಬರೆದರು : ''ಡಾ. ಇಕ್ಬಾಲರ ಕುರಿತು ಬರೆಯಲು ನನ್ನಲ್ಲಿ ಪದಗಳಿಲ್ಲ. ಮೊದಲ ಬಾರಿಗೆ ಯರವಾಡ ಜೈಲಲ್ಲಿದ್ದುಕೊಂಡು ಇಕ್ಬಾಲರ ಸಾರೆ ಜಹಾಂಸೆ ಅಚ್ಛಾ ಕವಿತೆಯನ್ನು ಹಾಡಿದಾಗ ಭಾವನೆಗೊಳಗಾಗಿ ನನ್ನ ಕಣ್ಣುಗಳು ಹನಿಗೂಡಿದವು. ಬಳಿಕ ನೂರಾರು ವೇದಿಕೆಗಳಲ್ಲಿ ನಾನು ಆ ಹಾಡನ್ನು ಹಾಡಿದೆನು. ಅದರಲ್ಲಿರುವ ಪ್ರತಿಯೊಂದು ಪದ ಮನಸ್ಸಿಗೆ ಆನಂದ ನೀಡುವ ಮತ್ತು ಕಣ್ಣನ್ನು ತಣಿಸುವುದಾಗಿತ್ತು.''

ಖಂಡಿತವಾಗಿಯೂ ಒಮ್ಮೆಯಾದರೂ ಸಾರೆ ಜಹಾಂಸೆ ಅಚ್ಛಾ ಎಂಬ ಮಹಾನ್ ಹಾಡನ್ನು ಹಾಡಿದವರು ಅಥವಾ ಅದನ್ನು ಕೇಳಿದವರು ಆ ಹಾಡನ್ನು ಬರೆದ ಡಾ. ಅಲ್ಲಾಮ ಇಕ್ಬಾಲರನ್ನು ಜೀವನವಿಡೀ ಮರೆಯಲು ಅಸಾಧ್ಯ.

★★★

(ಸಂಗ್ರಹ : ಝೂಕಿನ್ )

# ಬೀಳ್ಕೊಡುಗೆಯ ನೆನಪುಗಳು


ಫಾತಿಮಾ ನಸ್ರೀನ್
fathimanas09@gmail.com




ಒಂದು ಅಭೂತಪೂರ್ವ ಸಂಭ್ರಮ ಕಾರ್ಯಕ್ರಮ, ಐತಿಹಾಸಿಕ ಮಹೋತ್ಸವ ಅಥವಾ ಅಪೂರ್ವ ಕ್ಷಣಗಳು ಗತಿಸಿ ಹೋದರೆ ಮತ್ತು ಅಂತಹ ಸಂಭ್ರಮದಲ್ಲಿ ನಾವು ಪಾಲ್ಗೊಂಡಿದ್ದರೆ ಆ ಕ್ಷಣಗಳನ್ನು ಮರೆಯಲಾಗದ ಕ್ಷಣ ಎಂದು ಬಣ್ಣಿಸುತ್ತೇವೆ. ಅಂತಹ ಅನುಭಗಳನ್ನು ನಾವು ಜೀವನನುದ್ದಕ್ಕೂ ಜೋಪಾನವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತೇವೆ. ಅವುಗಳನ್ನು ನಾವು ಆಗಾಗ್ಗ ನೆನಪಿಸಿಕೊಳ್ಳುತ್ತಿರುತ್ತೇವೆ. ಈ ರೀತಿ ನೆನಪಿನಾಳದಲ್ಲಿ ಅಚ್ಚಳಿಯದೆ ಉಳಿಯುವ ಕ್ಷಣಗಳು ಪ್ರತಿಯೊಬ್ಬರ ಜೀವನದಲ್ಲಿಯೂ ಗತಿಸಿರುತ್ತದೆ. ನನ್ನ ವಿದ್ಯಾರ್ಥಿ ಜೀವನದ ಬೀಳ್ಕೊಡುಗೆ ಸಮಾರಂಭದ ಪ್ರತಿಯೊಂದು ಕ್ಷಣವೂ ನೆನಪಿನಾಳದಲ್ಲಿ ಹಾಗೆಯೇ ಉಳಿದುಕೊಂಡಿದೆ. ವಿದ್ಯಾರ್ಥಿ ಜೀವನದ ಬೀಳ್ಕೊಡುಗೆ, ವೃತ್ತಿ ಜೀವನದ ಬೀಳ್ಕೊಡುಗೆ, ವಿವಾಹ ಬಂಧನಕ್ಕೊಳಗಾಗಿ ತವರು ಮನೆಯ ಬೀಳ್ಕೊಡುಗೆ... ಹೀಗೆ ಬೀಳ್ಕೊಡುಗೆ ಎಂಬುದು ನಾವು ನೆನಪಿನ ಮೂಟೆಯನ್ನು ಹೊತ್ತುಕೊಂಡು ಜೀವನದ ಇನ್ನೊಂದು ಮಗ್ಗುಲಿನತ್ತ ಪಯಣಿಸುವುದು ಎಂದರ್ಥ.

ಇಂದು ನಾನು ಬೀಳ್ಕೊಡುಗೆ ವಿಚಾರದ ಕುರಿತು ಇಷ್ಟೊಂದು ಪೀಠಿಕೆ ನೀಡುತ್ತಿರುವುದಕ್ಕೆ ಒಂದು ಪ್ರಬಲವಾದ ಉದ್ದೇಶವಿದೆ. ಈಗ ಇಡೀ ಮುಸ್ಲಿಮ್ ಸಮುದಾಯ ‘ಬೀಳ್ಕೊಡುಗೆ’ಯ ಸಮಾರಂಭದಲ್ಲಿ ಮುಳುಗಿದೆ. ಪವಿತ್ರ ರಮಳಾನ್ ತಿಂಗಳನ್ನು ಬೀಳ್ಕೊಡುವ ಕ್ಷಣದಲ್ಲಿದ್ದೇವೆ. ರಮಳಾನ್ ತಿಂಗಳೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಂಡವರಿಗೆ ಮಾತ್ರ ಬೀಳ್ಕೊಡುಗೆಯ ಸಂದರ್ಭದಲ್ಲಿ ಅರಿವಿಲ್ಲದಂತೆಯೇ ಕಣ್ಣಿನಿಂದ ನೀರು ತೊಟ್ಟಿಕ್ಕುವುದು. ಆದರೆ ಬೀಳ್ಕೊಡುಗೆ ಅನಿವಾರ್ಯ. ಒಳ್ಳೆಯ ರೀತಿಯಲ್ಲಿ ಬೀಳ್ಕೊಟ್ಟರೆ ಮಾತ್ರ ಪಾರತ್ರಿಕ ಜೀವನದಲ್ಲಿ ಅದು ನಮ್ಮನ್ನು ನೆನಪಿನಲ್ಲಿಟ್ಟುಕೊಳ್ಳುವುದು.

ಅದೇನೇ ಇರಲಿ. ಬೀಳ್ಕೊಡುಗೆಯ ಸಂದರ್ಭದಲ್ಲಿ

ಕೆಲವೊಂದು ಅನುಭವ, ಅನಿಸಿಕೆಗಳನ್ನು ಹಂಚಿಕೊಳ್ಳುವುದು ಸಂಪ್ರದಾಯ. ಕೆಲವೊಮ್ಮೆ ಅನುಭವಗಳು ಪಾಠವಾಗಲೂ ಬಹುದು. ನನಗಾದ ಕೆಲವು ಅನುಭವಗಳನ್ನು ಈ ಸಂದರ್ಭದಲ್ಲಿ ಆತ್ಮೀಯ ಓದುಗರೊಂದಿಗೆ ಹಂಚಿಕೊಳ್ಳಬೇಕೆಂದಿದ್ದೇನೆ. ಯಾಕೆಂದರೆ, ಹೆಚ್ಚಿನ ಓದುಗರು ಕೂಡ ಈ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡವರೇ.

**ಅನುಭವ -1 :** ಇಫ್ತಾರ್‌ಗೆಂದು ತಾಯಿ ಮನೆಗೆ ಹೋಗಿದ್ದೆ. ಅಲ್ಲಿಗೆ ಹೋಗಿ ಬರಲು ಒಟ್ಟು 110 ಕಿ.ಮೀ. ಆಗುತ್ತದೆ. ಬಸ್ಸಿನಲ್ಲಿ 55 ಕಿ.ಮೀ. ಪ್ರಯಾಣ ಮುಗಿಸಿ ತಾಯಿ ಮನೆ ತಲುಪುವಷ್ಟರಲ್ಲಿ ವಿಪರೀತ ಸುಸ್ತಾಗಿ ಬಿಡುತ್ತದೆ. ರಮಳಾನ್‌ನಲ್ಲಿ ನಾನು ತಾಯಿ ಮನೆ ಬಿಟ್ಟರೆ ಬೇರೆ ಎಲ್ಲಿಗೂ ಪ್ರಯಾಣ ಮಾಡುವುದಿಲ್ಲ. ಹಾಗೊಂದು ವೇಳೆ ತಾಯಿ ಮನೆಗೆ ಹೋದರೂ ಅಂದೇ ಹಿಂದಿರುಗಲು ನನ್ನಿಂದ ಸಾಧ್ಯವಾಗುವುದಿಲ್ಲ. ಮಕ್ಕಳಿಗೆ ಶಾಲೆ ಇದ್ದರೂ ಬೆಳಗ್ಗೆ ಬೇಗನೇ ವಾಪಸಾಗುತ್ತೇನೆ. ಒಂದೇ ದಿನ 110ಕಿ.ಮೀ. ಪ್ರಯಾಣಿಸುವುದು ಎಂದರೆ ಅದು ನನ್ನಿಂದ ಸಾಧ್ಯವಾಗದ ಮಾತು.

ಕೆಲವರಿಗೆ ಇಷ್ಟು ದೂರ ನಿತ್ಯ ಪ್ರಯಾಣಿಸುವುದು ಅನಿವಾರ್ಯ. ಕೆಲಸಕ್ಕೆಂದು ಅವರಿಗೆ ಅಷ್ಟು ದೂರ ಬಸ್ಸಿನಲ್ಲಿ ಪ್ರಯಾಣಿಸಲೇ ಬೇಕು. ಉಪವಾಸ ಹಿಡಿದು ಅಷ್ಟು ದೂರ ಪ್ರಯಾಣಿಸುವ ಅವರನ್ನು ನಾನು ಯಾವಾಗಲೂ ಪ್ರಶಂಸಿಸುತ್ತೇನೆ. ಅವರು ನಿತ್ಯ 110 ಕಿ.ಮೀ. ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾರೆ. ಸಂಜೆಯ ವೇಳೆಗೆ ಅವರು ತುಂಬಾ ಸುಸ್ತಾಗಿ ಮನೆ ಮುಂದೆ ನಡೆದುಕೊಂಡು ಹೋಗುವುದನ್ನು ನೋಡಿ ನನಗೆ ಅವರ ಮೇಲೆ ಸಹಾನುಭೂತಿ ಉಂಟಾಗುತ್ತದೆ.

ಮೊನ್ನೆ ತಾಯಿ ಮನೆಗೆಂದು ನಾನು ಬಸ್ಸು ಹತ್ತಿದೆ. ಬಸ್ಸು ಚಾಲಕ ನನ್ನ ಸಂಬಂಧಿಕನೇ ಆಗಿದ್ದ. ಧಾರ್ಮಿಕ ಶ್ರದ್ಧೆಯುಳ್ಳ ವ್ಯಕ್ತಿ ಆತ. ಆತ ಅದೆಷ್ಟು ಬಾರಿ ಈ ಮಾರ್ಗವಾಗಿ ಪ್ರಯಾಣಿಸುತ್ತಾನೆ ಎಂದು ಲೆಕ್ಕಹಾಕಿದೆ. ದಿನಕ್ಕೆ 6 ಟ್ರಿಪ್ ಎಂದರೂ 330 ಕಿ.ಮೀ. ಆಗುತ್ತದೆ ! ಮಗ್‌ರಿಬ್ ಆಝಾನ್ ವೇಳೆಗೆ ಬಸ್ಸು ಚಲಾಯಿಸುತ್ತಲೇ ಇರುವ ಆತ, ಪಕ್ಕದಲ್ಲೇ ಒಂದು ಬಾಟಲಿ ನೀರು, ಖರ್ಜೂರ ಇಟ್ಟುಕೊಂಡು ಇಫ್ತಾರ್ ನಿರ್ವಹಿಸುತ್ತಾನೆ. ಆ ವೇಳೆಗೆ ನಾವೆಲ್ಲ ಹಲವು ಬಗೆಯ ಶರಬತ್ತು, ಕಸ್ಟರ್ಡ್, ಸಮೋಸಗಳ ಮುಂದೆ ಹೋರಾಟದಲ್ಲಿರುತ್ತೇವೆ. ಆದ್ದರಿಂದ ನಮಗಿಂತಲೂ ಹೆಚ್ಚು ಕಷ್ಟಪಟ್ಟು ಉಪವಾಸ ವ್ರತ ಆಚರಿಸುವ ಆ ಬಸ್ಸು ಚಾಲಕನನ್ನು ಶ್ಲಾಘಿಸಲೇಬೇಕಲ್ಲವೇ? ಆತ ಮನೆಗೆ ತಲುಪುವಾಗ ಸಮಯ 7.30 ಆಗಿರುತ್ತದೆ. ಅನಂತರ ಹೊಟ್ಟೆಗೆ ಏನಾದರೂ ತಿಂದು ತರಾವೀಹ್ ನಮಾಝ್‌ಗೆ ನಿತ್ಯವೂ ದೌಡಾಯಿಸುತ್ತಾನೆ. ಹೀಗೆ ವೃತ್ತಿ ಮತ್ತು ಅಲ್ಲಾಹನ ಆರಾಧನೆಯನ್ನು ಚಾಚೂ ತಪ್ಪದೆ ಪಾಲಿಸುತ್ತಿರುವ ಆತನ ಉಪವಾಸ ವ್ರತವು ನನಗೆ ವಿಶೇಷವೆಂದು ಕಂಡಿತು. ಅವರೆಗೆ ನಾನು ಕೇವಲ ಆರಾಧನಾ ಕರ್ಮದಲ್ಲೇ ಮುಳುಗಿ ಉಪವಸ ವ್ರತ ಆಚರಿಸುತ್ತಿದ್ದವರನ್ನು ಮಾತ್ರ ನೋಡಿ ಮನಸ್ಸಿನಲ್ಲೇ ಶ್ಲಾಘನೆ ವ್ಯಕ್ತಪಡಿಸಿದ್ದೆ.

ಒಂದು ನಿರ್ದಿಷ್ಟ ಸೀಟಿನಲ್ಲಿ ಏಕಾಗ್ರ ಚಿತ್ತದಿಂದ ಒಂದೂವರೆ ಗಂಟೆಗಳ ಕಾಲ ಕುಳಿತುಕೊಂಡು ಬಸ್ಸು ಚಲಾಯಿಸುವುದು ಅಷ್ಟು ಸುಲಭದ ಸಂಗತಿಯಲ್ಲ. ಅದರಲ್ಲೂ ವಾಹನ ಚಲಾಯಿಸುವವರಿಗೆ ಹಸಿವು ಜಾಸ್ತಿ ಇರುತ್ತದೆ ಎಂದು ಹೇಳುವುದು ಕೇಳಿದ್ದೇನೆ. ಅದು ನಿಜವೇ ಆಗಿರಬಹುದು. ಕಷ್ಟದ ಕೆಲಸ, ವೃತ್ತಿ ಮಾಡಿಕೊಂಡು ಆ ನೆಪದಲ್ಲಿ ಉಪವಾಸ ವ್ರತ ಆಚರಿಸದೇ ಇರುವವರಿಗೆ ಮತ್ತು ಆರೋಗ್ಯವಿದ್ದೂ ಉಪವಾಸ ಆಚರಿಸದಿರುವ ಕೆಲವರಿಗೂ ಬಸ್ಸು ಚಾಲಕನ ಉಪವಾಸ ಮಾದರಿಯಾಗಬೇಕು, ಸ್ಫೂರ್ತಿಯಾಗಬೇಕು ಎಂಬ ಉದ್ದೇಶದಿಂದ ಈ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.

**ಅನುಭವ-2 :** ಪಕ್ಕದ ರಹೀಮಾಕನ ಹೊಟೇಲು ಎಂದರೆ ಊರಿನಲ್ಲಿ ಫೇಮಸ್ಸು. ಹಾಗೆಂದು ಅದು ದೊಡ್ಡ ಹೊಟೇಲು ಅಲ್ಲ. ಸಣ್ಣ ತಟ್ಟಿಯ ಹೊಟೇಲು. ಆದರೆ ಸದಾ ಗಿರಾಕಿಗಳಿಂದ ತುಂಬಿರುತ್ತದೆ. ಆದಿತ್ಯವಾರ ಮಾತ್ರ ಅವರ ಹೊಟೇಲು ಮುಚ್ಚಿರುತ್ತದೆ. ಅಂದು ಗಿರಾಕಿಗಳು ಇಲ್ಲದಿರುವುದರಿಂದ ಹೊಟೇಲ್‌ಗೆ ರಜೆ ಇರುತ್ತದೆ. ರಹೀಮಾಕನ ಹೊಟೇಲ್‌ಗೆ ಎಲ್ಲ ಧರ್ಮದವರು ಗಿರಾಕಿಗಳೇ. ಅದರಲ್ಲೂ ಶೇ.90ರಷ್ಟು ಮಂದಿ ಇತರ ಧರ್ಮೀಯರೇ ಆ ಹೊಟೇಲ್‌ನ ಗಿರಾಕಿಗಳು. ಮನೆಗೆ ಯಾರಾದರೂ ನೆಂಟರು ಅಚಾನಕಾಗಿ ಬಂದರೆ ರಹೀಮಾಕನ ಮೊಬೈಲ್‌ಗೆ ಫೋನು ಮಾಡಿದರೆ ಸಾಕು, ಕ್ಷಣ ಮಾತ್ರದಲ್ಲಿ ಮನೆಗೆ ಘಮಘಮಿಸುವ ಬಿರಿಯಾನಿ ತಲುಪುತ್ತದೆ.

ರಹೀಮಾಕನ ಮನೆಯಲ್ಲಿ ಏನೇ ಸಭೆ ಸಮಾರಂಭ ನಡೆಯುವುದಿದ್ದರೂ ಆದಿತ್ಯವಾರವೇ ಆಗಬೇಕು. ಬೇರೆ ಯಾವ ದಿನವೂ ಅವರ ಮನೆಯಲ್ಲಿ ಕಾರ್ಯಕ್ರಮ ನಡೆಯುವುದಿಲ್ಲ. ಆದಿತ್ಯವಾರದ ಮದುವೆ ಸಮಾರಂಭಕ್ಕೆ ಮಾತ್ರ ರಹೀಮಾಕ ಹೋಗುತ್ತಾರೆ. ಅದು ಬಿಟ್ಟರೆ ಬೇರೆ ಯಾವುದೇ ದಿನದಲ್ಲಿ ಯಾರೇ ಮದುವೆಗೆ ಕರೆದರೂ ಅವರು ಹೋಗುವುದಿಲ್ಲ. ಅವರನ್ನು ಊರಿನಲ್ಲಿ ನ್ಯಾರಾಸೆ ರಹೀಮಾಕ (ಆದಿತ್ಯವಾರ ರಹೀಮಾಕ) ಎಂದೂ ಕರೆಯುವುದುಂಟು. ವ್ಯಾಪಾರದಲ್ಲಿ ಖಡಕ್ ಲೆಕ್ಕ ಇಟ್ಟುಕೊಳ್ಳುವ ಎರಡು ರೂಪಾಯಿಯನ್ನೂ ವಸೂಲಿ ಮಾಡದೇ

ಬಿಡುವುದಿಲ್ಲ.

ಇಂತಹ ರಹೀಮಾಕನ ಹೊಟೇಲು ರಮಳಾನ್ ತಿಂಗಳಿಡೀ ಬಂದ್ ಆಗಿರುತ್ತದೆ. ವ್ಯಾಪಾರ ವಹಿವಾಟು ಎಂದು ಬದುಕಿ ತನ್ನ ಕೌಟುಂಬಿಕ ಸಭೆ ಸಮಾರಂಭಗಳಿಗೆ ರಜೆಯನ್ನೂ ಮಾಡದೆ ಹೊಟೇಲು ನಡೆಸುತ್ತಿದ್ದ ರಹೀಮಾಕ ಒಂದು ತಿಂಗಳಿಡೀ ಹೊಟೇಲನ್ನು ಮುಚ್ಚುತ್ತಾರೆ ಎಂದರೆ ಅದನ್ನು ನಾವು ಮೆಚ್ಚಲೇಬೇಕು. ಕೇವಲ ರಹೀಮಾಕ ಮಾತ್ರವಲ್ಲ, ಹೊಟೇಲು ಉದ್ಯಮ ನಡೆಸುವ ಬಹುತೇಕ ಮಂದಿ ತಮ್ಮ ವ್ಯಾಪಾರ ವಹಿವಾಟು ಸ್ಥಗಿತಗೊಳಿಸುತ್ತಾರೆ. ಅದರಿಂದ ಅವರ ಕುಟುಂಬದ ಆದಾಯಕ್ಕೆ ಎಷ್ಟೇ ತೊಂದರೆಯಾದರೂ ಚಿಂತೆಯಿಲ್ಲ. ಇಂತಹ ಮನೋಸ್ಥಿತಿಯನ್ನು ಸ್ವಯಂ ಆಗಿ ಸೃಷ್ಟಿಸುವ ರಮಳಾನ್ ತಿಂಗಳು ಇದೀಗ ನಮ್ಮಿಂದ ದೂರ ಹೋಗುತ್ತಿದೆ. ಬೀಳ್ಕೊಡುಗೆಯ ಈ ಸಂದರ್ಭದಲ್ಲಿ ರಹೀಮಾನಕನಂಥವರ ಮನೋಸ್ಥಿತಿಯು ನೆನಪಿಗೆ ಬರುತ್ತಿದೆ.

**ಅನುಭವ 3 :** ರಮಳಾನ್ ತಿಂಗಳ ಕೊನೆಯ 10ರ ಪ್ರತಿಯೊಂದು ಕ್ಷಣಗಳು ಅತ್ಯಮೂಲ್ಯವಾದದ್ದು. ಆದುದರಿಂದ ಈ ಸಮಯದಲ್ಲಿ ಪ್ರತಿಯೊಬ್ಬರೂ ಹೆಚ್ಚು ಆರಾಧನೆಯಲ್ಲಿ ತೊಡಗಿರಬೇಕು. ಕುರ್‌ಆನ್ ಪಾರಾಯಣ, ದ್ವಿಕ್ರ್ ಹೇಳುವುದು ಹಾಗೂ ಇತರ ಸತ್ಕರ್ಮಗಳಿಗೆ ಸಮಯವನ್ನು ಮೀಸಲಿರಿಸಬೇಕು. ಆದರೆ ಕೊನೆಯ 10 ಎಂಬುದು ಶಾಪಿಂಗ್‌ಗಾಗಿ ಮೀಸಲಿಡುತ್ತಿರುವ ನಾವು ರಮಳಾನ್ ತಿಂಗಳನ್ನು ಒಳ್ಳೆಯ ರೀತಿಯಲ್ಲಿ ಬೀಳ್ಕೊಡುತ್ತಿದ್ದೇವೆಯೇ ಎಂಬುದನ್ನು ಪರಾಮರ್ಶಿಸಿಕೊಳ್ಳಬೇಕು. ಅಂಗಡಿ-ಅಂಗಡಿ ಸುತ್ತಾಡುವುದರಲ್ಲೇ ಹೊತ್ತು ಕಳೆದು ನಮಾಝ್‌ನ್ನು ಕಳಾ ಆಗಿ ನಿರ್ವಹಿಸುತ್ತಿರುವವರಲ್ಲಿ ಮಹಿಳೆಯರೇ ಹೆಚ್ಚು. ರಮಳಾನ್ ತಿಂಗಳನ್ನು ಬೀಳ್ಕೊಡುತ್ತಿರುವ ಸಂದರ್ಭದಲ್ಲಿ ನಮ್ಮ ಒಂದು ತಿಂಗಳ ಕರ್ಮಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳಲೇಬೇಕು.

ರಮಳಾನ್ ತಿಂಗಳನ್ನು ಅತ್ಯುತ್ತಮ ರೀತಿಯಲ್ಲಿ ಉಪಚರಿಸಿ, ಬೀಳ್ಕೊಟ್ಟ ಸಜ್ಜನರ ಪಾಲಿಗೆ ಅಲ್ಲಾಹನು ನಮ್ಮೆಲ್ಲರನ್ನು ಸೇರಿಸಲಿ. ಆಮೀನ್.

ಎಲ್ಲರಿಗೂ ಈದ್ ಮುಬಾರಕ್...


# SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

**OUR SERVICES:**

•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

**OUR FREE SERVICES:**

SAUDI AIR-TICKET RE-CONFIRMATION
RE-ENTRY VISA DATE CHECKING

**CONTACT**

**HEAD OFFICE:**
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

**MANGALORE OFFICE**
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
**Tel: 0091 824 2442020. (4lines)**
Telefax: 00918244277690
Mobile: 0091 9448253825
Email:suhanamglr@yahoo.co.in

**FOR OUR WAKALA**



ಮಾಹಿತಿ

# ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005



ಕಳೆದ 10 ವರ್ಷಗಳಿಂದ ಸಾಮಾಜಿಕ ಕಾರ್ಯಕರ್ತನಾಗಿ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಅಡ್ವಕೇಟ್ ಅಬ್ದುಲ್ ಮಜೀದ್ ಖಾನ್ ಅವರು ಪ್ರಸ್ತುತ ಪಾಕ್ಷಿಕದ ಮಾಹಿತಿ ಅಂಕಣದ ಮೂಲಕ ಓದುಗರಿಗೆ ದಿನನಿತ್ಯದ ಕಾನೂನು ಮಾಹಿತಿ, ಸರಕಾರಿ ಯೋಜನೆಗಳ ಮಾಹಿತಿ, ಮಾಹಿತಿ ಹಕ್ಕು ಕಾಯ್ದೆಯ ಮಾಹಿತಿಗಳನ್ನು ನೀಡಲಿದ್ದಾರೆ.

ಬೆಂಗಳೂರು ಹೈಕೋರ್ಟ್, ಮಂಗಳೂರು ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಪುತ್ತೂರು ಮ್ಯಾಜಿಸ್ಟ್ರೇಟ್ ಹಾಗೂ ಜಿಲ್ಲಾ ತ್ವರಿತಗತಿ ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ನಡೆಸಿ ಅನುಭವ ಹೊಂದಿದವರಾಗಿದ್ದಾರೆ.

ಜನಸಾಮಾನ್ಯರಿಗೆ ಸುಲಭವಾಗಿ ಕಾನೂನು ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಪತ್ರಿಕೆಯು ಈ ಅಂಕಣವನ್ನು ಪ್ರಾರಂಭಿಸಿದೆ.

ಯಾವುದೇ ಕಾನೂನು ಮಾಹಿತಿಗಾಗಿ ಅಬ್ದುಲ್ ಮಜೀದ್ ಖಾನ್‌ರನ್ನು ಮೊಬೈಲ್ ಸಂಖ್ಯೆ 9741668930, 9449894937 ಸಂಪರ್ಕಿಸಬಹುದು.

ಪ್ರಸಕ್ತ ಸನ್ನಿವೇಶದಲ್ಲಿ ಕೂಲಿ ಮಾಡುತ್ತೇನೆಂದರೂ ಉದ್ಯೋಗಗಳು ಸಿಗದಿರುವ ಪರಿಸ್ಥಿತಿ ಭಾರತದಲ್ಲಿದೆ. ಇಂತಹ ಸಾವಿರಾರು ಕುಟುಂಬಗಳಿಗೆ ಕನಿಷ್ಠ ಕೂಲಿ ಸಿಗುವ ಖಾತರಿ ಉದ್ಯೋಗವನ್ನು ದೊರಕಿಸಿ ಕೊಡುವಂತಹದೇ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005'. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆರ್ಥಿಕ ಸಾಮರ್ಥ್ಯಕ್ಕೊಳಪಟ್ಟು ದೇಶದ ಎಲ್ಲ ಗ್ರಾಮೀಣ ಪ್ರದೇಶಗಳಿಗೂ ಅನುಕೂಲ ಸಿಗುವಂತೆ ವಿವಿಧ ಹಂತಗಳಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

**ಈ ಅಧಿನಿಯಮದ ಮುಖ್ಯ ಉದ್ದೇಶಗಳು- ಅಂಶಗಳು**

1. ಬಡ ಕುಟುಂಬಗಳ ಬದುಕಿನ ಭದ್ರತೆಗಾಗಿ ದೈಹಿಕ ಕೆಲಸ ಮಾಡಲಿಚ್ಛಿಸುವ ಬಡ ಕುಟುಂಬಗಳ ವಯಸ್ಕ ಸದಸ್ಯರಿಗೆ ಕುಶಲೇತರ ಕೆಲಸ ದೊರಕಿಸಿಕೊಡುವುದರ ಮೂಲಕ ವರ್ಷವೊಂದರಲ್ಲಿ ಒಂದು ನೂರು ದಿನಗಳ ದುಡಿಮೆ ಹಣ (ಕೂಲಿ) ಸಿಗುವ ಖಾತರಿ ಉದ್ಯೋಗವನ್ನು ಗ್ರಾಮೀಣ ಪ್ರದೇಶದಲ್ಲಿರುವ ಬಡವರಿಗೆ ಒದಗಿಸುವುದು.

2. ಕೇಂದ್ರ ಸರಕಾರವು ನಿಗದಿಗೊಳಿಸುವ ದರದಲ್ಲಿ ಕೆಲಸವನ್ನು ಒದಗಿಸುವುದು. ಹೀಗೆ ನಿಗದಿಪಡಿಸಿದ ದರ ಅಥವಾ ರಾಜ್ಯ ಸರಕಾರವು ಕೃಷಿ ಕಾರ್ಮಿಕರಿಗೆ ನಿಗದಿಗೊಳಿಸಿರುವ ಕನಿಷ್ಠ ದುಡಿಮೆ ಹಣವನ್ನು ಆ ಪ್ರದೇಶಕ್ಕೆ ಅನ್ವಯವಾಗುವ ದುಡಿಮೆ ಹಣವೆಂದು ಪರಿಗಣಿಸಲಾಗುವುದು.

3. ಒಂದು ವೇಳೆ ಅರ್ಹ ಅರ್ಜಿದಾರರಿಗೆ ಈ ಅಧಿನಿಯಮದ ಉಪಬಂಧಗಳಿಗನುಗುಣವಾಗಿ ನಿಗದಿತ ಅವಧಿಯೊಳಗೆ ಕೆಲಸವನ್ನು ಕೊಡದಿದ್ದರೆ ನಿಗದಿತ ದರದಲ್ಲಿ ಆತನಿಗೆ ನಿರುದ್ಯೋಗ ಭತ್ಯೆಯನ್ನು ಕೊಡುವ ಹೊಣೆ ರಾಜ್ಯ ಸರಕಾರದ್ದಾಗಿರುತ್ತದೆ.

4. ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಪರಿಶೀಲಿಸಲು ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಪರಿಷತ್ತುಗಳನ್ನು (ಕೌನ್ಸಿಲ್) ರಚಿಸಲಾಗಿದೆ.

5. ಈ ಕಾಯ್ದೆಯ ಅನುಷ್ಠಾನಕ್ಕಾಗಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ವಿಶೇಷ ನಿಧಿಯನ್ನು ಸ್ಥಾಪಿಸಿವೆ.

**ನಿಯಮಗಳು**

1. ಈ ಕಾಯ್ದೆಯ ಪ್ರಕಾರ 18 ವರ್ಷ ತುಂಬಿದ ವ್ಯಕ್ತಿಯನ್ನು ಪ್ರಾಪ್ತ ವಯಸ್ಕ ಎಂದು ಪರಿಗಣಿಸಲಾಗುತ್ತದೆ.

2.ಅರ್ಜಿದಾರನೆಂದರೆ ಅವನು ಕುಟುಂಬದ ಯಜಮಾನನಾಗಿರಬೇಕು ಅಥವಾ ಈ ಯೋಜನೆಯಡಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ಕುಟುಂಬದ ಪ್ರಾಪ್ತ ವಯಸ್ಕ ಸದಸ್ಯ ಅಥವಾ ಸದಸ್ಯೆ.

3.ಕುಟುಂಬವೆಂದರೆ ಒಂದು ಕುಟುಂಬದ

ಸದಸ್ಯರಾಗಿದ್ದುಕೊಂಡು, ರಕ್ತ ಸಂಬಂಧಿಗಳಾಗಿದ್ದು, ದತ್ತಕಗಳಾಗಿದ್ದು ಅಥವಾ ಮದುವೆಯಿಂದಾಗಿ ಸಂಬಂಧಿಗಳಾಗಿದ್ದು ಸಾಮಾನ್ಯವಾಗಿ ಒಟ್ಟಿಗೆ ವಾಸಿಸುತ್ತಿದ್ದು ಒಂದೇ ಪಡಿತರ ಚೀಟಿ (ರೇಶನ್ ಕಾರ್ಡ್) ಹೊಂದಿರಬೇಕು.

4. ಕುಶಲೇತರ ದೈಹಿಕ ಕೆಲಸವೆಂದರೆ ಯಾವುದೇ ದೈಹಿಕ ಕೆಲಸವಾಗಿದ್ದು, ಯಾವುದೇ ತರಬೇತಿ ಅಥವಾ ಕುಶಲತೆಯ ಅಗತ್ಯವಿಲ್ಲದೆ ಪ್ರಾಪ್ತ ವಯಸ್ಕ ವ್ಯಕ್ತಿ ಮಾಡಬಹುದಾದ ಕೆಲಸ.

5. ಕನಿಷ್ಠ ವೇತನ ಅಥವಾ ದುಡಿಮೆಯ ಹಣ ಎಂದರೆ 1948ರ ಕನಿಷ್ಠ ವೇತನ ಕಾಯ್ದೆಯಡಿ ರಾಜ್ಯ ಸರಕಾರವು ಆ ಪ್ರದೇಶದ ಕೃಷಿ ಕಾರ್ಮಿಕರಿಗೆ ನಿಗದಿಪಡಿಸಿದ ಕನಿಷ್ಠ ವೇತನ ಆಗಿರುತ್ತದೆ.

ಹಾಗಾಗಿ ಈ ಯೋಜನೆಯಡಿಯಲ್ಲಿ ತನಗೆ ನೀಡಿದ ಕೆಲಸ ವನ್ನು ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ತಾನು ಮಾಡಿದ ಕೆಲಸಕ್ಕೆ ಪ್ರತಿ ದಿನದ ಕೆಲಸದ ದುಡಿಮೆ ಹಣದ ದರದಂತೆ ವೇತನವನ್ನು ಪಡೆಯುತ್ತಾನೆ. ಮತ್ತು ವಿಶೇಷ ಸಂದರ್ಭ ಹೊರತುಪಡಿಸಿ ದಿನದ ದುಡಿಮೆ ಹಣದ ವಿಲೇವಾರಿಯನ್ನು ವಾರಕ್ಕೆ ಒಂದು ಬಾರಿಯಂತೆ ಮಾಡುವುದು. ಕೆಲಸ ಮಾಡಿದ ಗರಿಷ್ಠ ಹದಿನೈದು ದಿನಗಳೊಳಗಾಗಿ ದುಡಿಮೆಯ ಹಣವನ್ನು ಪಾವತಿಸಬೇಕು.

ರಾಜ್ಯ ಸರಕಾರವು ತಾನು ರೂಪಿಸಿರುವ ಈ ಉದ್ಯೋಗ ಖಾತರಿ ಯೋಜನೆಯನ್ನು ಕನಿಷ್ಠ ಎರಡು ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಬೇಕು.

**ನಿರುದ್ಯೋಗ ಭತ್ಯೆ**

1. ಈ ಯೋಜನೆಯಡಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರನು ಆ ಉದ್ಯೋಗವನ್ನು ಬಯಸಿ ಆತ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ದಿನದಿಂದ ಹದಿನೈದು ದಿನಗಳೊಳಗಾಗಿ ಮತ್ತು ಯಾವ ದಿನದಿಂದ ಉದ್ಯೋಗ ಬಯಸಿರುತ್ತಾನೆ (ಯಾವುದು ನಂತರವೋ ಆ ದಿನ) ಆ ದಿನದಿಂದ ಆತನಿಗೆ ಉದ್ಯೋಗ ಕೊಡದಿದ್ದರೆ ಆ ವರ್ಷಕ್ಕೆ ನೂರು ದಿನ ಮೀರದಂತೆ ಪ್ರತಿ ದಿನ ನಿರುದ್ಯೋಗ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ. ಇಲ್ಲಿ ರಾಜ್ಯ ಸರಕಾರದ ಹೊಣೆಯು ಕೆಲವು ನಿಯಮಗಳಿಗೆ ಒಳಪಟ್ಟಿದೆ.

ಎ) ಸ್ಥಳೀಯ ಗ್ರಾಮ ಪಂಚಾಯತಿ ಅಥವಾ ಸಂಬಂಧಿತ ಅಧಿಕಾರಿಯು ಅರ್ಜಿದಾರ ಅಥವಾ ಕುಟುಂಬದ ಪ್ರಾಪ್ತ ವಯಸ್ಕನೊಬ್ಬನನ್ನು ಕೆಲಸಕ್ಕೆ ಕಳುಹಿಸುವಂತೆ ಆದೇಶ ನೀಡಿದಾಗ ಅಥವಾ

ಬಿ) ಯಾವ ಅವಧಿಗೆ ಉದ್ಯೋಗ ಬೇಕೆಂದು ವಿನಂತಿಸಿಕೊಂಡಿದ್ದಾರೋ ಮತ್ತು ಆ ಅವಧಿ ಮುಗಿದರೂ ಸಹ



ಅರ್ಜಿದಾರನ ಕುಟುಂಬದ ಯಾವುದೇ ಸದಸ್ಯನು ಕೆಲಸಕ್ಕೆ ಹಾಜರಾಗದಿದ್ದಾಗ ಅಥವಾ

ಸಿ) ಪ್ರಸಕ್ತ ವರ್ಷದಲ್ಲಿ ಕೂಲಿ ಮತ್ತು ನಿರುದ್ಯೋಗ ಭತ್ಯೆಯಿಂದ ಒಟ್ಟು ಕನಿಷ್ಠ ಒಂದು ನೂರು ದಿನಗಳ ಕೆಲಸಕ್ಕೆ ದುಡಿಮೆ ಹಣ ಪಡೆದಾಗ ಕೊನೆಗೊಳ್ಳುತ್ತದೆ.

2. ಈ ನಿರುದ್ಯೋಗ ಭತ್ಯೆಯನ್ನು ವಿಲೇವಾರಿ ಹಾಗೂ ಮಂಜೂರು ಮಾಡುವ ಅಧಿಕಾರವು ರಾಜ್ಯ ಸರಕಾರಕ್ಕಿದ್ದು ಸ್ಥಳೀಯ ಕಾರ್ಯಕ್ರಮ ಅಧಿಕಾರಿ ಅಥವಾ ಸ್ಥಳೀಯ ಪ್ರಾಧಿಕಾರದ ಮೂಲಕ ಮಾಡುವುದು. ನಿರುದ್ಯೋಗ ಭತ್ಯೆಯನ್ನು ಹದಿನೈದು ದಿನಗಳ ಒಳಗಾಗಿ ವಿಲೇವಾರಿ ಮಾಡಬೇಕಾಗುತ್ತದೆ. ಅಸಾಧ್ಯ ಸಂದರ್ಭದಲ್ಲಿ ಪಂಚಾಯತಿ ಕಚೇರಿಯಲ್ಲಿ ಸೂಚನಾ ಫಲಕದಲ್ಲಿ ನೋಟೀಸನ್ನು ಅಂಟಿಸಿ ಆದಷ್ಟು ಬೇಗ ನಿರುದ್ಯೋಗ ಭತ್ಯೆಯನ್ನು ಪಾವತಿಸಬೇಕು.

**ಅನರ್ಹತೆಗಳು:**

1. ಕುಟುಂಬವು ಯಾವುದೇ ಯೋಜನೆಯಡಿ ಉದ್ಯೋಗವನ್ನು ಒಪ್ಪಿಕೊಳ್ಳದಿದ್ದಾಗ.

2. ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಗೆ ಅಥವಾ ಸಂಬಂಧಿತ ಅಧಿಕಾರಿಯಲ್ಲಿಗೆ ಕೆಲಸಕ್ಕೆ ಹಾಜರಾಗಲು ಸೂಚಿಸಿದ ದಿನದಿಂದ 15 ದಿನಗಳೊಳಗಾಗಿ ಕೆಲಸಕ್ಕೆ ಹಾಜರಾಗದಿದ್ದಾಗ.

3. ಸತತವಾಗಿ ಒಂದು ವಾರಕ್ಕೂ ಹೆಚ್ಚು ಕಾಲ ಅಥವಾ ಯಾವುದೇ ಒಂದು ತಿಂಗಳಲ್ಲಿ ಒಟ್ಟು ವಾರಕ್ಕೂ ಹೆಚ್ಚು ಕಾಲ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಾದರೆ ಆಗ ನಿರುದ್ಯೋಗ ಭತ್ಯೆಯನ್ನು ಮೂರು ತಿಂಗಳುಗಳ ಕಾಲ ಪಡೆಯಲು ಅನರ್ಹನಾಗುತ್ತಾನೆ. ಆದರೆ ಕೆಲಸ ಕೇಳಲು ಯಾವುದೇ ಅಡ್ಡಿ ಇರುವುದಿಲ್ಲ.

ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ, ಕಾರ್ಯಕ್ರಮ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಈ ಯೋಜನೆಯನ್ನು

41ನೇ ಪುಟದಿಂದ...

# ಸಾಮಾಜಿಕ ಪರಿವರ್ತಕನಾಗಿ 'ಶಿಕ್ಷಕ'


ಡಾ.ಸರ್ವಪಲ್ಲಿ ರಾಧಾಕೃಷ್ಣ

ದೇಶದ ಮಾಜಿ ರಾಷ್ಟ್ರಪತಿ, ಮಹಾನ್ ಶಿಕ್ಷಣ ತಜ್ಞ ಡಾ.ಸರ್ವಪಲ್ಲಿ ರಾಧಾಕೃಷ್ಣರವರ ಜನ್ಮದಿನವಾದ ಸಪ್ಟಂಬರ್ 5ರಂದು ದೇಶದಲ್ಲಿ 'ಶಿಕ್ಷಕರ ದಿನ'ವನ್ನಾಗಿ ಆಚರಿಸಲಾಗುತ್ತದೆ.

ಶಿಕ್ಷಕರು ಜ್ಞಾನ ಪ್ರಸಾರಕರಾಗಿದ್ದಾರೆ. ಇಸ್ಲಾಂನಲ್ಲಿ ಜ್ಞಾನ ಪ್ರಸಾರಕ್ಕೆ ಬಹಳ ಪ್ರಾಮುಖ್ಯತೆ ಇದೆ. ಒಬ್ಬ ವಿದ್ಯಾರ್ಥಿಯ ಉನ್ನತಿ ಇಲ್ಲವೇ ಅವನತಿಗೆ 'ಶಿಕ್ಷಕರು' ಕಾರಣರಾಗಬಲ್ಲರು. ಅಂಥಹ ದಿವ್ಯಶಕ್ತಿ ಶಿಕ್ಷಕರಲ್ಲಿದೆ. ಶಿಕ್ಷಕರೆಂದರೆ ಕೇವಲ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವವರು ಮಾತ್ರವಾಗಿರಬಾರದು. ಬದಲಾಗಿ ಸಮಾಜದ ಆಗು ಹೋಗುಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸಿ, ಪರಿಹಾರ ಸೂಚಿಸುವವರಾಗಬೇಕು.

ಸಮಾಜ ದಾರಿ ತಪ್ಪಿದಾಗ ಅದನ್ನು ತಿದ್ದಿ ತೀಡಿ ಯಾವುದು ಸರಿ? ಯಾವುದು ತಪ್ಪು? ಎಂದು ವಿಶ್ಲೇಷಿಸಿ ತಿಳಿ ಹೇಳಬೇಕಾದವರಾಗಬೇಕು. ಆಗ ಮಾತ್ರ ತಮ್ಮ ವೃತ್ತಿಯು ಪಾವಿತ್ರ್ಯಗೊಳ್ಳುವುದು ಹಾಗೂ ಸಾರ್ಥಕಗೊಳ್ಳುವುದು.

ಶಿಕ್ಷಕರು ಯಾವಾಗಲೂ ವಿದ್ಯಾರ್ಥಿಯಾಗಿರಬೇಕು. ಅಂದರೆ ನಿರಂತರವಾಗಿ ಜ್ಞಾನ ಸಂಪಾದನೆ ಮಾಡುತ್ತಿರಬೇಕು. ಜ್ಞಾನದ ಖಜಾನೆಯಾಗಬೇಕು. ಶಿಕ್ಷಕರು ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಮಾತ್ರ ಸಜ್ಜುಗೊಳಿಸಬಾರದು. ಬದಲಾಗಿ ಸಮಾಜದ, ದೇಶದ ಉತ್ತಮ ನಾಗರಿಕನನ್ನಾಗಿ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ನಡವಳಿಕೆಗಳನ್ನೂ, ಸ್ವಭಾವಗಳನ್ನೂ ನಿರಂತರ ಗಮನಿಸುವವರೂ ಅದನ್ನು ತಮ್ಮಲ್ಲಿ ಅಳವಡಿಸಿಕೊಳ್ಳುವವರೂ ಆಗಿದ್ದಾರೆ. ಆದುದರಿಂದ ಶಿಕ್ಷಕರು ಸಚ್ಚಾರಿತ್ರ್ಯವಂತರೂ, ನೀತಿವಂತರೂ ಆಗಿರಬೇಕು. ಶಿಕ್ಷಕರು ಶಿಸ್ತು, ಸಮಯ ಪ್ರಜ್ಞೆ, ಕರ್ತವ್ಯ ನಿಷ್ಠೆ, ವೈಜ್ಞಾನಿಕ-ವೈಚಾರಿಕ ಮನೋಭಾವ ಮುಂತಾದ ಮೌಲ್ಯಗಳನ್ನು ಹೊಂದಿದವರಾಗಬೇಕು.

ಹಿಂದೆ ಶಿಕ್ಷಕರನ್ನು ಸಮಾಜವು ಅತಿಯಾಗಿ ಗೌರವಿಸುತ್ತಿತ್ತು. ಅವರ ಮಾತಿಗೆ ಬೆಲೆ ಕೊಡುತ್ತಿತ್ತು. ಆದರೆ ಇಂದು ಪರಿಸ್ಥಿತಿ ತೀರಾ ಭಿನ್ನವಾಗಿದೆ. ಇತ್ತೀಚಿಗೆ ಕರ್ನಾಟಕದ ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಹಾಗೂ ದೇಶದ ಇತರ ಭಾಗಗಳಲ್ಲಿ ಶಿಕ್ಷಕರೆನಿಸಿಕೊಂಡವರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಸಂಗಗಳು ನಡೆಯುತ್ತಲೇ ಇವೆ. ಇದರ ಜೊತೆಗೆ ಮಾನವೀಯತೆ, ಮನುಷ್ಯತ್ವವನ್ನು ಮರೆತಿರುವ ಕೆಲವು ಶಿಕ್ಷಕರು ಸಯನೈಡ್ ಕಿಲ್ಲರ್‌ಗಳಾಗಿ, ವಿಕೃತಕಾಮಿಗಳಾಗಿ, ಸಾಮಾಜಿಕ ಅನೈತಿಕತೆಗಳಿಗೆ ಕಾರಣಕರ್ತರಾಗಿ ಇಡೀ ಶಿಕ್ಷಕ ಸಮುದಾಯವನ್ನೇ ತಲೆತಗ್ಗಿಸುವಂತೆ ಮಾಡುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ ಚಳವಳಿಗಳು ಬಹಳ ಮಹತ್ವ ಪಡೆಯುತ್ತಿವೆ. ಇವುಗಳ ಪೈಕಿ ಕೆಲವೊಂದು ದೂರಾಲೋಚನೆಯನ್ನು ಇಟ್ಟು ನಡೆಸುತ್ತಿದ್ದರೆ, ಇನ್ನು ಕೆಲವು ರಾಜಕೀಯ ಹಿತಾಸಕ್ತಿಗಳ ಸ್ವಾರ್ಥ ಸಾಧನೆಗೆ ಬಲಿ ಬೀಳುತ್ತಿವೆ. ಈ ದೇಶದಲ್ಲಿ ವರ್ಷಂಪ್ರತಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಶಾಲಾ ಕಾಲೇಜುಗಳಲ್ಲಿ ವಿವಿಧ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಆದರೆ ಶಿಕ್ಷಕರ ದಿನಾಚರಣೆಯಂದು ಶಿಕ್ಷರಿಗೆ ಸಾಥ್ ನೀಡುವ ವಿದ್ಯಾರ್ಥಿಗಳು

## ಡಾ.ಸರ್ವಪಲ್ಲಿ ರಾಧಾಕೃಷ್ಣರವರ ಹಿತನುಡಿಗಳು

★ಪುಸ್ತಕ ಓದುವಿಕೆಯು ನಮಗೆ ಏಕಾಂತತೆಯ ಪ್ರತಿಫಲನ ಮತ್ತು ನಿಜವಾದ ಖುಷಿಯ ಅನುಭವವನ್ನು ಉಂಟು ಮಾಡುತ್ತದೆ.

★ರಾಜಕೀಯ ಅಥವಾ ಆರ್ಥಿಕ ಬದಲಾವಣೆಯಿಂದ ಶಾಂತಿ ಬರಲು ಸಾಧ್ಯವಿಲ್ಲ. ಬದಲಾಗಿ ಮಾನವ ಪ್ರಾಕೃತಿಯ ಬದಲಾವಣೆಯಿಂದ ಮಾತ್ರ ಅದು ಸಾಧ್ಯ.

★ಜ್ಞಾನವು ನಮಗೆ ಶಕ್ತಿಯನ್ನು ನೀಡಿದರೆ, ಪ್ರೀತಿಯು ಸಂಪೂರ್ಣತೆಯನ್ನು ನೀಡುತ್ತದೆ.

★ಕ್ರಮ ಮತ್ತು ಸ್ವಾತಂತ್ರ್ಯ ಇವೆರಡೂ ಹುಟ್ಟಿಕೊಳ್ಳುವ ನೈತಿಕ ಬೇರುಗಳಿಗೆ ನಾವು ಮಾನವೀಯತೆಯನ್ನು ನೆನಪಿಸಬೇಕು.

ಅವರ ಸಮಸ್ಯೆಗೆ ಸ್ಪಂದಿಸುವಲ್ಲಿ ವಿಫಲವಾಗಿವೆ.

ಶಾಲಾ ಶಿಕ್ಷಕರು ಇಂದು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಹುಶಃ ಇದರಲ್ಲಿ ಸರಕಾರಿ ಉದ್ಯೋಗದಲ್ಲಿರುವ ಶಿಕ್ಷಕರ ಪಾಲು ಹೆಚ್ಚಿನದ್ದಾಗಿದೆ. ಸರಕಾರವು ತನ್ನ ಕೆಲವೊಂದು ಯೋಜನೆಗಳ ಅನುಷ್ಠಾನದ ಕೆಲಸ ಕಾರ್ಯಗಳಿಗೆ ಶಿಕ್ಷಕರನ್ನು ನೇಮಿಸುತ್ತದೆ. ಬೋಧನೆಯ ಜೊತೆಗೆ ಸರಕಾರವು ಇನ್ನಷ್ಟು ಹೊರೆಯನ್ನು ಶಿಕ್ಷಕರ ಮೇಲೆ ಹೇರುತ್ತಿದೆ. ಇದು ಕೇವಲ ಶಿಕ್ಷಕರಿಗೆ ಮಾತ್ರ ಸಮಸ್ಯೆಯಲ್ಲ, ಬದಲಾಗಿ ವಿದ್ಯಾರ್ಥಿಗಳಿಗೂ ದೊಡ್ಡ ತಲೆನೋವಾಗಿದೆ.

ವಿದ್ಯಾರ್ಥಿ ಸಂಘಟನೆಗಳು ಕೇವಲ ರಾಜಕೀಯ ಪಕ್ಷಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ ಮತ್ತು ರಾಜಕೀಯ ಹಿತಾಸಕ್ತಿಗಾಗಿ ಬೀದಿಗಿಳಿಯುತ್ತಿವೆ. ಆದರೆ ತಮ್ಮ ಜ್ಞಾನ ದಾಹವನ್ನು ತೀರಿಸಿದ ಹಾಗೂ ತಮ್ಮನ್ನು ತಿದ್ದಿ ತೀಡಿ ಬೆಳೆಸಿದ ಶಿಕ್ಷಕರು ಅನುಭವಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಕಾಳಜಿ ತೋರದಿರುವುದು ವಿಪರ್ಯಾಸ.

ಶಿಕ್ಷಕರ ದಿನಾಚರಣೆಯು ಕ್ಷಣಾರ್ಧದಲ್ಲಿ ಎಸ್‌ಎಂಎಸ್‌ಗಳ ಮೂಲಕ ಅಭಿನಂದಿಸುವ ಆಚರಣೆಯಾಗದೇ ಶಿಕ್ಷಕರ ಸಮಸ್ಯೆಗಳ ಪರಿಹಾರದ ಬಗ್ಗೆ ಚರ್ಚಿಸುವ ವೇದಿಕೆಯಾಗಬೇಕಾಗಿದೆ.

**ಅಬ್ದುಲ್ ಜಲೀಲ್, ನಂದಾವರ,**
**ಎಸ್‌ಡಿಎಂ ಲಾ ಕಾಲೇಜು, ಮಂಗಳೂರು**

---

41ನೇ ಪುಟದಿಂದ...

## ‘ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ’

ಅನುಷ್ಠಾನಗೊಳಿಸಲು ಮತ್ತು ಎಲ್ಲ ಹಂತಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿಭಾಯಿಸುವುದು.

ಗ್ರಾಮೀಣ ಉದ್ಯೋಗ ಪಡೆಯಲು ಇರುವ ಷರತ್ತು ಈ ಕೆಳಗೆ ತಿಳಿಸಿದಂತೆ;

1. ಗ್ರಾಮೀಣ ಪ್ರದೇಶದಲ್ಲಿರುವ ಪ್ರತಿಯೊಂದು ಕುಟುಂಬದ ಕುಶಲೇತರ ದೈಹಿಕ ಕೆಲಸ ಮಾಡಲಿಚ್ಛಿಸುವ ಪ್ರಾಪ್ತ ವಯಸ್ಕರು ತಮ್ಮ ಹೆಸರು, ವಯಸ್ಸು, ಕುಟುಂಬದ ವಿಳಾಸವನ್ನು ತಮ್ಮ ಗ್ರಾಮದ ಪಂಚಾಯತಿಗೆ ಸಲ್ಲಿಸಬೇಕು. ಇದನ್ನು ಉದ್ಯೋಗ ಚೀಟಿ ವಿತರಣೆ ಎನ್ನುತ್ತಾರೆ.

2. ಸದರಿ ಗ್ರಾಮ ಪಂಚಾಯತಿಯು ಈ ಅರ್ಜಿಗಳ ಬಗ್ಗೆ ವಿಚಾರಣೆ ಮಾಡಿ ಉದ್ಯೋಗ ಚೀಟಿಯನ್ನು ವಿತರಿಸಿ ಮತ್ತು ಆ ಉದ್ಯೋಗ ಚೀಟಿಯಲ್ಲಿ ಕುಟುಂಬದ ಪ್ರಾಪ್ತ ವಯಸ್ಕರ ಚಿತ್ರವನ್ನು ಅಂಟಿಸುವುದು. ಮತ್ತು ಈ ನೋಂದಣಿ ಐದು ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ನೋಂದಣಿ ಮಾಡಿಕೊಳ್ಳುವುದು.

3. ಕಾರ್ಯಕ್ರಮ ಅಧಿಕಾರಿಯು ನಿರುದ್ಯೋಗ ಭತ್ಯೆ ಪಾವತಿಸುವ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ಕೆಲಸ ಒದಗಿಸಲು ಸಾಧ್ಯವಾಗಲಿಲ್ಲ ಎಂಬ ಬರವಣಿಗೆಯಲ್ಲಿ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗೆ ತಿಳಿಸಬೇಕಾಗುತ್ತದೆ.

4. ಕೆಲಸ ಮಾಡುವಾಗ ಆ ಕೆಲಸದಿಂದ ಅಪಘಾತಕ್ಕೊಳಗಾದರೆ ಈ ಯೋಜನೆಯಡಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಬಹುದು. ಮತ್ತು ಅಪಘಾತದಿಂದ ಕೆಲಸ ಮಾಡಲು ಅಸಮರ್ಥನಾಗಿದಲ್ಲಿ ಆತನ ದುಡಿಮೆಯ ಹಣದ ದರದ ಅರ್ಧಕ್ಕೆ ಕಡಿಮೆ ಇಲ್ಲದಂತೆ ಮೊಬಲಗನ್ನು ದಿನಭತ್ಯೆ ಎಂದು ಕೊಡುವ ವ್ಯವಸ್ಥೆ ಇದೆ. ಮತ್ತು ಕೆಲಸ ಮಾಡುವಾಗ ಮರಣ ಹೊಂದಿದಲ್ಲಿ ಅಥವಾ ಶಾಶ್ವತ ಅಸಮರ್ಥನಾದರೆ ಆತನಿಗೆ ಕೇಂದ್ರ ಸರಕಾರವು (ಎಕ್ಸ್ ಗ್ರೇಷಿಯಾ) ಪರಿಹಾರವನ್ನು ನೀಡುವುದು. ರೂಪಾಯಿ 25,000 ಅಥವಾ ಅದಕ್ಕಿಂತ ಮೇಲ್ಪಟ್ಟು ನೀಡಲಾಗುವುದು.

5. ಈ ಯೋಜನೆಯಡಿ ಕೆಲಸ ಮಾಡುವ ಮಹಿಳೆಯರ ಜೊತೆ ಬರುವ ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆಯು ಸ್ಥಳದಲ್ಲಿ 5 ಅಥವಾ ಅದಕ್ಕಿಂತ ಹೆಚ್ಚಿದ್ದರೆ ಅಂತಹ ಮಹಿಳಾ ಕೆಲಸಗಾರರ ಪೈಕಿ ಒಬ್ಬಳನ್ನು ಆ ಮಕ್ಕಳನ್ನು ನೋಡಿಕೊಳ್ಳಲು ನಿಯೋಜಿಸುವುದು. ಮತ್ತು ಈ ಮಕ್ಕಳ ಪೈಕಿ ಯಾವುದಾದರೂ ಒಂದು ಮಗು ಅಪಘಾತಕ್ಕೊಳಗಾದರೆ ಅಂತಹ ಮಕ್ಕಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ನೀಡುವುದು. ಮತ್ತು ಅನುಗ್ರಹ ಪೂರ್ವಕ ಹಣವನ್ನು ಪಡೆಯಲು ಸಾಧ್ಯವಿದೆ. ಈ ಯೋಜನೆಯಡಿ ಮಾಡಲಾಗುವ ಪ್ರತಿಯೊಂದು ಕೆಲಸವು ಲಿಂಗಭೇದದಿಂದ ಹೊರತಾಗಿರುತ್ತದೆ.

**ಯೋಜನೆಯ ಇತರ ಮುಖ್ಯಾಂಶಗಳು**

ಹೆಚ್ಚು ಪ್ರಾಮುಖ್ಯವನ್ನು ಪಡೆದಿರುವ ಕೆಲಸಗಳು, ಜಲಸಂರಕ್ಷಣೆ, ನೀರಿನ ಕೊಯ್ಲು, ಕಾಡು ರಕ್ಷಿಸುವುದು, ಬರ ತಡೆಗಟ್ಟುವುದು, ದೊಡ್ಡ ಹಾಗೂ ಸಣ್ಣ ಕಾಲುವೆ ನೀರಾವರಿ ಕೆಲಸಗಳು, ಪರಿಶಿಷ್ಟ ಜಾತಿ- ಪಂಗಡಗಳ ಜನರು ಮತ್ತು ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿಗೆ ಸೇರಿರುವ ಭೂಮಿಗೆ ನೀರಾವರಿ ಸೌಕರ್ಯ, ಭೂ ಅಭಿವೃದ್ಧಿ, ಪ್ರವಾಹ ನಿಯಂತ್ರಣ, ಚರಂಡಿ ವ್ಯವಸ್ಥೆ, ರಕ್ಷಣಾ ಕೆಲಸ, ಗ್ರಾಮೀಣ ರಸ್ತೆ, ಮುಂತಾದ ಕ್ಷೇತ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗವನ್ನು ಒದಗಿಸಬಹುದಾಗಿರುತ್ತದೆ.

# ಇದು ಇಂದಿನ ರಾಜಕೀಯ

■ ರೇಶ್ಮಾ ಝೂಕಿರ್, ಮುಲ್ಕಿ

ಪ್ರಜಾಪ್ರಭುತ್ವ ಎಂದರೆ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಆಡಳಿತ ವ್ಯವಸ್ಥೆ ಎಂದು ವ್ಯಾಖ್ಯಾನಿಸಲಾಗಿದೆ. ಇದು ಎಲ್ಲರೂ ಒಪ್ಪಿಕೊಂಡಿರುವ ವ್ಯಾಖ್ಯಾನ. ನಮ್ಮ ದೇಶದಲ್ಲಿ ಜಾರಿಯಲ್ಲಿರುವುದು ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಹೇಳಲಾಗುತ್ತಿದೆ. ಆದರೆ ರಾಜಕೀಯ ಪುಡಾರಿಗಳೇ ಇಲ್ಲಿ ಪ್ರಭುಗಳು ! ಪ್ರಜೆಗಳೇ ಪ್ರಭುಗಳು ಎಂಬುದು ದೇಶದಲ್ಲಿ ಇನ್ನೂ ಕಾರ್ಯಗತಗೊಂಡಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ 64 ವರ್ಷಗಳು ಸಂದಿವೆ. ಇಲ್ಲಿ ತುತ್ತು ಅನ್ನ, ತುಂಡು ಬಟ್ಟೆಗೂ ತತ್ತರ. ಭಾರತದ ಕೀರ್ತಿ ಪತಾಕೆ ಬಾನೆತ್ತರಕ್ಕೆ ಹಾರುತ್ತಿದ್ದರೂ ಬಡವರ ತುತ್ತಿನ ಚೀಲ ಬರಿದಾಗಿದೆ. ಇದಕ್ಕೆ ಕಾರಣ, ಇಂದಿನ ಭ್ರಷ್ಟ ರಾಜಕಾರಣಿಗಳು ಲಂಚಕೋರ ಅಧಿಕಾರಿಗಳು. ಒಟ್ಟು ರಾಜಕೀಯ ವ್ಯವಸ್ಥೆಯು ಬಹುಪಾಲು ಪ್ರಜೆಗಳನ್ನು ಶೋಷಣೆ ಮಾಡುತ್ತಿವೆ.

ಬೆಲೆಯೇರಿಕೆಯ ನೇರ ಪರಿಣಾಮವನ್ನು ಎದುರಿಸುವುದು ಜನಸಾಮಾನ್ಯರು. ಜನಸಾಮಾನ್ಯರು ಎಂದರೆ ಮಧ್ಯಮ ವರ್ಗಕ್ಕಿಂತ ಕೆಳಮಟ್ಟದವರು. ದಿನನಿತ್ಯ ಆಹಾರ ವಸ್ತುಗಳ ಬೆಲೆಯೇರಿಕೆ, ತೈಲ ಬೆಲೆಯೇರಿಕೆಯ ಬಿಸಿ ಈ ವರ್ಗವನ್ನು ಅತಿಯಾಗಿ ತಟ್ಟಿದೆ. ಇಂತಹ ಜನರು ಈ ದೇಶದಲ್ಲಿ ಮುಕ್ಕಾಲು ಭಾಗದಷ್ಟಿದ್ದಾರೆ. ಇದರಿಂದಾಗಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರವು ದಿನೇ ದಿನೇ ಬೆಳೆಯುತ್ತಲೇ ಇದೆ. ಸರ್ವರಿಗೂ ಸಮಪಾಲು- ಸಮಬಾಳು ಎಂಬುದು ಕೇವಲ ಘೋಷಣೆಯಾಗಿ ಮಾತ್ರ ಚಾಲ್ತಿಯಲ್ಲಿದೆ.

ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಪ್ರಜೆಗಳು ಪ್ರಭುಗಳು, ಆಳುವ ಮಂದಿ ಪ್ರಜೆಗಳ ಸೇವಕರು ಎಂದು ಬಣ್ಣಿಸಲಾಗುತ್ತಿದೆ. ಆದರೆ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅದು ಸುಳ್ಳಾಗಿದೆ. ಸದ್ಯ ಭಾರತದಲ್ಲಿ ರಾಜಕೀಯ ಎಂಬುದು ಲಾಭದಾಯಕ ವ್ಯವಹಾರವಾಗಿಬಿಟ್ಟಿದೆ. ಇಲ್ಲಿ ನಡೆಯುತ್ತಿರುವ ವ್ಯವಹಾರಗಳೆಲ್ಲ ಕೋಟಿ ರೂಪಾಯಿಗಿಂತಲೂ ಹೆಚ್ಚಿನದ್ದು. ಲಕ್ಷ ರೂಪಾಯಿ ಮೌಲ್ಯದ ಯಾವುದೇ ಹಗರಣ, ಅವ್ಯವಹಾರ ಈ ಕೇಳಿಬರುತ್ತಿಲ್ಲ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ




ಚುನಾವಣೆಯಲ್ಲಿ ಗೆಲ್ಲುವ ಜನಪ್ರತಿನಿಧಿಗಳು ಕೋಟಿ ಕೋಟಿ ರೂಪಾಯಿ ಸಂಪಾದಿಸುವುದನ್ನೇ ಮೂಲ ಗುರಿಯಾಗಿಸಿಕೊಂಡಿದ್ದಾರೆ.

ರಾಜಕಾರಣಿಗಳಿಗೆ, ಆಳುವ ಮಂದಿಗೆ ಇಂದು ಹೆಣ್ಣು, ಹೊನ್ನು, ಮಣ್ಣು ಸುಲಭವಾಗಿ ದೊರೆಯುತ್ತದೆ ಎಂಬ ಸತ್ಯವನ್ನು ಸರ್ವರೂ ಅರಿತಿದ್ದಾರೆ. ಜನರ ಹಿತರಕ್ಷಣೆ ಮಾಡುತ್ತೇವೆ ಎಂದು ವಚನ ನೀಡಿ, ಅಧಿಕಾರಕ್ಕೇರಿದ ನಂತರ ವಚನಭ್ರಷ್ಟರಾಗುವ ಭ್ರಷ್ಟ ರಾಜಕೀಯ ಪುಡಾರಿಗಳಿಂದ ತುಂಬಿರುವ ಈ ದೇಶದಲ್ಲಿ ದಾರಿದ್ರ್ಯ, ಬಡತನ ತಾಂಡವವಾಡುತ್ತಿದೆ.

ಭ್ರಷ್ಟಾಚಾರ ಎಂಬುದು ಈ ಭಾರತದ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗ. ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸುವ ಹೆಚ್ಚಿನವರಿಗೆ ಹಣ ಗಳಿಸುವುದೊಂದೇ ಗುರಿ. ಇಲ್ಲಿ ಹೆಚ್ಚಿನ ಬಂಡವಾಳಹೂಡದೆ ಕೋಟ್ಯಧಿಪತಿಗಳಾಗುವ ಅವಕಾಶವಿದೆ. ಈ ದೇಶದ, ಜನತೆಯ ಪ್ರಗತಿಯನ್ನು, ಸುಧಾರಣೆಯನ್ನು ಬಯಸಿ ಯಾರೂ ರಾಜಕೀಯ ಪ್ರವೇಶಿಸುತ್ತಿಲ್ಲ.

ಈ ಹೊಲಸು ರಾಜಕೀಯದ ಕೆಟ್ಟ ರಾಜಕಾರಣಿಗಳಿಗೆ ಜನತೆಯ ನೋವು, ಯಾತನೆ ಅರ್ಥವಾಗುತ್ತಿಲ್ಲ. ಜನತೆ ತಮ್ಮನ್ನು ತ್ಯಜಿಸಿಯಾರು, ಸೋಲಿಸಿಯಾರು ಎಂಬ ಭಯವೂ ಇಲ್ಲದಾಗಿದೆ. ಕಾರಣ, ಚುನಾವಣೆಗೆ ಕೆಲವು ತಿಂಗಳಷ್ಟೇ ಇರುವಾಗ ಜನರ ಬಳಿಗೆ ತೆರಳಿ ನಾಟಕವಾಡಿ ಮೊಸಳೆ ಕಣ್ಣೀರು

ಸುರಿಸುವ ಕಲೆಯನ್ನು ರಾಜಕಾರಣಿಗಳು ಕರಗತ ಮಾಡಿಕೊಂಡಿದ್ದಾರೆ. ಜನರು ರಾಜಕಾರಣಿಗಳ ಕಪಟ ನಾಟಕಕ್ಕೆ ಬೇಗನೆ ಬಲಿಬೀಳುತ್ತಾರೆ. ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಅವ್ಯಹಾರಗಳು ದಿನಕ್ಕೊಂದರಂತೆ ನಡೆಯುತ್ತಿದ್ದರೂ ಜನರು ಅದರ ವಿರುದ್ಧ ದನಿಯೆತ್ತುವುದಾಗಲೀ, ಅದರ ವಿರುದ್ಧ ಪ್ರತಿಭಟನೆ ನಡೆಸುವ ಗೋಜಿಗಾಗಲೀ ಹೋಗುತ್ತಿಲ್ಲ. ಅದಕ್ಕಾಗಿ ಸಮಯ, ಪರಿಶ್ರಮ ಮೀಸಲಿಡುವುದು ವ್ಯರ್ಥ ಎಂದು ಜನತೆ ತಿಳಿದುಕೊಂಡಿದ್ದಾರೆ. ಒಂದು ರೀತಿಯಲ್ಲಿ ಜನರ ಅಸಡ್ಡೆ, ನಿರ್ಲಕ್ಷ್ಯದಿಂದಾಗಿಯೇ ಇಂದು ರಾಜಕೀಯ ಅಕ್ರಮಗಳು ದೇಶದಲ್ಲಿ ಬೆಳೆಯುತ್ತಲೇ ಇರುವುದು.

ಇಂದಿನ ಸ್ಥಿತಿಗತಿಯನ್ನು ಅವಲೋಕಿಸಿದರೆ ಶೇ.90ರಷ್ಟು ಸಂಖ್ಯೆಯ ಕಾರ್ಮಿಕ, ರೈತ, ಬಡವರು ಹಾಗೂ ಮಧ್ಯಮ ವರ್ಗದವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತೀರಾ ಕೆಳಮಟ್ಟದಲ್ಲಿದ್ದಾರೆ. ಭಾರತದಲ್ಲಿ ಶಿಶುಮರಣದ ಸಂಖ್ಯೆಯು ಹೆಚ್ಚುತ್ತಿರುವುದಕ್ಕೆ ಬಡತನ ಮುಖ್ಯ ಕಾರಣವಾಗುತ್ತಿದೆ. ಪೌಷ್ಠಿಕಾಂಶದ ಕೊರತೆಯಲ್ಲೂ ಭಾರತ ಮುಂದಿದೆ. ಇದೇ ವೇಳೆ ದೇಶದ ಪ್ರಮುಖ ಗೋದಾಮುಗಳಲ್ಲಿ ಆಹಾರ ಧಾನ್ಯಗಳು ಅಕ್ರಮವಾಗಿ ಸಂಗ್ರಹವಾಗಿದ್ದು, ಅವೆಲ್ಲವೂ ಫಲಾನುಭವಿಗಳಿಗೆ ತಲುಪದೆ ಹಾಳಾಗಿ ಹೋಗುತ್ತಿರುವುದನ್ನು ಕಂಡಿದ್ದೇವೆ.

ಇವೆಲ್ಲದರ ನಡುವೆ ಸಮಾಜವಾದ, ಸಮತಾವಾದ ಎಂಬುದು ಸವಕಲು ನಾಣ್ಯದಂತಾಗಿದೆ. ಲಕ್ಷಾಂತರ ಮಂದಿ ಕಾರ್ಮಿಕರು, ರೈತರು ಸಮಾತಾವಾದಿ ವ್ಯವಸ್ಥೆಯ ಉಳಿವಿಗಾಗಿ ಸಲ್ಲಿಸಿದ ತ್ಯಾಗ ಬಲಿದಾನ ವ್ಯರ್ಥವಾಗಿದೆ. ಬಂಡವಾಳಶಾಹಿತ್ವವು ಈ ನೆಲದಲ್ಲಿ ಹುಲುಸಾಗಿ ಬೆಳೆದು ಹೆಮ್ಮರವಾಗಿದೆ.

ಇಂತಹ ಸಂದರ್ಭದಲ್ಲಿ ದೇಶದ ಸಮಗ್ರ ಬದಲಾವಣೆ, ಸುಧಾರಣೆ ಬಯಸುವ ರಾಜಕೀಯ ಕ್ರಾಂತಿಯು ನಡೆಯಬೇಕಾಗಿದೆ. ಜನಸಾಮಾನ್ಯರಿಂದಲೇ ಅಂತಹ ಕ್ರಾಂತಿ ಮೊಳಗಲಿ ಎಂದು ಹಾರೈಸೋಣ...

## ಸಿಗರೇಟ್ ಫಿಲ್ಟರ್‌ಗಳಲ್ಲಿ ಹಂದಿ ರಕ್ತ ಪತ್ತೆ !





ಸಿಗರೇಟ್ ಸೇದುವವರಿಗೆ ಸದಾ ಒಂದಲ್ಲ ಒಂದು ಎಚ್ಚರಿಕೆ ರವಾನೆಯಾಗುತ್ತಲೇ ಇರುತ್ತದೆ. ಅದು ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿ ಎಂಬುದು ಈಗಾಗಲೇ ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಇದೀಗ ಆಸ್ಟ್ರೇಲಿಯದ ಪ್ರೊಫೆಸರ್ ಸೈಮನ್ ಚ್ಯಾಪ್‌ಮನ್ ನೀಡಿರುವ ಎಚ್ಚರಿಕೆ ಪ್ರತ್ಯೇಕವಾಗಿ ಮುಸ್ಲಿಮರಿಗೆ! ಯಾಕೆ ಗೊತ್ತೇ? ಸಿಗರೇಟ್ ಫಿಲ್ಟರ್‌ಗಳಲ್ಲಿ ಹಂದಿ ರಕ್ತದ ಅಂಶಗಳು ಪತ್ತೆಯಾಗಿದೆಯಂತೆ.

ಹೌದು. ಪ್ರೊ.ಚ್ಯಾಪಮನ್ ಅವರು ನಡೆಸಿರುವ ಸಂಶೋಧನೆಯಲ್ಲಿ ವಿವಿಧ 185 ಕಂಪೆನಿಗಳ ಸಿಗರೇಟ್‌ಗಳಲ್ಲಿ ಹಂದಿ ರಕ್ತದ ಅಂಶವಿರುವುದು ದೃಢಪಟ್ಟಿದೆ. ಇದು ಮುಸ್ಲಿಮರ ಮೂಲಭೂತ ನಂಬಿಕೆಯನ್ನು ಘಾಸಿಗೊಳಿಸುವ ನಿಗೂಢ ತಂತ್ರವೆಂದು ಅವರು ಎಚ್ಚರಿಸಿದ್ದಾರೆ. ಸಿಗರೇಟ್ ಸೇದುವಾಗ ಅದರ ಫಿಲ್ಟರ್‌ನ್ನು ಬಾಯಿಯೊಳಗೆ ತುರುಕಿಸುವುದರಿಂದ ಹಂದಿ ರಕ್ತದ ಅಂಶವು ಸುಲಭವಾಗಿ ದೇಹಕ್ಕೆ ಸೇರುತ್ತದೆ.

ಸಿಡ್ನಿ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆಗಿರುವ ಚ್ಯಾಪ್‌ಮನ್ ಅವರು ಸಿಡ್ನಿ ಟೆಲಿಗ್ರಾಫ್ ನೀಡಿರುವ ಅಭಿಪ್ರಾಯದ ಪ್ರಕಾರ, ''ಇದೊಂದು ಗಂಭೀರ ವಿಚಾರವಾಗಿದೆ. ಸಿಗರೇಟ್‌ನಲ್ಲಿ ಯಾವೆಲ್ಲ ಅಂಶಗಳನ್ನು ಬಳಸಲಾಗಿದೆ ಎಂಬುದನ್ನು ಉತ್ಪಾದಕರು ಪ್ರಕಟಿಸುವುದಿಲ್ಲ. ಮಾತ್ರವಲ್ಲ, ಅದೊಂದು 'ವ್ಯವಹಾರ ರಹಸ್ಯ' ಎಂಬ ನೆಲೆಯಲ್ಲಿ ಗೌಪ್ಯವಾಗಿಡಲಾಗುತ್ತಿದೆ'' ಎಂದಿದ್ದಾರೆ.

# ನಕಲಿ ಎನ್‌ಕೌಂಟರ್‌ಗೆ 'ಸುಪ್ರೀಂ' ತಡೆ

● ಶೌಕತ್ ಅಲಿ, ಎಸ್.



ಸುಪ್ರೀಂ ಕೋರ್ಟ್ ಇತ್ತೀಚೆಗೆ ತನ್ನ ತೀರ್ಪೊಂದರಲ್ಲಿ ಮಹತ್ವದ ಹೇಳಿಕೆಯೊಂದನ್ನು ನೀಡಿತು. ಅಂದರೆ ನಕಲಿ ಎನ್‌ಕೌಂಟರ್‌ಗಳಲ್ಲಿ ಭಾಗಿಯಾಗುವ ಪೊಲೀಸರಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಮತ್ತು ಗಲ್ಲಿಗೇರಿಸಬೇಕು ಎಂಬುದನ್ನು ಅದು ಬಹಳ ಸ್ಪಷ್ಟವಾಗಿ ಹೇಳಿತು. ಬಹುಶ ನಕಲಿ ಎನ್‌ಕೌಂಟರ್ ಸಂತ್ರಸ್ತರ ಕುಟುಂಬಗಳ ಮನದಲ್ಲಿ ಉರಿಯುತ್ತಿದ್ದ ಬೆಂಕಿಗೆ ಒಂದಷ್ಟು ನೀರು ಸುರಿಸಿದ ಅನುಭವವಾಗಿರಬಹುದೇನೋ? ಅದೇ ರೀತಿ ನಕಲಿ ಎನ್‌ಕೌಂಟರ್‌ನ ಭೀತಿಯಿರುವ ಅಮಾಯಕರಿಗೆ ಕೂಡ ಸುಪ್ರೀಂ ಕೋರ್ಟ್‌ನ ಈ ಹೇಳಿಕೆಯ ಹಿನ್ನೆಲೆಯಲ್ಲಿ ಪುನರ್‌ಜನ್ಮ ಪಡೆದಂತಹ ಅನುಭವವಾಗಿರಬೇಕು. ಏನಾದರೂ ಹೋದ ಜೀವ ಮರಳಿ ತರಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್‌ನ ಈ ಹೇಳಿಕೆ ನಕಲಿ ಎನ್‌ಕೌಂಟರ್‌ನಿಂದ ಅಮಾಯಕ ಜೀವಗಳನ್ನು ರಕ್ಷಿಸುವ ಜವಾಬ್ದಾರಿಯಿಂದ ಕೂಡಿರುವುದಂತೂ ಸ್ಪಷ್ಟ.

ನಕಲಿ ಎನ್‌ಕೌಂಟರ್ ಎಂಬುದು ತುಂಬಾ ಭಯಾನಕವಾಗಿದೆ. ಯಾವುದೇ ಕಾರಣವಿಲ್ಲದೆ ಅಮಾಯಕರನ್ನು ಭಯೋತ್ಪಾದಕರಾಗಿ ಅಥವಾ ನಕ್ಸಲ್ ಎಂದು ಚಿತ್ರಿಸುತ್ತಾ ಪೊಲೀಸರು, ಆಡಳಿತ ವ್ಯವಸ್ಥೆಯು ಹಲವು ಅಮಾಯಕ ಜೀವಗಳನ್ನು ಈಗಾಗಲೇ ಬಲಿ ಪಡೆದುಕೊಂಡಿವೆ. ಒಂದೆಡೆ ಪ್ರಭುತ್ವವು ತಮಗೆ ಜೀವ ಬೆದರಿಕೆ ಇದೆ ಎನ್ನುತ್ತಾ ಮತ್ತೊಂದೆಡೆ ಭಯೋತ್ಪಾದಕರು ದೇಶಕ್ಕೆ ಮಾರಕ ಎನ್ನುತ್ತಾ ನಿಜವಾದ ಭಯೋತ್ಪಾದಕರನ್ನು ರಕ್ಷಿಸುತ್ತಾ ಇಷ್ಟರವರೆಗೆ ಗುಂಡು ಹೊಡೆದದ್ದೆಲ್ಲವೂ ಅಮಾಯಕರ ಎದೆಗೆ. ದೇಶದ ಕೆಲವು ಭಾಗಗಳಲ್ಲಿ ಇಲ್ಲಿನ ಪ್ರಭುತ್ವವೇ ಎನ್‌ಕೌಂಟರ್‌ಗಳಿಗೆ ಗ್ರೀನ್ ಸಿಗ್ನಲ್ ನೀಡಿ ಇನ್ನಷ್ಟು ಅಮಾಯಕರನ್ನು ಬಲಿಪಡೆದುಕೊಳ್ಳಬಹುದಾದಂತಹ ಕರಾಳ ಕಾನೂನುಗಳನ್ನು ಅನೇಕ ವಿರೋಧಗಳ ನಡೆವೆಯೂ ಜಾರಿಯಲ್ಲಿರಿಸಿದೆ.

ಉತ್ತರ ಪ್ರದೇಶ ನಕಲಿ ಎನ್‌ಕೌಂಟರ್‌ನಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದರೆ, ಮಣಿಪುರ ದ್ವಿತೀಯ ಸ್ಥಾನದಲ್ಲಿದೆ. ಈ ದೇಶದಲ್ಲಿ ನಡೆದ ನಕಲಿ ಎನ್‌ಕೌಂಟರ್‌ಗಳು ಒಂದೆರಡಲ್ಲ. ಆ್ಯಮ್ನೆಸ್ಟಿ ಇಂಟರ್‌ನ್ಯಾಷನಲ್ ಎಂಬ ಅಂತಾರಾಷ್ಟ್ರೀಯ ಮಾನವ ಹಕ್ಕು ಸಂಘಟನೆ ಬಹಿರಂಗಪಡಿಸಿರುವಂತೆ ದೇಶದಲ್ಲಿ 1993ರಿಂದ 2008ರ ಅವಧಿಯಲ್ಲಿ ಅಂದರೆ 15 ವರ್ಷಗಳಲ್ಲಿ 1224 ನಕಲಿ ಎನ್‌ಕೌಂಟರ್‌ಗಳು ನಡೆದಿವೆ. ಈ ವರದಿ ಮನಷ್ಯತ್ವವಿರುವ ಎಂತಹವರನ್ನೂ ಬೆಚ್ಚಿ ಬೀಳಿಸುತ್ತದೆ. ಆದರೆ ನಕಲಿ ಎನ್‌ಕೌಂಟರ್‌ಗೆ ಬಲಿಯಾಗಿ ನೇರವಾಗಿ ಗೋರಿ ತಲುಪಿರುವ ಕಾಶ್ಮೀರದ ಹಲವು ಮಂದಿ ಈ ವರದಿಯಲ್ಲಿ ಸ್ಥಾನ ಪಡೆದಿರಲಿಕ್ಕಿಲ್ಲ. ತನ್ನದಲ್ಲದ ತಪ್ಪಿಗೆ ಪೊಲೀಸರ ಗುಂಡೇಟಿಗೆ ಬಲಿಯಾಗಬೇಕಾದಂತಹ ಪರಿಸ್ಥಿತಿ ನಿಜಕ್ಕೂ ಅಮಾನವೀಯ. ಈ ದೇಶದಲ್ಲಿ ನಡೆದಿರುವ ಹಲವು ಎನ್‌ಕೌಂಟರ್ ಪ್ರಕರಣಗಳಲ್ಲಿ




ಹೆಚ್ಚಿನವು ನಕಲಿ ಎನ್‌ಕೌಂಟರ್ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಆಮೆಗತಿಯಲ್ಲಿ ಸಾಗುತ್ತಿರುವ ಪ್ರಕರಣದ ತನಿಖೆಗಳು ಮಾತ್ರ ಅವುಗಳನ್ನು ನಕಲಿ ಎನ್‌ಕೌಂಟರ್‌ಗಳೆಂದು ದೇಶದ ಮುಂದೆ ತೆರೆದಿಡುವಲ್ಲಿ ವಿಫಲವಾಗಿವೆ. ಇದರ ಮಧ್ಯೆಯೇ ದೇಶದಲ್ಲಿ ನಡೆದಿರುವ ನಕಲಿ ಎನ್‌ಕೌಂಟರ್‌ಗಳ ಮೇಲೆ ದೃಷ್ಟಿ ಹಾಯಿಸುವುದು ನಮ್ಮ ಜವಾಬ್ದಾರಿಯಾಗುತ್ತದೆ.

ಮುಖ್ಯವಾಗಿ ದೇಶದ ಕೆಲವು ರಾಜ್ಯಗಳಲ್ಲಿ ನಡೆದಿರುವ ನಕಲಿ ಎನ್‌ಕೌಂಟರ್‌ಗಳನ್ನು ಗಮನಿಸಿದರೆ ಎನ್‌ಕೌಂಟರ್‌ಗಳೆಲ್ಲವೂ ಮುಸ್ಲಿಮರನ್ನೇ ಗುರಿಯಾಗಿಸಿ ನಡೆಸಲಾಗಿದೆ. ಮುಖ್ಯವಾಗಿ ಗುಜರಾತ್ ಇದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ. ಗುಜರಾತ್‌ನಲ್ಲಿ ಸೊಹ್ರಾಬುದ್ದೀನ್ ಶೇಕ್ ಮತ್ತು ಆತನ ಪತ್ನಿ ಕೌಸರ್ ಬೀ ನಕಲಿ ಎನ್‌ಕೌಂಟರ್‌ಗೆ ಬಲಿಯಾಗುತ್ತಾರೆ. ಎನ್‌ಕೌಂಟರ್ ನಡೆದ ತಕ್ಷಣ ಸೊಹ್ರಾಬುದ್ದೀನ್‌ಗೆ ಭಯೋತ್ಪಾದಕ ಮತ್ತು ಗ್ಯಾಂಗ್‌ಸ್ಟರ್ ಎಂಬ ಹಣೆಪಟ್ಟಿ ಕಟ್ಟಲಾಗುತ್ತದೆ. ಸೊಹ್ರಾಬುದ್ದೀನ್‌ನನ್ನು ಮೊದಲು ಎತ್ತಿಕೊಂಡು ಹೋಗಲಾಗಿತ್ತು. ಆ ಬಳಿಕ ಆತನನ್ನು ಭಯಾನಕ ವಾಗಿ ಕೊಲ್ಲಲಾಗಿತ್ತು. ನಂತರ ಅದನ್ನು ಎನ್‌ಕೌಂಟರ್ ಎಂದು ವರದಿ ಸಿದ್ಧಪಡಿಸಲಾಗಿತ್ತು. ಅದೇ ರೀತಿ ವರದಿಯೊಂದು ಹೇಳುವಂತೆ, ಸೊಹ್ರಾಬುದ್ದೀನ್‌ನ ಪತ್ನಿ ಕೌಸರ್‌ಬೀಯ ಮೇಲೆ ಅತ್ಯಾಚಾರ ನಡೆಸಲಾಗಿದೆ. ಈ ಸಂದರ್ಭ ಅವಳು ಪ್ರತಿರೋಧ ತೋರಿದ್ದಾಳೆ. ಕೊನೆಗೆ ಅವಳು ತನಗಾದ ಅನ್ಯಾಯಕ್ಕೆ ಮತ್ತು ಪತಿಯ ಕೊಲೆಗೆ ಸಂಬಂಧಿಸಿ ದೂರು ನೀಡಲು ಮುಂದಾದಾಗ ಅವಳನ್ನು ಕೊಲೆ ಮಾಡುವುದು ಪೊಲೀಸರು ಕಂಡುಕೊಂಡ ತಂತ್ರವಾಗಿತ್ತು. ಆದರೆ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಇವರು ಕೊಲ್ಲಲು ಹೊರಟಿದ್ದರು ಎಂಬುದನ್ನು ಇದಕ್ಕೂ ಮೊದಲೇ ಪೊಲೀಸರು ಸುಳ್ಳು ವರದಿಯನ್ನೂ ಸಿದ್ಧಪಡಿಸಿದ್ದರು.

ಇದು 2004ರಲ್ಲಿ ನಡೆದ ಘಟನೆ. ಮುಂಬೈ ಕಾಲೇಜು ವಿದ್ಯಾರ್ಥಿಗಳಾಗಿದ್ದ ಇಶ್ರತ್ ಜಹಾನ್ ಮತ್ತು ಆಕೆಯ ಮೂರು ಮಂದಿ ಸ್ನೇಹಿತರಾದ ಜಾವೇದ್ ಕುಮಾರ್ ಶೇಕ್ ಅಲಿಯಾಸ್ ಪ್ರಾಣೇಶ್ ಕುಮಾರ್ ಪಿಳ್ಳೈ, ಅಮ್ಜದ್ ಅಲಿ, ಜಿಸಾನ್ ಜೋಹರ್ ಅಬ್ದುಲ್ ಗನಿ ಎಂಬವರನ್ನು ಭಯೋತ್ಪಾದಕರೆಂದು ಚಿತ್ರಿಸಿ ಗುಜರಾತ್ ಪೊಲೀಸರು ನಗರದ ಹೊರ ವಲಯದಲ್ಲಿ ಕೊಂದು ಹಾಕುತ್ತಾರೆ. ಗುಜರಾತ್ ಸರಕಾರವು ಇಶ್ರತ್ ಜಹಾನ್ ಓರ್ವಳು ಭಯೋತ್ಪಾದಕಿ ಎಂಬುದು ಪ್ರಚಾರ ಪಡಿಸಿತ್ತು. ಮೆಟ್ರೋಪಾಲಿಟನ್ ಮೆಜಿಸ್ಟ್ರೇಟ್ ಎಸ್‌ಪಿ ತಮಂಗ್ ವರದಿಯು ಆಕೆಯನ್ನು ಮುಗ್ಧೆ ಎಂದು ತನಿಖೆಯ ಬಳಿಕ ಹೇಳಿತು. ಈ ನಾಲ್ವರನ್ನು ಒಂದು ದಿನ ಮುಂಚೆಯೇ ಕೊಲೆಗೈಯ್ಯಲಾಗಿತ್ತಾದರೂ ಮರುದಿನ ಎನ್‌ಕೌಂಟರ್ ನಡೆಸಲಾಗಿದೆ ಎಂದು ಹೊರ ಜಗತ್ತಿಗೆ ಸುದ್ದಿ ರವಾನಿಸಲಾಗಿತ್ತು. ಆ ಬಳಿಕ ನೀಡಿದ ಸಮರ್ಥನೆ ಗುಜರಾತ್ ಮುಖ್ಯಮಂತ್ರಿ ಮೋದಿಯನ್ನು ಇವರು ಕೊಲ್ಲಲು ಬಂದಿದ್ದರು. ಗುಜರಾತ್‌ನಲ್ಲಿ ಪೊಲೀಸರು ಕೊಲೆಗೈದು ಅನಂತರ ಅದನ್ನು ಎನ್‌ಕೌಂಟರ್ ಎನ್ನುತ್ತಿದ್ದರು. ಪ್ರತಿಯೊಬ್ಬರ ನಕಲಿ ಎನ್‌ಕೌಂಟರ್ ಪ್ರಕರಣದ ಸಂದರ್ಭದಲ್ಲೂ ಅವರು ನರೇಂದ್ರ ಮೋದಿಯನ್ನು ಹತ್ಯೆಗೈಯ್ಯಲು ಬಂದಿದ್ದ ಭಯೋತ್ಪಾದಕರಾಗಿದ್ದರು ಎಂಬ ವಾಕ್ಯವನ್ನೇ ಪುನರುಚ್ಚರಿಸಲಾಗುತ್ತಿತ್ತು.

ಗುಜರಾತ್‌ನಲ್ಲಿ ಮೋದಿಯದ್ದೇ ಸರ್ವಾಧಿಕಾರ. ಅದೊಂದು ಪ್ರತ್ಯೇಕ ರಾಜ್ಯವಿದ್ದಂತೆ ಆತ ಅದನ್ನು ಆಳುತ್ತಿದ್ದಾನೆ. ಮುಸ್ಲಿಂ ವಿರೋಧಿ ಧೋರಣೆಯನ್ನು ತಳೆದಿರುವ ಈತ ಮುಸ್ಲಿಮರ ಮಾರಣ ಹೋಮಕ್ಕೆ ಸಂಬಂಧಿಸಿ ಪೊಲೀಸ್ ಅಧಿಕಾರಿಗಳಿಗೆ

56ನೇ ಪುಟಕ್ಕೆ

# ಪತಿಯ ಮೇಲೆ ಪತ್ನಿಯ ಕರ್ತವ್ಯ



ಉತ್ತಮ ಪತ್ನಿಯರು ಪತಿಯನ್ನು ಅನುಸರಿಸುವವರಾಗಿರು ತ್ತಾರೆ. ಪತ್ನಿಯು ಐದು ಹೊತ್ತಿನ ನಮಾಝ್ ಮಾಡುತ್ತಿದ್ದು, ತನ್ನ ಮಾನವನ್ನು ಸಂರಕ್ಷಿಸಿ ತನ್ನ ಪತಿ ಪತಿಗೆ ವಿಧೇಯಳಾಗಿದ್ದರೆ ಆಕೆ ಬಯಸುವ ಬಾಗಿಲ ಮೂಲಕ ಸ್ವರ್ಗವನ್ನು ಪ್ರವೇಶಿಸಬಹುದು.

ಮಾನಕ್ಕೆ ಕುಂದು ತರುವ ಎಲ್ಲಾ ಕಾರ್ಯಗಳಿಂದಲೂ ಸಂಪೂರ್ಣ ದೂರವಿರಿ. ಈ ಬಗ್ಗೆ ಸಾಮಾನ್ಯ ಕೊರತೆಯೂ ಪತಿಯ ಮನದಲ್ಲಿ ಶೈತಾನನ ಸಂಶಯ ಹುಟ್ಟಿಸಲು ಕಾರಣವಾಗಬಹುದು. ಆದುದರಿಂದ ಈ ಮಾನವೀಯ ಪ್ರಾಬಲ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅತ್ಯಧಿಕ ಜಾಗರೂಕತೆಯನ್ನು ಪಾಲಿಸಿರಿ.

ಪತಿಯ ಇಚ್ಛೆಗೆ ವಿರುದ್ಧವಾಗಿ ಮತ್ತು ಆತನ ಅನುಮತಿ ಇಲ್ಲದೆ ಮನೆ ಬಿಟ್ಟು ಹೊರ ಹೋಗಬೇಡಿರಿ. ಪತಿಗೆ ಇಷ್ಟವಿಲ್ಲದ ಮನೆಗೆ ಹೋಗಬೇಡಿರಿ. ಪತಿಗೆ ಬೇಡವಾದವರನ್ನು ಮನೆಯೊಳಗೆ ಸೇರಿಸುವುದು ಅಲ್ಲಾಹನ ಮೇಲೆ ವಿಶ್ವಾಸವಿರಿಸುವ ಮಹಿಳೆಗೆ



ನಿಷಿದ್ಧವಾಗಿದೆ. ಪತ್ನಿಯು ಪತಿಯ ವಿಷಯದಲ್ಲಿ ಇತರರ ಮಾತನ್ನು ಪಾಲಿಸಬಾರದು.

ಪತ್ನಿಯಾದವಳು ತನ್ನ ಮಾತು ಹಾವಭಾವಗಳ ಮೂಲಕ ಪತಿಯನ್ನು ಸದಾ ಸಂತುಷ್ಟವಾಗಿರಿಸಲು ಪ್ರಯತ್ನಿಸಿರಿ. ನಿಮ್ಮ ಪತಿಯನ್ನು ಪ್ರೀತಿಸಿರಿ. ಆತನನ್ನು ಗೌರವಿಸಿರಿ. ಆತನಿಗೆ ಕೃತಜ್ಞರಾಗಿರಿ. ನಿಮ್ಮನ್ನು ಸದಾ ಸಂತೋಷವಾಗಿರಿಸಲು ಪ್ರಯತ್ನಿಸುವ ನಿಮ್ಮ ಎಲ್ಲ ಬಯಕೆ ಬೇಡಿಕೆಗಳನ್ನು ಈಡೇರಿಸುವ ಮತ್ತು ನಿಮ್ಮನ್ನು ಸುಖವಾಗಿರಿಸಿ ಸುಖಪಡುವ ನಿಮ್ಮ ಪತಿಗಿಂತ ದೊಡ್ಡ ಉಪಕಾರಿ ಇನ್ನಾರಿರಬಹುದು. ಪತಿಯ ಸೇವೆ ಮಾಡುವುದರಲ್ಲಿ ಸಂತೋಷಪಡಿರಿ.

ಸಾಧ್ಯವಾದಷ್ಟು ಸ್ವಯಂ ಕಷ್ಟವಹಿಸಿ ಪತಿಗೆ ಸುಖ ನೀಡಿರಿ. ಎಲ್ಲಾ ರೀತಿಯಲ್ಲೂ ಆತನ ಸೇವೆಗೈದು ಆತನ ಮನಗೆಲ್ಲಲು ಪ್ರಯತ್ನಿಸಿರಿ. ಪತಿಯ ಮೇಲೆ ಪತ್ನಿಯ ಹಕ್ಕು ಅತ್ಯಂತ ಹಿರಿದಾಗಿದೆ. ಎಷ್ಟೆಂದರೆ ಪತಿಯ ಪೂರ್ಣ ಶರೀರವು ಗಾಯಗೊಂಡು ಪತ್ನಿಯು ತನ್ನ ಪತಿಯ ಗಾಯಗಳನ್ನು ತನ್ನ ನಾಲಗೆಯಿಂದ ನೆಕ್ಕಿದರೂ ಆ ಹಕ್ಕು ತೀರಿಸಲಾಗದು.

ಪತಿಯ ಮನೆಮಾರು ಮತ್ತು ಸೊತ್ತು ವಿತ್ತಗಳನ್ನು ರಕ್ಷಿಸಿರಿ. ವಿವಾಹದ ಬಳಿಕ ಪತಿಗೃಹವನ್ನೇ ನಿಮ್ಮ ಮನೆ ಎಂದು ಭಾವಿಸಿರಿ. ಪತಿಗೃಹದ ಶೋಭೆಯನ್ನು ಹೆಚ್ಚಿಸಲು ಪತಿಯ ಮಾನ ಮರ್ಯಾದೆಯನ್ನು ಬೆಳೆಸಲು ಆತನ ಮಕ್ಕಳ ಭವಿಷ್ಯವನ್ನು ಬೆಳಗಿಸಲು ಮತ್ತು ಮಿತವ್ಯಯವನ್ನು ಪಾಲಿಸುತ್ತಾ, ಆತನ ಸಂಪತ್ತನ್ನು ಖರ್ಚು ಮಾಡಿರಿ. ಪತಿಯ ಪ್ರಗತಿ ನಿಮ್ಮ ಪ್ರಗತಿ, ಸುಭಿಕ್ಷೆ ಎಂದು ತಿಳಿಯಿರಿ.

ಅತ್ಯಂತ ಹೃತ್ಪೂರ್ವಕವಾಗಿ ಪತಿಯನ್ನು ಅನುಸರಿಸಿರಿ. ಅವರ ಅನುಸರಣೆಯಲ್ಲಿ ಸಂತೋಷ ಮತ್ತು ಸುಖ ಅನುಭವಿಸಿರಿ.

**ಅಸ್ಮಾ ಝುಕರಿಯಾ, ಮಲಾರ್**

# ಮಣಿಪಾಲ ಸಾಮ್ರಾಜ್ಯದ ಕರ್ಮಕಾಂಡ ಬಯಲಾಗಲಿ

ಕರ್ನಾಟಕ ಕರಾವಳಿ ಮಣಿಪಾಲದಲ್ಲಿ ಒಂದು ದೊಡ್ಡ ಖಾಸಗಿ ಸಾಮ್ರಾಜ್ಯದ ಮಾಧ್ಯಮ ಕೇಂದ್ರವಿದೆ. ಶಿಕ್ಷಣ, ಆರ್ಥಿಕ ಕೇಂದ್ರ, ಮಾಧ್ಯಮ ಕೇಂದ್ರ, ಆರೋಗ್ಯ ಕೇಂದ್ರ ಮೊದಲಾದ ಹಲವು ಖಾಸಗಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಇದರ ಅಧೀನದಲ್ಲಿರುವ ಆಸ್ಪತ್ರೆಯೊಂದು ಮಂಗಳೂರಿನ (ಜ್ಯೋತಿ) ಅಂಬೇಡ್ಕರ್ ವೃತ್ತದ ಸಮೀಪವಿದೆ. ಇಲ್ಲಿ ಇತ್ತೀಚೆಗೆ ಮಂಗಳೂರು ಸಸಿಹಿತ್ಲು ನಿವಾಸಿಯಾಗಿರುವ ವಿದ್ಯಾರ್ಥಿನಿ ಸ್ವಪ್ನಾ ಎಂಬಾಕೆ ಮೃತಪಟ್ಟಿದ್ದಾಳೆ. ಡೆಂಗ್ಯು ಜ್ವರವೆಂದು ದಾಖಲಾಗಿದ್ದ ಸ್ವಪ್ನಾಳಿಗೆ ಮಲೇರಿಯಾ ಚಿಕಿತ್ಸೆ ನೀಡಲಾದ ಕಾರಣ ಸ್ವಪ್ನಾ ಮೃತಪಟ್ಟಿದ್ದಾಳೆ ಎಂದು ಆರೋಪಿಸಲಾಗಿದೆ. ಇದರ ವಿರುದ್ಧ ವಿದ್ಯಾರ್ಥಿಗಳು ಒಟ್ಟು ಸೇರಿ ಪ್ರತಿಭಟನೆ ನಡೆಸಿದ್ದಾರೆ. ಬಳಿಕ ಸಚಿವ ಪಾಲೇಮಾರ್‌ರವರ ಪ್ರಭಾವದಿಂದ ಪ್ರತಿಭಟನೆ ನಿಲ್ಲಿಸಲಾಯಿತು. ಇಲ್ಲಿ ಈ ಹಿಂದೆಯೂ ಇಂತಹ ಘಟನೆ ನಡೆದಿತ್ತು. ಆಗ ಅಲ್ಲಿಯ ಮುಸ್ಲಿಮ್ ಶಾಸಕರ ಮಧ್ಯಸ್ಥಿಕೆಯಲ್ಲಿ ರಾಜಿ ಮಾಡಲಾಗಿತ್ತು.

ಆದರೆ ಇಂತಹ ಘಟನೆಗಳು ಮಾಧ್ಯಮಗಳ ಮೂಲಕ ಬಹಿರಂಗಗೊಳ್ಳುತ್ತಿರುವುದು ಅಪರೂಪ. ಮಣಿಪಾಲದಿಂದ ಉದಯವಾಣಿ ಎಂಬ ಪತ್ರಿಕೆ ಹೊರಡುತ್ತದೆ. ಈ ಪತ್ರಿಕೆ ಕರಾವಳಿ ಪ್ರದೇಶದಲ್ಲಿ ಹಿಂದು- ಮುಸ್ಲಿಮ್ ಮತ್ತು ಕ್ರೈಸ್ತರ ನಡುವೆ ಕೋಮುವಿಷ ಬೀಜ ಬಿತ್ತುವ ಕಪೋಲಕಲ್ಪಿತ ಸುದ್ದಿಗಳನ್ನು ಪ್ರಕಟಿಸುತ್ತದೆ ಎಂಬ ಆರೋಪ ಹಿಂದಿನಿಂದಲೂ ಇದೆ. ವಿಶೇಷವಾಗಿ ಮುಸ್ಲಿಮ್ ಸಮುದಾಯ ಮತ್ತು ಮುಸ್ಲಿಮ್ ಸಂಘ-ಸಂಸ್ಥೆಗಳ ವಿರುದ್ಧ ನಿರಂತರ ಸುಳ್ಳುಸುದ್ದಿ ಪ್ರಕಟಿಸುತ್ತಿರುತ್ತದೆ. ಈ ಪತ್ರಿಕೆಯು ಮಣಿಪಾಲ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳು ನಡೆಸುವ ಅಕ್ರಮಗಳನ್ನು ವರದಿ ಮಾಡದೇ ಪತ್ರಿಕಾ ಧರ್ಮಕ್ಕೆ ಕಳಂಕ ತರುತ್ತಿದೆ.

ಕನ್ನಡದ ಜನತೆಯ ಆಶಾಕಿರಣಗಳಾದ ಪ್ರಜಾವಾಣಿ ದೈನಿಕ, ಹಿಂದು ಇಂಗ್ಲಿಷ್ ದೈನಿಕ, ಗೌರಿಲಂಕೇಶ್ ಪತ್ರಿಕೆ, ಅಗ್ನಿ ಮತ್ತು ಪ್ರಸ್ತುತ ಪಾಕ್ಷಿಗಳು ಮಣಿಪಾಲದಲ್ಲಿ ನಡೆಯುವ ಅಕ್ರಮಗಳನ್ನು ಬಯಲಿಗೆಳೆಯಬೇಕು. ಈ ನಿಟ್ಟಿನಲ್ಲಿ ಪ್ರಸ್ತುತ ಪಾಕ್ಷಿಕ ಗಮನಹರಿಸಲಿ.

ಯಾವುದೇ ಬಂಡವಾಳಶಾಹಿ ಹಿತಾಸಕ್ತಿಗೆ ಬೆದರದ ಪತ್ರಿಕೆಗಳಿಂದ ಮಾತ್ರ ಈ ಪುಣ್ಯ ಕಾರ್ಯಸಾಧ್ಯ. ಜಾಹೀರಾತಿನ ಎಂಜಲಿಗೆ ಕಾಯುವ ಮತ್ತು ರಾಜಕೀಯ ಲಾಭಿಗೆ ಮಣಿಯುವ ಮಾಧ್ಯಮ ಸಂಸ್ಥೆಗಳು ಈ ಸಾಹಸಕ್ಕೆ ಕೈ ಹಾಕುವುದಿಲ್ಲ. ಜಗತ್ತಿನ ಯಾವುದೇ ಜಾತಿ, ಧರ್ಮ, ಭಾಷೆ, ಪ್ರಾಂತ್ಯದ ಜನರ ಸಂಕಷ್ಟಗಳಿಗೆ ಸ್ಪಂದಿಸುವುದು ಪತ್ರಿಕಾ ಧರ್ಮ.

**ಆಯಿಶಾ ಝುಲೇಖಾ ಶೀಮಾರ್ಝ್, ಬೆಂಗಳೂರು**

## ■ ಮೈಸೂರು: ಪಾಪ್ಯುಲರ್ ಫ್ರಂಟ್‌ನಿಂದ ಸ್ವಾತಂತ್ರ್ಯ ದಿನಾಚರಣೆ




ಮೈಸೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಸಂಘಟನೆಯ ಜಿಲ್ಲಾಧ್ಯಕ್ಷ ಅತಾವುಲ್ಲಾ ಮತ್ತು ಕಾರ್ಯದರ್ಶಿ ಆರಿಫುವುಲ್ ಪಾಶ ಧ್ವಜಾರೋಹಣ ನೆರವೇರಿಸಿದರು.

ಎಸ್‌ಡಿಪಿಐ ಚಾಮರಾಜ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಟ್, ಎಸ್‌ಡಿಪಿಐ ಜಿಲ್ಲಾ ಸಮಿತಿ ಸದಸ್ಯೆ ಫಾತಿಮಾ, ಇಮಾಮ್ಸ್ ಕೌನ್ಸಿಲ್ ಜಿಲ್ಲಾ ಸಮಿತಿ ಸದಸ್ಯ ಇರಾನಿಕ್, ಕ್ಯಾಂಪಸ್ ಫ್ರಂಟ್ ಜಿಲ್ಲಾ ಸಮಿತಿ ಸದಸ್ಯ ಕೌಶನ್ ಬೇಗ್, ಜಮಾಅತ್ ಇಸ್ಲಾಮ್‌ನ ಅಬ್ದುಲ್ ಕರೀಮ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಮಡಿಕೇರಿ: ಪಾಪ್ಯುಲರ್ ಫ್ರಂಟ್ ಪ್ರತಿಭಟನೆ

ಮಡಿಕೇರಿ: ಆಗಸ್ಟ್ 12ರಂದು ಮಡಿಕೇರಿ ನಗರದ ಇಂದಿರಾಗಾಂಧಿ ವೃತ್ತದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ನಗರ ಘಟಕ ವತಿಯಿಂದ ಆಗಸ್ಟ್ 15ರಂದು ಸಂಘಟನೆಯ ರಾಜ್ಯ ಸಮಿತಿಯು ಪುತ್ತೂರಿನಲ್ಲಿ ಆಯೋಜಿಸಲು ದ್ದೇಶಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಹಾಗೂ ಫ್ರೀಡಂ ಪರೇಡ್‌ಗೆ ಶುಭಾಶಯವನ್ನು ಕೋರಿ ನಗರಸಭೆಯಿಂದ ಅನುಮತಿಯನ್ನು ಪಡೆದು ಹಾಕಿದ್ದ ಬ್ಯಾನರ್‌ನ್ನು ಪೊಲೀಸರು ಯಾವುದೇ ಸೂಚನೆ ನೀಡದೆ ಏಕಾಏಕಿ ತೆರವುಗೊಳಿಸಲು ಮುಂದಾದಾಗ ಸಂಘಟನೆಯ ವತಿಯಿಂದ ದಿಢೀರ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾ ನಿರತರು ಪೊಲೀಸರ ಪಕ್ಷಪಾತೀಯ ಕ್ರಮದ ವಿರುದ್ಧ ಹಾಗೂ ಬಿಜೆಪಿ ಸರಕಾರದ ಅಲ್ಪಸಂಖ್ಯಾತ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗಿದರು.

## ■ ಫ್ರೀಡಂ ಪರೇಡ್‌ಗೆ ಅವಕಾಶ ನಿರಾಕರಣೆ: ದ.ಕ ಜಿಲ್ಲಾಡಳಿತದ ಕ್ರಮಕ್ಕೆ ಖಂಡನೆ

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ನಡೆಸಲು ಉದ್ದೇಶಿಸಿದ ಸ್ವಾತಂತ್ರ್ಯೋತ್ಸವ ದಿನಾಚರಣೆ ಹಾಗೂ ಫ್ರೀಡಂ ಪರೇಡ್ ಕಾರ್ಯಕ್ರಮಕ್ಕೆ ದ.ಕ. ಜಿಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಅನುಮತಿ ನಿರಾಕರಿಸಿದ್ದನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ತೀವ್ರವಾಗಿ ಖಂಡಿಸಿದೆ.

ದೇಶದ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಶಿಸ್ತು, ಸ್ಫೂರ್ತಿ, ಸಡಗರದಿಂದ ಆಚರಿಸುವ ಫ್ರೀಡಂ ಪರೇಡ್ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿಗಳು ಅನುಮತಿ ನಿರಾಕರಿದರು. ನಂತರ ಕಾರ್ಯಕ್ರಮವನ್ನು ಖಾಸಗಿ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ಹಾಗೂ ಸಾಂಸ್ಕೃತಿಕ ಕಾರ್ಯಮಕ್ಕೆ ಕಡಿತಗೊಳಿಸಲಾಯಿತಾದರೂ ಕಾನೂನು ಮತ್ತು ಸುವ್ಯವಸ್ಥೆಯ ಕಾರಣವೊಡ್ಡಿ ಪೊಲೀಸರು ಅವಕಾಶ ನಿರಾಕರಿಸಿದ್ದಾರೆ.ಇದರಿಂದಾಗಿ ಪುತ್ತೂರಿನಲ್ಲಿ ಸಂಘಟನೆಯು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ರದ್ದುಗೊಳಿಸಿತು.

ಅನುಮತಿ ನೀಡುವ ಆಶ್ವಾಸನೆ ನೀಡುತ್ತಾ ಕೊನೇ ಕ್ಷಣದಲ್ಲಿ ಅನುಮತಿಯನ್ನು ನಿರಾಕರಿಸಿದ ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪೊಲೀಸ್ ಅಧಿಕಾರಿಗಳ ತಾರತಮ್ಯ ಧೋರಣೆಯನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಟು ಶಬ್ದಗಳಲ್ಲಿ ಖಂಡಿಸುತ್ತದೆ ಎಂದು ಹೇಳಿಕೆಯಲ್ಲಿ ಪ್ರಸ್ತಾಪಿಸಿದೆ.

---



**ಕೊಡಗು: ಪುತ್ತೂರು ಹಾಗೂ ಗುಲ್ಬರ್ಗಾದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗೆ ಸ್ವಾತಂತ್ರ್ಯ ದಿನಾಚರಣೆಗೆ ಅನುಮತಿ ನಿರಾಕರಿಸಿರುವುದನ್ನು ವಿರೋಧಿಸಿ ಇತ್ತೀಚೆಗೆ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಯಿತು.**

**ಜಿಲ್ಲಾಧ್ಯಕ್ಷಕೆ.ಬಿ.ಅಫ್ಸರ್, ರಾಜ್ಯ ಸಮಿತಿ ಸದಸ್ಯ ಅಬೂಬಕ್ಕರ್ ಟಿ.ಎಚ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಫಜಲುಲ್ಲಾ, ಜಿಲ್ಲಾ ಕಾರ್ಯದರ್ಶಿ ಅಮೀನ್ ಮುಹ್ಸಿನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.**




ವೈಸೂರು: ಪುತ್ತೂರು ಮತ್ತು ಗುಲ್ಬರ್ಗಾದಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸ್ವಾತಂತ್ರ್ಯ ದಿನಾಚರಣೆಯನ್ನು ತಡೆದ ಸರಕಾರದ ಕ್ರಮವನ್ನು ವಿರೋಧಿಸಿ ಪಾಪ್ಯುಲರ್ ಫ್ರಂಟ್, ವೈಸೂರು ಜಿಲ್ಲಾ ಸಮಿತಿಯು ಪ್ರತಿಭಟನೆ ನಡೆಸಿತು.

ದೇಶದ ಸಮಸ್ತ ಪ್ರಜೆಗಳೂ ಸ್ವಾತಂತ್ರ್ಯ ದಿನವನ್ನು ಆಚರಿಸುವ ಹಕ್ಕನ್ನು ಹೊಂದಿದ್ದು, ಪಾಪ್ಯುಲರ್ ಫ್ರಂಟ್ ಮೇಲೆ ನಡೆದ ಈ ಅನ್ಯಾಯವು ಸಂವಿಧಾನದ ಉಲ್ಲಂಘನೆಯಾಗಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.



ಗುಲ್ಬರ್ಗಾ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮತ್ತು ಎಸ್‌ಡಿಪಿಐ ಗುಲ್ಬರ್ಗಾ ಜಿಲ್ಲಾ ಘಟಕದ ವತಿಯಿಂದ ಸ್ವಾತಂತ್ರ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಪಾಪ್ಯುಲರ್ ಫ್ರಂಟ್ ಜಿಲ್ಲಾಧ್ಯಕ್ಷ ಎಂ.ಶಹೀದ್ ನಾಸಿರ್ ಧ್ವಜಾರೋಹಣಗೈದರು.

ರೋಝ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಎಂ.ಆರ್.ರಾಜಣ್ಣ, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಸಯ್ಯದ್ ದಸ್ತಗಿರಿ ಮತ್ತು ಸಂಘಟನೆಯ ಜಿಲ್ಲಾ ಸಮಿತಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಹಫೀಝ್ ಆರಿಫ್ ಮುಹಮ್ಮದ್ ಸ್ವಾಗತಿಸಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೈಖ್ ಸಿರಾಜ್ ಪಾಶ ವಂದಿಸಿದರು.

## ■''ಸತ್ಯಾಗ್ರಹ ಪ್ರಜಾಪ್ರಭುತ್ವದ ಮೂಲಭೂತ ಹಕ್ಕು''

ಧರಣಿ ಸತ್ಯಾಗ್ರಹ ಆರಂಭಿಸುವುದಕ್ಕೆ ಮೊದಲೇ ಅನ್ನಾ ಹಝಾರೆ ಮತ್ತು ಅವರ ಬೆಂಬಲಿಗರನ್ನು ಬಂಧಿಸಿರುವುದು ಅಸಮ್ಮತಿ ಪ್ರಕಟಿಸುವ ಮತ್ತು ಪ್ರತಿಭಟನೆಯನ್ನು ನಡೆಸುವ ಪ್ರಜಾಸತ್ತಾತ್ಮಕ ಹಕ್ಕಿನ ಸಂಪೂರ್ಣ ಉಲ್ಲಂಘನೆಯಾಗಿದೆ ಎಂದು ಪಾಪ್ಯುಲರ್ ಫ್ರಂಟ್‌ನ ಅಧ್ಯಕ್ಷ ಇ.ಎಂ.ಅಬ್ದುರ್ರಹ್ಮಾನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಶಸ್ತ್ರ ಪಡೆಗಳಿಗೆ ನಿರಂಕುಶಾಧಿಕಾರವನ್ನು ನೀಡುವ ಕಾನೂನನ್ನು ಹಿಂದೆಗೆದುಕೊಳ್ಳಬೇಕೆಂದು ಕಳೆದ ಹಲವು ವರ್ಷಗಳಿಂದ ಅಮರಣಾಂತ ಸತ್ಯಾಗ್ರಹ ನಡೆಸುತ್ತಿರುವ ಮಣಿಪುರದ ಇರೋಮ್ ಶರ್ಮಿಲಾರ ಬಗ್ಗೆಯೂ ಹೇಳಿಕೆಯು ಪ್ರಸ್ತಾಪಿಸಿದೆ. ಅವರ ಹೋರಾಟವು ಕೇವಲ ಸರಕಾರದಿಂದ ಮಾತ್ರ ತಿರಸ್ಕರಿಸಲ್ಪಟ್ಟಿರುವುದಲ್ಲ, ಅನ್ನಾ ಹಝಾರೆಯ ಹಿಂದಿರುವ 'ನಾಗರಿಕ ಸಮಾಜ'ದಿಂದಲೂ ತಿರಸ್ಕರಿಸಲ್ಪಟ್ಟಿದೆ ಎಂದು ಅವರು ಹೇಳಿದ್ದಾರೆ.

'ಕಾನೂನು ಮತ್ತು ಸುವ್ಯವಸ್ಥೆ'ಯ ವಿಧಿಗಳು ರಾಜ್ಯ ಸರಕಾರಗಳಿಂದ ಕೇವಲ ಅನ್ನಾ ಹಝಾರೆಯಂತಹ ಖ್ಯಾತರ ಪ್ರತಿಭಟನೆಯನ್ನು ದಮನಿಸಲು ಬಳಕೆಯಾಗುವುದಲ್ಲ, ದಕ್ಷಿಣ ರಾಜ್ಯಗಳಲ್ಲಿ ಈ ವರ್ಷದ ಸ್ವಾತಂತ್ರ್ಯೋತ್ಸವ ದಿನಾಚರಣೆಯಂದು ಪಾಪ್ಯುಲರ್ ಫ್ರಂಟ್‌ನಂತಹ ಅಲ್ಪಸಂಖ್ಯಾತ ಸಂಘಟನೆಗಳ ದೇಶಪ್ರೇಮವನ್ನು ಬಿಂಬಿಸುವ ಪರೇಡ್‌ಗಳು ಹಾಗೂ ಸಾರ್ವಜನಿಕ ಸಭೆಗಳನ್ನು ತಡೆಯಲೂ ಇದನ್ನು ಬಳಸಲಾಗುತ್ತಿದೆ. ಅನ್ನಾ ಹಝಾರೆ ಪ್ರಕರಣವನ್ನು ಹಕ್ಕಿನ ಉಲ್ಲಂಘನೆಯೆಂದು ಹೇಳುವ ಜನರು ದೇಶದೆಲ್ಲೆಡೆ ನಡೆಯುತ್ತಿರುವ ಇಂತಹ ಎಲ್ಲಾ ಉಲ್ಲಂಘನೆಗಳ ವಿರುದ್ಧವೂ ಮುಂದೆ ಬರಬೇಕಾಗಿದೆ ಅವರು ತಿಳಿಸಿದ್ದಾರೆ.




ಕೋಲಾರ: ಪುತ್ತೂರು ಹಾಗೂ ಗುಲ್ಬರ್ಗಾದಲ್ಲಿ ಫ್ರೀಡಂ ಪರೇಡ್ ಮತ್ತು ಸ್ವಾತಂತ್ರ್ಯ ದಿನಾಚರಣೆ ನಡೆಸಲು ಅನುಮತಿ ನಿರಾಕರಿಸಿರುವುದರ ವಿರುದ್ಧ ಪಾಪ್ಯುಲರ್ ಫ್ರಂಟ್, ಕೋಲಾರ ಜಿಲ್ಲಾ ಸಮಿತಿಯ ವತಿಯಿಂದ ಇತ್ತೀಚೆಗೆ ಪ್ರತಿಭಟನೆ ನಡೆಯಿತು.

## ■ ಪಾವೂರು: ಎಸ್‌ಡಿಪಿಐ ಕಚೇರಿಯಲ್ಲಿ ಧ್ವಜಾರೋಹಣ



ಪಾವೂರು: ಸೋಶಿಯಲ್ ಡೆಮೋಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ, ಪಾವೂರು ಗ್ರಾಮ ಸಮಿತಿ ವತಿಯಿಂದ ಆಗಸ್ಟ್ 15ರಂದು ಇಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಸಲಾಯಿತು.

ಪಂಚಾಯತ್ ಅಧ್ಯಕ್ಷ ಖಾದರ್ ಇನೋಳಿ ಧ್ವಜಾರೋಹಣ ನಡೆಸಿದರು. ಎಸ್.ಡಿ.ಪಿ.ಐ. ಪಾವೂರು ಗ್ರಾಮ ಸಮಿತಿ ಸದಸ್ಯರಾದ ಹಾರಿಸ್ ಮುಸ್ಲಿಯಾರ್ ಸ್ವಾತಂತ್ರ್ಯದ ಸಂದೇಶವನ್ನು ನೀಡಿದರು. ಪಾವೂರು ಗ್ರಾಮ ಪಂಚಾಯತ್ ಸದಸ್ಯರಾದ ಎಂ.ಮುಹಮ್ಮದ್, ವೆಲೇರಿಯನ್ ಡಿಸೋಜ, ಲೀಲಾವತಿ, ದುಗ್ಗಪ್ಪ ಪೂಜಾರಿ, ಬೀಪಾತಿಮ್ಮ, ಐ. ಎಸ್. ಹನೀಫ್, ಪಿ.ಎಫ್.ಐ ಮಲಾರ್ ಘಟಕದ ಅಧ್ಯಕ್ಷ ಕಮರ್ ಮಲಾರ್, ತಾಲೂಕು ಪಂಚಾಯತ್ ಸದಸ್ಯ ಎಂ.ಟಿ ಮುಹಮ್ಮದ್ ಉಪಸ್ಥಿತರಿದ್ದರು, ರಹೀಂ ಮಲಾರ್ ಸ್ವಾಗತಿಸಿ, ವಂದಿಸಿದರು.

## ■ ಮೈಸೂರಿನಲ್ಲಿ ಇಫ್ತಾರ್ ಕಾರ್ಯಕ್ರಮ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಚಾಮರಾಜ ಅಸೆಂಬ್ಲಿ ವತಿಯಿಂದ ಇತ್ತೀಚೆಗೆ ಇಲ್ಲಿನ ಅಕ್ಬರ್ ರೋಡ್‌ನಲ್ಲಿರುವ ಬಶೀರ್ ಸಾಬ್ ಕಾಂಪ್ಲೆಕ್ಸ್‌ನಲ್ಲಿ ಇಫ್ತಾರ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಾವಿರಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಹಲವು ಧರ್ಮೀಯರು, ಸಾಮಾಜಿಕ ಕಾರ್ಯಕರ್ತರು ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಎಸಂಡಿಪಿಐ ಜಿಲ್ಲಾಧ್ಯಕ್ಷ ಫೈರೂಝ್, ಜಿಲ್ಲಾ ಕಾರ್ಯದರ್ಶಿ ಮತೀನ್ ಬೇಗ್, ಜಿಲ್ಲಾ ಕೋಶಾಧಿಕಾರಿ ಮುಹಮ್ಮದ್ ಫರುಖುಲುಲ್ಲಾ, ಚಾಮರಾಜ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಠ್, ಕಾರ್ಯದರ್ಶಿ ನಈಮ್ ಖಾನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜಂಟಿ ಕಾರ್ಯದರ್ಶಿ ನೂರ್ ಖಾನ್ ಧನ್ಯವಾದ ಸಮರ್ಪಿಸಿದರು.

## ■ ಮೈಸೂರು: ಸ್ವಾತಂತ್ರ್ಯೋತ್ಸವದಂದು ಎಸ್‌ಡಿಪಿಐಯಿಂದ ಬಡವರಿಗೆ ಅಕ್ಕಿ ವಿತರಣೆ

ಮೈಸೂರು: ಸೋಶಿಯಲ್ ಡೆಮಾಕ್ರಟಿಕ್ ಪ್ರಾರ್ಟಿ ಆಫ್ ಇಂಡಿಯಾ, ಚಾಮರಾಜ ಅಸೆಂಬ್ಲಿ ಸಮಿತಿಯ ವತಿಯಿಂದ ಇಲ್ಲಿನ ಪುಲಿಕೇಶಿ ರೋಡ್‌ನಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆ ನಡೆಯಿತು.

ಧ್ವಜಾರೋಹಣದ ಬಳಿಕ ಪ್ರದೇಶದ ಬಡವರಿಗೆ ಉಚಿತವಾಗಿ ಅಕ್ಕಿ ವಿತರಿಸಲಾಯಿತು.

ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯರಾದ ಪ್ರೊ.ಶಬ್ಬೀರ್ ಮುಸ್ತಫಾ, ಜಿಲ್ಲಾ ಕೋಶಾಧಿಕಾರಿ ಮುಹಮ್ಮದ್ ಫರುಖುಲುಲ್ಲಾ,



ಚಾಮರಾಜ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಠ್, ಎಸ್‌ಡಿಪಿಐ ಜಿಲ್ಲಾ ಸಮಿತಿ ಸದಸ್ಯೆ ಫಾತಿಮಾ, ಪಾಪ್ಯುಲರ್ ಫ್ರಂಟ್ ಮೈಸೂರು ಜಿಲ್ಲಾಧ್ಯಕ್ಷ ಅತಾವುಲ್ಲಾ, ಎಸ್‌ಡಿಪಿಐ ಚಾಮರಾಜ ಅಸೆಂಬ್ಲಿ ಕಾರ್ಯದರ್ಶಿ ನಈಮ್ ಖಾನ್, ಜಂಟಿ ಕಾರ್ಯದರ್ಶಿ ನೂರ್ ಖಾನ್, ಸಮಿತಿ ಸದಸ್ಯ ಇಕ್ಬಾಲ್ ಪಾಶ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ವಳಚ್ಚಿಲ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ

ಮಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಳಚ್ಚಿಲ್‌ನಲ್ಲಿರುವ ಎಸ್‌ಡಿಪಿಐ ಕಚೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಸ್ವಾತಂತ್ರ್ಯ ಹೋರಾಟಗಾರ ಇಸ್ಮಾಯೀಲ್ (ಇಚ್ಚಾಕ) ಧ್ವಜಾರೋಹಣ ಮಾಡಿದರು.

ಎಸ್‌ಡಿಪಿಐ ಶಾಖಾ ಅಧ್ಯಕ್ಷ ನೆಲ್ಸನ್ ಡಿ ಸೋಝಾ, ಅಡ್ಯಾರು ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರಹ್ಮಾನ್, ಫಿಲೋಮಿನಾ ಸಾಜಿ, ಮೊಂಥೆರೊ, ಸಾಂತಲಾ ಕುವೆಲ್ಲೊ ಮತ್ತು ಎಸ್‌ಡಿಪಿಐ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಬೆಳ್ತಂಗಡಿ: ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ

ಬೆಳ್ತಂಗಡಿ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಬೆಳ್ತಂಗಡಿ ಕ್ಷೇತ್ರ ಸಮಿತಿ ವತಿಯಿಂದ ಪಕ್ಷದ ಕಚೇರಿಯಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಬೆಳ್ತಂಗಡಿ ಕ್ಷೇತ್ರ ಸಮಿತಿ ಅಧ್ಯಕ್ಷ ಅಕ್ಬರ್ ಬೆಳ್ತಂಗಡಿ ಧ್ವಜಾರೋಹಣ ಮಾಡಿದರು. ಎಸ್‌ಡಿಪಿಐ ಮದ್ದಡ್ಕ ಬ್ರಾಂಚ್ ಅಧ್ಯಕ್ಷ ಯೂನುಸ್ ಅಮೀನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ನಂತರ ನಡೆದ ಸಭಾ ಕಾರ್ಯಕ್ರಮವನ್ನು ಕುವೆಟ್ಟು ಗ್ರಾಮ ಪಂಚಾಯತ್ ಸದಸ್ಯ ಅಲ್ಫೋನಂ ಫ್ರಾಂಕೊ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಸಲೀಮ್ ಗುರುವಾಯನಕೆರೆ, ಕುವೆಟ್ಟು ಗ್ರಾಮ ಪಂಚಾಯತ್ ಅಧ್ಯಕ್ಷ ಗೋಪಿನಾಥ್ ನಾಯಕ್, ಸದಸ್ಯ ಅಬ್ಬೋನ್ ಮದ್ದಡ್ಕ, ಜೈ ಕನ್ನಡಮ್ಮ ವಾರಪತ್ರಿಕೆಯ ಸಂಪಾದಕ ದೇವಿ ಪ್ರಸಾದ್, ಬೆಳ್ತಂಗಡಿ ತಾಲೂಕು



ಚರ್ಚ್ ಪಾಲನಾ ಸಮಿತಿಯ ಕಾರ್ಯದರ್ಶಿ ಲ್ಯಾನಿ ಎ ಪಿರೇರಾ, ಕ್ರಿಶ್ಚಿಯನ್ ವಿವಾಹ ನೋಂದಣಾಧಿಕಾರಿ ಎಸ್.ಲೋಬೊ, ಎಸ್‌ಡಿಪಿಐ ಬೆಳ್ತಂಗಡಿ ಕ್ಷೇತ್ರ ಕಾರ್ಯದರ್ಶಿ ಅನೀಸ್ ಗೇರುಕಟ್ಟೆ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ನಿವೃತ್ತ ಸೈನಿಕ ರೆಮಿಜಿಯಸ್ ಲೋಬೊರನ್ನು ಅಭಿನಂದಿಸಲಾಯಿತು. ನೌಶಾದ್ ಮದ್ದಡ್ಕ ಸ್ವಾಗತಿಸಿ ಸ್ವಾಲಿಹ್ ಮದ್ದಡ್ಕ ವಂದಿಸಿದರು ಮತ್ತು ಖಾದರ್ ನಾವೂರು ಕಾರ್ಯಕ್ರಮ ನಿರೂಪಿಸಿದರು.

## ■ ಮಂಗಳೂರಿನಲ್ಲಿ ಧ್ವಜಾರೋಹಣಾ

ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ವತಿಯಿಂದ ಪಕ್ಷದ ಜಿಲ್ಲಾ ಕಚೇರಿಯ ಮುಂದೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಎಸ್‌ಡಿಪಿಐ ದ.ಕ.ಜಿಲ್ಲಾಧ್ಯಕ್ಷ ಜಲೀಲ್ ಕೆ., ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಸಿದ್ದೀಕ್ ಕೆ. ಮತ್ತು ಝುಮೀಲ್ ಬೆಂಗ್ರೆ ಉಪಸ್ಥಿತರಿದ್ದರು.

## ■ ಹಳೆಯಂಗಡಿಯಲ್ಲಿ ಸ್ವಾತಂತ್ರ್ಯ ಸಂಭ್ರಮಾಚರಣೆ



ಹಳೆಯಂಗಡಿ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಬೊಳ್ಳೂರು-ಇಂದಿರಾನಗರ ಘಟಕದ ವತಿಯಿಂದ ಸ್ವಾತಂತ್ರ್ಯೋತ್ಸವವನ್ನು ಹಳೆಯಂಗಡಿಯ ಇಂದಿರಾನಗರ ಬಾಲವನದಲ್ಲಿ ಆಚರಿಸಲಾಯಿತು.

ಈ ಸಂದರ್ಭ ಹಳೆಯಂಗಡಿ ಪದವಿ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಡಾ.ಮಹೇಶ್ ಕುಮಾರ್, ಬೊಳ್ಳೂರಿನ ದ.ಕ.ಜಿಲ್ಲಾ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಜಯರಾಮ್, ಇಂದಿರಾ ನಗರ ಖಿಲ್‌ರಿಯಾ ಮದರಸದ ಸದರ್ ಮುಅಲ್ಲಿಮ್ ಹನೀಫ್ ದಾರಿಮಿ, ದ.ಕ.ಜಿಲ್ಲಾ ವಕ್ಫ್ ಬೋರ್ಡ್ ಸಮಿತಿ ಸದಸ್ಯ ಶಾಹುಲ್ ಹಮೀದ್ ಕದಿಕೆ, ಎಸ್‌ಡಿಪಿಐ ಬೊಳ್ಳೂರು ಘಟಕಾಧ್ಯಕ್ಷ ಸಿದ್ದೀಕ್ ಬೊಳ್ಳೂರು ಮತ್ತಿತರರು ಉಪಸ್ಥಿತರಿಂದ್ದರು.

---



ಮಂಡ್ಯ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಮಂಡ್ಯ ಜಿಲ್ಲಾ ಘಟಕದ ವತಿಯಿಂದ ಸ್ವಾತಂತ್ರ್ಯೋತ್ಸವ ದಿನದಂದು ಇಲ್ಲಿನ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಮುಹಮ್ಮದ್ ತಾಹಿರ್, ಉಪಾಧ್ಯಕ್ಷ ಎಂ.ಪಿ.ಮನ್ಸೂರ್ ಅಹ್ಮದ್, ಪ್ರ.ಕಾರ್ಯದರ್ಶಿ ಮುಹಮ್ಮದ್ ಝೈಬುಲ್ಲಾ, ಕೋಶಾಧಿಕಾರಿ ಅಸ್ಗರ್ ಅಹ್ಮದ್, ಜಿಲ್ಲಾ ಸಮಿತಿ ಸದಸ್ಯ ನೂರ್ ಮುಹಮ್ಮದ್ ಖುರೇಶಿ, ಫಾರೂಕ್ ಅಹ್ಮದ್, ಇಮ್ರಾನ್ ಖಾನ್, ಸಾದಾತ್ ಉಪಸ್ಥಿತರಿದ್ದರು.

## ■ ರಿಯಾದ್: ಐಎಫ್‌ಎಫ್‌ನಿಂದ ಇಫ್ತಾರ್, ಸ್ನೇಹಕೂಟ

ರಿಯಾದ್: ಭಾರತೀಯ ಸಮುದಾಯದ ಸದಸ್ಯರಿಗಾಗಿ ಇಂಡಿಯಾ ಫ್ರೆಟರ್ನಿಟಿ ಫಾರಂ (ಐಎಫ್‌ಎಫ್) ವತಿಯಿಂದ ಇತ್ತೀಚೆಗೆ ಇಲ್ಲಿನ ಇಸ್ತಿರಾಹದಲ್ಲಿ ಇಫ್ತಾರ್, ಸ್ನೇಹಕೂಟವನ್ನು ಆಯೋಜಿಸಲಾಗಿತ್ತು.

ಭಾರತದ ವಿವಿಧ ರಾಜ್ಯಗಳಿಂದ 3000ಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ನಾಲ್ಕು ಭಾರತೀಯ ಭಾಷೆಗಳಲ್ಲಿ ರಂಝಾನ್ ಸಂದೇಶವನ್ನು ನೀಡಲಾಯಿತು ಎಂದು ಸಂಯೋಜಕ ಕಬೀರ್ ಪಾಲಕಾಡ್ ತಿಳಿಸಿದರು. ನಾಸರ್ ಕನ್ನಡ, ಶರ್ಫುದ್ದೀನ್ ತಮಿಳು, ಸಯ್ಯದ್ ಅಲಿ ಉರ್ದು ಹಾಗೂ ಹಸೈನಾರ್ ಮಳಯಾಲಂ ಭಾಷೆಗಳಲ್ಲಿ 'ರಂಝಾನ್ ವಿಜಯದ ತಿಂಗಳು' ಎಂಬ ವಿಷಯದ ಮೇಲೆ ಮಾತನಾಡಿದರು. ಕಾರ್ಯಕ್ರಮದಲ್ಲಿ 'ಪ್ರೊಜೆಕ್ಟ್ ಪ್ರದರ್ಶನ'ವನ್ನು ಏರ್ಪಡಿಸಲಾಗಿದ್ದು, ಐಎಫ್‌ಎಫ್ ನಡೆಸಿದ ವಿವಿಧ ಕಾರ್ಯಕ್ರಮಗಳ ಫೋಟೊಗಳ ಪ್ರದರ್ಶನವನ್ನೂ ಅದು ಒಳಗೊಂಡಿತ್ತು.



ಐಎಫ್‌ಎಫ್ ಕೇರಳದ ಸದಸ್ಯರಾದ ಇಲ್ಯಾಸ್, ಯೂಸುಫ್, ಅರ್ಷೀರಝ್, ಅಶ್ರಫ್, ಸಲೀಮ್, ಮೊಯೀನುದ್ದೀನ್, ತಮಿಳುನಾಡಿನವರಾದ ಫಯಾಝ್ ಮತ್ತು ರಫೀಕ್, ಕರ್ನಾಟಕದವರಾದ ಬಶೀರ್ ಮತ್ತು ನಾಸರ್, ಆಂಧ್ರ ಪ್ರದೇಶದ ಜಾವೇದ್, ಪಶ್ಚಿಮ ಬಂಗಾಳದ ಸಯ್ಯದ್ ಅಲಿ ಮತ್ತು ಉತ್ತರ ಪ್ರದೇಶದ ಶಮ್ಶಾದ್ ಕಾರ್ಯಕ್ರಮದ ಯಶಸ್ವಿಗಾಗಿ ಶ್ರಮಿಸಿದರು.

## ■ ಜಿದ್ದಾದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ




ಜಿದ್ದಾ ( ಸೌದಿ ಅರೇಬಿಯಾ) : ಇಂಡಿಯಾ ಫ್ರೆಟರ್ನಿಟಿ ಫೋರಂ, ಜಿದ್ದಾ ಕರ್ನಾಟಕ ಘಟಕ ಮತ್ತು ಅಲ್ ನೂರ್ ಮೆಡಿಕಲ್ ಸೆಂಟರ್, ಶರಫಿಯಾ, ಜಿದ್ದಾ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಮತ್ತು ರಕ್ತ ಪರಿಶೋಧನಾ ಶಿಬಿರ ಇತ್ತೀಚೆಗೆ ಅಲ್ ನೂರ್ ಮೆಡಿಕಲ್ ಸೆಂಟರ್ ಶರಫಿಯಾ ಜಿದ್ದಾದಲ್ಲಿ ನಡೆಯಿತು. ಐಎಫ್‌ಎಫ್ ಜಿದ್ದಾ ಕರ್ನಾಟಕ ಘಟಕದ ಅಧ್ಯಕ್ಷ ಮೊಯ್ದಿನ್ ಹಳೆಯಂಗಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಡಾ. ಸಲ್ಮಾನ್ ಅತರ್ ಬೆಂಗಳೂರು, ಇ.ಎನ್.ಟಿ. ಸರ್ಜನ್, ಅಲ್ ನೂರ್ ಮೆಡಿಕಲ್ ಸೆಂಟರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಅಬ್ದುಲ್ ಘನಿ, ಸೌದಿ ಸಂಯೋಜಕ, ಇಂಡಿಯಾ ಫ್ರೆಟರ್ನಿಟಿ ಫೋರಂ, ಸಬೀರ್ ಅಹ್ಮದ್, ಅಡ್ಮಿನ್ ಅಸಿಸ್ಟೆಂಟ್ ಅಲ್ ನೂರ್ ಮೆಡಿಕಲ್ ಸೆಂಟರ್, ಡಾ.ಅರುಣ್ ಕರ್ನಾಟಕ, ಮುಹಮ್ಮದ್ ಕಾರ್ಯನಿರ್ವಾಹಕ ವ್ಯವಸ್ಥಾಪಕ, ಅಲ್ ನೂರ್ ಮೆಡಿಕಲ್ ಸೆಂಟರ್ ಶಿಬಿರದಲ್ಲಿ ಭಾಗವಹಿಸಿದ್ದರು.

ಹಂಝ ಕಿರಾಅತ್ ಪಠಿಸಿದರು. ಅಶ್ರಫ್ ಬಜ್ಪೆ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಬೆಂಗಳೂರು: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಬೆಂಗಳೂರು ಜಿಲ್ಲಾ ಘಟಕದ ವತಿಯಿಂದ ಇತ್ತೀಚೆಗೆ ಇಲ್ಲಿನ ಹೆನ್ನೂರ್ ಬಂಡೆಯ ಹಸ್ನತ್ ಕಾಲೇಜಿನಲ್ಲಿ *Say No To Tobbacco* ಕಾರ್ಯಕ್ರಮ ನಡೆಯಿತು.



## ■ ಕೊಲೆ ಅಪರಾಧಿಗಳ ಬಂಧನಕ್ಕೆ ಎನ್‌ಡಬ್ಲ್ಯುಎಫ್ ಆಗ್ರಹ




ಮಂಗಳೂರು (ಕರ್ನಾಟಕ): ಕಾವೂರಿನಲ್ಲಿ ಇತ್ತೀಚೆಗೆ ನಡೆದ ಜೋಡಿ ಕೊಲೆಯ ಅಪರಾಧಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿ ನ್ಯಾಶನಲ್ ವುಮೆನ್ಸ್ ಫ್ರಂಟ್, ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಸಹಯೋಗದೊಂದಿಗೆ ದ.ಕ. ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿತು.

ಎನ್‌ಡಬ್ಲ್ಯುಎಫ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಾಹಿದಾ ತಸ್ನೀಮ್ ಮಾತನಾಡಿ, ಪಂಜಿಮೊಗರುವಿನಲ್ಲಿ ಇತ್ತೀಚೆಗೆ ನಡೆದ ರಝೀಯಾ ಮತ್ತು ಆಕೆಯ ಪುತ್ರಿಯ ಹತ್ಯಾ ಪ್ರಕರಣದ ಬಗ್ಗೆ ಪೊಲೀಸರು ಸಮಗ್ರ ತನಿಖೆ ನಡೆಸಿ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ ಸಂಘಟನೆಯು ಪ್ರತಿಭಟನೆಯನ್ನು ತೀವ್ರಗೊಳಿಸಲಿದೆ ಎಂದು ಎಚ್ಚರಿಸಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಜಲೀಲ್ ಕೆ., ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಎನ್‌ಸಿಎಚ್‌ಆರ್‌ಒ ರಾಜ್ಯ ಸಂಯೋಜಕ ಮುಹಮ್ಮದ್ ಕಕ್ಕಿಂಜೆ, ಎಸ್‌ಡಿಪಿಐ ಕಾವೂರು ಸಮಿತಿ ಅಧ್ಯಕ್ಷ ಮುಹಮ್ಮದ್ ರಫೀಕ್ ಕೂಳೂರು ಮತ್ತು ಹತ್ಯೆಗೊಳಗಾದ ರಝೀಯರವರ ಸಹೋದರ ಆರಿಫ್ ಮರಕಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎನ್‌ಡಬ್ಲ್ಯುಎಫ್ ಜಿಲ್ಲಾಧ್ಯಕ್ಷೆ ಶಮೀನಾ ಸ್ವಾಗತಿಸಿ, ಬಂಟ್ವಾಳ ವಲಯಾಧ್ಯಕ್ಷೆ ಶಮೀನಾ ಮಂಚಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಉಡುಪಿ: ಸ್ವಾತಂತ್ರ್ಯೋತ್ಸವದ ಅಂಗವಾಗಿ ಉಡುಪಿಯ ಎಸ್‌ಡಿಪಿಐ ಜಿಲ್ಲಾ ಕಚೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಎಸ್‌ಡಿಪಿಐ ಉಡುಪಿ ಜಿಲ್ಲಾಧ್ಯಕ್ಷ ಅಮೀರ್ ಹಂಝಾ ಮತ್ತಿತರರು ಉಪಸ್ಥಿತರಿದ್ದರು.

## ■ ಸ್ವಾತಂತ್ರ್ಯೋತ್ಸವ ಆಚರಣೆ



ತುಮಕೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ತುಮಕೂರು ಜಿಲ್ಲಾ ಘಟಕದ ವತಿಯಿಂದ ಸ್ವಾತಂತ್ರ್ಯೋತ್ಸವದ ಅಂಗವಾಗಿ ಇಲ್ಲಿನ ಬಿ.ಜಿ.ಪಾಳ್ಯ ಸರ್ಕಲ್‌ನಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಈ ಸಂದರ್ಭ ಜಿಲ್ಲಾ ಉಪಾಧ್ಯಕ್ಷ ಬಶೀರ್ ಅಹ್ಮದ್, ರಾಜ್ಯ ಪ್ರ. ಕಾರ್ಯದರ್ಶಿ ಅಬ್ದುಲ್ ಹನ್ನಾನ್, ವಜೀರ್ ಸಾಹೇಬ್, ಬಿ.ಜಯಮ್ಮ, ನರೇಶ್ ಸಾಹೆಬ್, ಮೌಲಾನಾ ಕಲಂದರ್ ಸಾಹೇಬ್, ಜಿಲ್ಲಾ ಪ್ರ. ಕಾರ್ಯದರ್ಶಿ ಮುಹಮ್ಮದ್ ಸಾದಿಕ್ ಜಮೀಲ್, ಕಾರ್ಯದರ್ಶಿ ರಿಹಾನ್ ಖಾನಂ, ಉಪಸ್ಥಿತರಿದ್ದರು.




ಪುತ್ತೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ವತಿಯಿಂದ ವಳಾಲ್‌ನಲ್ಲಿರುವ ಎಸ್‌ಡಿಪಿಐ ಕಚೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.



47ನೇ ಪುಟದಿಂದ...

*ಆಡಳಿತ ಯಂತ್ರವನ್ನೇ ಜನರ ಹತ್ಯೆ ಮಾಡಲು ಬಳಸುವ ನರೇಂದ್ರ ಮೋದಿಯಂತವರು ಆಡಳಿತ ನಡೆಸುವವರೆಗೂ ಹಾಗೂ ಎಎಫ್‌ಎಸ್‌ಪಿಎನಂತಹ ಕರಾಳ ಕಾಯ್ದೆಗಳು ಈ ದೇಶದಲ್ಲಿ ಜಾರಿಯಲ್ಲಿರುವವರೆಗೂ ನಕಲಿ ಎನ್‌ಕೌಂಟರ್‌ಗಳ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಜನರ ಆಸ್ತಿಪಾಸ್ತಿ, ಜೀವ ಹಾನಿ ಸಂಭವಿಸುತ್ತಲೇ ಇರುತ್ತದೆ. ಈ ದೇಶದ ಸಂವಿಧಾನ ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕನ್ನು ನೀಡಿದೆ. ಆ ಹಕ್ಕನ್ನು ಕಸಿದುಕೊಳ್ಳುವವರು ಯಾರೇ ಆಗಲಿ ಅವರಿಗೆ ಅವರಿಗೆ ಗಲ್ಲುಶಿಕ್ಷೆಯಾಗಲೇ ಬೇಕು. ಈ ದೇಶದಲ್ಲಿ ನಡೆದಿರುವ ಎಲ್ಲಾ ಎನ್‌ಕೌಂಟರ್‌ಗಳ ತನಿಖೆ ಅತಿ ಶೀಘ್ರವಾಗಿ ನಡೆಯಲಿ. ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾಗಲಿ. ಇರೋಮ್ ಶರ್ಮಿಳಾರಂತಹ ಉಪವಾಸ ಸತ್ಯಾಗ್ರಹಿಗಳ ಹೋರಾಟಕ್ಕೊಂದು ನಿಜವಾದ ಅರ್ಥ ದೊರೆಯಲಿ. ಎನ್‌ಕೌಂಟರ್ ಮುಕ್ತ ಭಾರತ ನಮ್ಮದಾಗಲಿ.*

ಹಾಗೂ ಆಡಳಿತ ವ್ಯವಸ್ಥೆಯಲ್ಲಿರುವವರಿಗೆ ತನ್ನ ಅಭಯ ಹಸ್ತ ನೀಡುತ್ತಾರೆ. ಅದೇ ರೀತಿ ಅಲ್ಲಿನ ಹೆಚ್ಚಿನ ಪೊಲೀಸ್ ಅಧಿಕಾರಿಗಳು ಕೂಡ ತಮ್ಮ ಭಡ್ತಿ ಹಾಗೂ ಪ್ರಶಸ್ತಿಗಾಗಿ ನಕಲಿ ಎನ್‌ಕೌಂಟರ್‌ಗಳನ್ನು ಒಂದು ಹವ್ಯಾಸವಾಗಿಸಿಕೊಂಡಿದ್ದಾರೆ. ಗುಜರಾತ್‌ನಲ್ಲಿ ನಡೆದಿರುವ ನಕಲಿ ಎನ್‌ಕೌಂಟರ್‌ಗಳಲ್ಲಿ ಮೋದಿಯ ಹೆಸರು ಹಾಗೂ ಆತನ ಸಚಿವ ಸಂಪುಟದಲ್ಲಿರುವವರ ಹೆಸರುಗಳೂ ಕೇಳಿ ಬಂದಿರುವುದು ಮತ್ತು ಆಡಳಿತ ವ್ಯವಸ್ಥೆಯೇ ಈ ಕೃತ್ಯದಲ್ಲಿ ತೊಡಗಿರುವುದನ್ನು ಗಮನಿಸಿದರೆ ಗುಜರಾತ್‌ನಲ್ಲಿ ನಕಲಿ ಎನ್‌ಕೌಂಟರ್ ಭಯಾನಕತೆಯನ್ನು ಅರ್ಥ ಮಾಡಿಕೊಳ್ಳಬಹುದು. ಇದರೊಂದಿಗೆ ದೆಹಲಿಯಲ್ಲಿ ನಡೆದ ಬಾಟ್ಲಾಹೌಸ್ ನಕಲಿ ಎನ್‌ಕೌಂಟರ್ ಪ್ರಕರಣವೂ ಇಲ್ಲಿ ಉಲ್ಲೇಖನೀಯ. ಅಲ್ಲಿಯೂ ಕೂಡ ಇಬ್ಬರು ಅಮಾಯಕ ವಿದ್ಯಾರ್ಥಿಗಳು ದೆಹಲಿ ಪೊಲೀಸರ ಗುಂಡೇಟಿಗೆ ಬಲಿಯಾಗಿದ್ದರು.

ನಕಲಿ ಎನ್‌ಕೌಂಟರ್‌ಗೆ ಪ್ರಕರಣಗಳು ಕಾಶ್ಮೀರದಲ್ಲಿ ಇನ್ನೂ ಅಧಿಕ. ಎಎಫ್‌ಎಸ್‌ಪಿಎ ಎಂಬ ವಿಶೇಷಾಧಿಕಾರದಡಿಯಲ್ಲಿ ಅಮಾಯಕರು ಬಲಿಯಾಗುತ್ತಲೇ ಇದ್ದಾರೆ. ಅಲ್ಲಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳಲಾಗಿದೆ. ಯಾವತ್ತಾದರೂ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಿದರೆ ಭಯೋತ್ಪಾದನೆಯ ಪಟ್ಟ ಕಟ್ಟಿ ಬಂದೂಕುಗಳಿಂದಲೇ ಉತ್ತರ ನೀಡಲಾಗುತ್ತದೆ. ಸಾವಿರಾರು ಮಂದಿ ಇಲ್ಲಿ ಎನ್‌ಕೌಂಟರ್‌ಗೆ ಬಲಿಯಾಗುತ್ತಿದ್ದರೆ, ಅದೆಷ್ಟೋ ಮಂದಿ ಕಾಣೆಯಾಗುತ್ತಿದ್ದಾರೆ. ಈ ನಕಲಿ ಎನ್‌ಕೌಂಟರ್‌ಗೆ ಮಕ್ಕಳು, ಮಹಿಳೆಯರು, ಪ್ರತಿಭಟನಕಾರರು, ಯುವಕರು, ಗೃಹಿಣಿಯರು, ವೃದ್ಧರು ಮುಂತಾದವರು ಬಲಿಯಾಗುತ್ತಲೇ ಇದ್ದಾರೆ. ಇಲ್ಲಿನ ಜನರು ಎನ್‌ಕೌಂಟರ್‌ನಲ್ಲಿ ಕೊಲ್ಲಲ್ಪಡುತ್ತಿದ್ದರೆ ಮತ್ತೊಂದು ಭಾಗವಾಗಿ ಕಾಣೆ, ಅತ್ಯಾಚಾರ, ಕಸ್ಟಡಿ ಕೊಲೆ ಪ್ರಕರಣಗಳಲ್ಲಿ ಜೀವ ಕಳೆದುಕೊಳ್ಳುತ್ತಿದ್ದಾರೆ.

ಹಿಂದೊಮ್ಮೆ ಕಾಶ್ಮೀರದ ಹಳ್ಳಿಯೊಂದರಲ್ಲಿ ಯಾವುದೇ ಕುರುಹಿರದ 2700 ಸಮಾಧಿಗಳಲ್ಲಿ ಸುಮಾರು 3000 ಮೃತದೇಹಗಳು ಪತ್ತೆಯಾಗಿದ್ದವು. ಒಂದು ಅಂದಾಜಿನ ಪ್ರಕಾರ 1989ರಿಂದೀಚೆಗೆ ಇಲ್ಲಿ 100000 ಕಾಶ್ಮೀರಿಗಳು ಭಾರತೀಯ ಸೇನೆಯಿಂದ ಹತರಾಗಿದ್ದಾರೆ. 20000ಕ್ಕಿಂತಲೂ ಅಧಿಕ ಮಂದಿ ಮಹಿಳೆಯರು ಅತ್ಯಾಚಾರಕ್ಕೊಳಗಾಗಿದ್ದಾರೆ. ಈ ಪಟ್ಟಿಯು ಇನ್ನೂ ವೃದ್ಧಿಯಾಗುತ್ತಲೇ ಇದೆ. ಇದು ನಮ್ಮ ದೇಶದಲ್ಲೇ ನಡೆಯುತ್ತಿರುವಂತಹ ನಂಬಲಸಾಧ್ಯವಾದ ಭಯಾನಕ ಸತ್ಯಗಳು.

ದೇಶಾದ್ಯಂತ ನಡೆಯುತ್ತಿರುವ ಪ್ರತಿಯೊಂದು ಎನ್‌ಕೌಂಟರ್ ನಕಲಿ ಎಂದೇ ಮೇಲಿನ ಘಟನೆಗಳಿಂದ ಅರ್ಥೈಸಿಕೊಳ್ಳಬಹುದು. ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಂತೆ ಎನ್‌ಕೌಂಟರ್ ಹೆಸರಿನಲ್ಲಿ ಕೊಲೆ ಮಾಡುವ ಪೊಲೀಸ್ ಅಧಿಕಾರಿಗಳಿಗೆ ಶಿಕ್ಷಯಾಗಲೇಬೇಕಾಗಿದೆ. ಅದರಂತೆ ದೇಶದ ಜನರ ಪ್ರಾಣ, ಮಾನ, ಜೀವಹಾನಿಗೆ ತೊಡಕುಂಟು ಮಾಡುವ ಮತ್ತು ಮಾನವೀಯತೆಗೆ ಕುಂದುಂಟು ಮಾಡುವ ಎಎಫ್‌ಎಸ್‌ಪಿಎ ಕಾಯ್ದೆಗಳನ್ನು ಅತೀ ಶೀಘ್ರವಾಗಿ ತೆಗೆದು ಹಾಕುವಂತೆ ಸುಪ್ರೀಂ ಕೋರ್ಟ್ ಮಹತ್ವದ ಆದೇಶ ಹೊರಡಿಸಬೇಕಾಗಿದೆ. ಈ ದೇಶದಲ್ಲಿ ಈಗಾಗಲೇ ನಡೆದಿರುವ ನಕಲಿ ಎನ್‌ಕೌಂಟರ್‌ಗಳಲ್ಲಿ ಹಲವು ಮಂದಿ ಹಿಂದೂ-ಮುಸ್ಲಿಮರ ಜೀವಗಳು ಬಲಿಯಾಗಿವೆ.

ಆಡಳಿತ ಯಂತ್ರವನ್ನೇ ಜನರ ಹತ್ಯೆ ಮಾಡಲು ಬಳಸುವ ನರೇಂದ್ರ ಮೋದಿಯಂತವರು ಆಡಳಿತ ನಡೆಸುವವರೆಗೂ ಹಾಗೂ ಎಎಫ್‌ಎಸ್‌ಪಿಎನಂತಹ ಕರಾಳ ಕಾಯ್ದೆಗಳು ಈ ದೇಶದಲ್ಲಿ ಜಾರಿಯಲ್ಲಿರುವವರೆಗೂ ನಕಲಿ ಎನ್‌ಕೌಂಟರ್‌ಗಳ ಪಟ್ಟಿ ಬೆಳೆಯುತ್ತಲೇ ಇರುತ್ತದೆ. ಜನರ ಆಸ್ತಿಪಾಸ್ತಿ, ಜೀವ ಹಾನಿ ಸಂಭವಿಸುತ್ತಲೇ ಇರುತ್ತದೆ. ಈ ದೇಶದ ಸಂವಿಧಾನ ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕನ್ನು ನೀಡಿದೆ. ಆ ಹಕ್ಕನ್ನು ಕಸಿದುಕೊಳ್ಳುವವರು ಯಾರೇ ಆಗಲಿ ಅವರಿಗೆ ಅವರಿಗೆ ಗಲ್ಲುಶಿಕ್ಷೆಯಾಗಲೇ ಬೇಕು. ಈ ದೇಶದಲ್ಲಿ ನಡೆದಿರುವ ಎಲ್ಲಾ ಎನ್‌ಕೌಂಟರ್‌ಗಳ ತನಿಖೆ ಅತಿ ಶೀಘ್ರವಾಗಿ ನಡೆಯಲಿ. ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾಗಲಿ. ಇರೋಮ್ ಶರ್ಮಿಳಾರಂತಹ ಉಪವಾಸ ಸತ್ಯಾಗ್ರಹಿಗಳ ಹೋರಾಟಕ್ಕೊಂದು ನಿಜವಾದ ಅರ್ಥ ದೊರೆಯಲಿ. ಎನ್‌ಕೌಂಟರ್ ಮುಕ್ತ ಭಾರತ ನಮ್ಮದಾಗಲಿ.

# ಮನೆಸೇರಿದ ನೆಲ್ಯಾಡಿ ಸುಲೈಮಾನ್

## ಫಲ ನೀಡಿದ ಐಎಫ್‌ಎಫ್ ಶ್ರಮ, ಸಂಭ್ರಮದಲ್ಲಿ ಕುಟುಂಬ

ತಾಯಿಫ್: ಕಳೆದ ಮೂರು ವರ್ಷದಿಂದ ಸೌದಿಅರೇಬಿಯದ ತಾಯಿಫ್ ಜೈಲಿನಲ್ಲಿ ಬಂಧಿಯಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಸಮೀಪದ ನೆಲ್ಯಾಡಿಯ ಸುಲೈಮಾನ್ ಬಿಡುಗಡೆಗೊಂಡು ಆಗಸ್ಟ್ 10ರಂದು ಮನೆಸೇರಿದರು. ಅವರ ಬಿಡುಗಡೆಗಾಗಿ ಕಳೆದ ಎರಡು ವರ್ಷಗಳಿಂದ ಕಾನೂನು ಹೋರಾಟ ನಡೆಸುತ್ತಿದ್ದ ಇಂಡಿಯ ಫ್ರೆಟರ್ನಿಟಿ ಫೋರಮ್‌ನ ಶ್ರಮಕ್ಕೆ ಫಲ ಸಿಗುವುದರೊಂದಿಗೆ ಸಂತ್ರಸ್ತ ಕುಟುಂಬವು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಆಗಸ್ಟ್ 9ರಂದು ರಾತ್ರಿ 1 ಗಂಟೆಗೆ ಜಿದ್ದಾ ವಿಮಾನ ನಿಲ್ದಾಣದಲ್ಲಿ ಇಂಡಿಯಾ ಫ್ರೆಟರ್ನಿಟಿ ಫೋರಮ್‌ನ ಕಾರ್ಯಕರ್ತರು ಸುಲೈಮಾನ್‌ರನ್ನು ಬೀಳ್ಕೊಟ್ಟರು.

ಮೂರು ವರ್ಷಗಳ ಹಿಂದೆ ಸೌದಿ ಅರೇಬಿಯಕ್ಕೆ ತೆರಳಿದ್ದ ಸುಲೈಮಾನ್ (53) ತಾಯಿಫ್‌ನಲ್ಲಿ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಅವರು ಚಲಾಯಿಸುತ್ತಿದ್ದ ಲಾರಿಯು ಕಾರೊಂದಕ್ಕೆ ಢಿಕಿ ಹೊಡೆದು 6 ಮಂದಿ ಸೌದಿ ಪ್ರಜೆಗಳು ಸಾವಿಗೀಡಾಗಿದ್ದರು. ಪ್ರಕರಣಕ್ಕೆ ಸಂಬಂಧಿಸಿ ಸುಲೈಮಾನ್‌ರನ್ನು ತಾಯಿಫ್ ಜೈಲಿನಲ್ಲಿ ಇಡಲಾಗಿತ್ತು.

ಅಪಘಾತದಲ್ಲಿ ಮೃತಪಟ್ಟವರಿಗೆ 6 ಲಕ್ಷ ಸೌದಿ ರಿಯಾಲ್ (ಭಾರತದ 75 ಲಕ್ಷ ರೂಪಾಯಿ) ಪರಿಹಾರವಾಗಿ ನೀಡಬೇಕೆಂದು ತಾಯಿಫ್‌ನ ಕೋರ್ಟ್ ತೀರ್ಪು ನೀಡಿತ್ತು. ಬಡವನಾದ ಸುಲೈಮಾನ್ ಇಷ್ಟೊಂದು ಮಟ್ಟದಲ್ಲಿ ಹಣವನ್ನು ಸೇರಿಸಲು ವಿಫಲರಾಗಿದ್ದರು ಮತ್ತು ಜೈಲಿನಲ್ಲೇ ಉಳಿಯಬೇಕಾಗಿ ಬಂದಿತ್ತು.

ನಿಸ್ಸಹಾಯಕ ಸುಲೈಮಾನ್‌ರಿಗೆ ಸಹಾಯ ಹಸ್ತವನ್ನು ಚಾಚಲು ಇಂಡಿಯಾ ಫ್ರೆಟರ್ನಿಟಿ ಫೋರಂ ನಿರ್ಧರಿಸಿತು. ಸುಲೈಮಾನ್ ಜೈಲಿನಲ್ಲಿರುವ ವೇಳೆ ಫೋರಮ್ ಭಾರತದಲ್ಲಿರುವ ಅವರ ಕುಟುಂಬಕ್ಕೆ ನೆರವಾಯಿತು. ಅದೇ ವೇಳೆ, ವಿಷಯವನ್ನು ಜಿದ್ದಾದಲ್ಲಿರುವ ಭಾರತದ ಪ್ರಧಾನ ರಾಯಭಾರಿ ಕಚೇರಿಯ ಮುಂದೆ ತಂದಿತು. ಎಲ್ಲಾ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ವಿಮಾ ಕಂಪೆನಿಯು ಪರಿಹಾರ ನೀಡುವುದನ್ನು ತ್ವರೆ ಮಾಡುವಂತೆ ಮಾಡಿತು.

ಆಗಸ್ಟ್ 10ರಂದು ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದ ಸುಲೈಮಾನ್‌ರನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಾರ್ಯಕರ್ತರು ಹೂಗುಚ್ಛ ನೀಡಿ ಸ್ವಾಗತಿಸಿದರು. ಸುಲೈಮಾನ್ ಅವರು ಜೈಲಿನಲ್ಲಿದ್ದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಪಾಪ್ಯುಲರ್



ಸುಲೈಮಾನ್ ನೆಲ್ಯಾಡಿ ಬಜಪೆ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಫ್ರಂಟ್ ಆಫ್ ಇಂಡಿಯಾದ ವತಿಯಿಂದ ನೆರವು ನೀಡಲಾಗಿತ್ತು. ಸುಲೈಮಾನ್ ಅವರನ್ನು ಮಂಗಳೂರಿನಿಂದ ನೆಲ್ಯಾಡಿಯ ಮನೆಗೆ ತಲುಪಿಸುವ ಜವಾಬ್ಧಾರಿಯನ್ನು ಪಾಪ್ಯುಲರ್ ಫ್ರಂಟ್‌ನ ಕಾರ್ಯಕರ್ತರು ವಹಿಸಿಕೊಂಡರು.

ಈ ಸಂದರ್ಭದಲ್ಲಿ ಸುಲೈಮಾನ್ ಅವರು ಸ್ಥಳೀಯ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಹಾಗೂ ವಿದೇಶದಲ್ಲಿ ನೆರವಾದ ಇಂಡಿಯಾ ಫ್ರೆಟರ್ನಿಟಿ ಫೋರಮ್‌ಗೆ ಕೃತಜ್ಞತೆಯನ್ನು ಸಲ್ಲಿಸಿದರು.

### ಜಿದ್ದಾ: ಐಎಫ್‌ಎಫ್‌ನಿಂದ ಇಫ್ತಾರ್ ಕೂಟ

ಜಿದ್ದಾ: ಇಂಡಿಯಾ ಫ್ರೆಟರ್ನಿಟಿ ಫಾರಂ, ಜಿದ್ದಾದ ಕರ್ನಾಟಕ ಘಟಕದ ವತಿಯಿಂದ ಇತ್ತೀಚೆಗೆ ಜಿದ್ದಾದ ಶರಫಿಯ್ಯಾದ ಇಂಫಾಲ ಕೌಂಪೌಂಡ್‌ನಲ್ಲಿ ಇಫ್ತಾರ್ ಕಾರ್ಯಕ್ರಮ ನಡೆಯಿತು.

ಐಎಫ್‌ಎಫ್ ಜಿದ್ದಾದ ಸಂಯೋಜಕ ಅಬ್ದುಲ್ ಘಾನಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಮೊಯ್ದೀನ್ ಹಳೆಯಂಗಡಿ, ಅಧ್ಯಕ್ಷರು, ಐಎಫ್‌ಎಫ್, ಜಿದ್ದಾ, ಕರ್ನಾಟಕ ಘಟಕ, ಸಯ್ಯದ್ ಮುಹಮ್ಮದ್, ಝೋನಲ್ ಅಧ್ಯಕ್ಷರು, ದಕ್ಷಿಣ ಕನ್ನಡ ಸುನ್ನಿ ಸೆಂಟರ್, ಹಬೀಬ್ ರಹ್ಮಾನ್, ಅಧ್ಯಕ್ಷರು, ಜಮಿಯ್ಯತುಲ್ ಫಲಾಹ್, ಮನ್ಸೂರ್, ಅಧ್ಯಕ್ಷರು, ಕರ್ನಾಟಕ ಎನ್‌ಆರ್‌ಐ ಫೋರಮ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಲ್ ಅಶ್ರಫ್ ರಮ್ಝಾನ್‌ನ ಮಹತ್ವದ ಬಗ್ಗೆ ಮಾತನಾಡಿದರು.

## ■ ‘ಫ್ರೀಡಂ ಪರೇಡ್’ ನಿಷೇಧ ಪೊಲೀಸರು ಮತ್ತು ಆಡಳಿತದ ಕೋಮು ಪಕ್ಷಪಾತಕ್ಕೆ ಹಿಡಿದ ಕನ್ನಡಿ: ಪಾಪ್ಯುಲರ್ ಫ್ರಂಟ್

ಕೇರಳ: ಸ್ವಾತಂತ್ರ್ಯೋತ್ಸವದಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಕಾರ್ಯಕ್ರಮಗಳನ್ನು ನಡೆಸುವುದನ್ನು ತಡೆಯುವ ಅಪ್ರಜಾಸತ್ತಾತ್ಮಕ ಮತ್ತು ಕೋಮುವಾದಿ ಪೂರ್ವಗ್ರಹ ಪೀಡಿತ ಕ್ರಮವು ಕರ್ನಾಟಕ, ಕೇರಳ ಮತ್ತು ತಮಿಳುನಾಡಿನ ಆಡಳಿತ ಮತ್ತು ಪೊಲೀಸರ ಅಂತಾರಾಜ್ಯ ಮಟ್ಟದ ಷಡ್ಯಂತ್ರವಾಗಿದೆ ಎಂದು ಕಲ್ಲಿಕೋಟೆಯಲ್ಲಿ ನಡೆದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕೇಂದ್ರ ಸೆಕ್ರೇಟರಿಯೇಟ್ ಸಭೆಯು ಹೇಳಿದೆ.



ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಈ ಹಿಂದೆ ನಡೆಸಿದ ಫ್ರೀಡಂ ಪರೇಡ್‌ನ ಒಂದು ಆಕರ್ಷಕ ದೃಶ್ಯ.

ಈ ರಾಜ್ಯಗಳಲ್ಲಿ ಕೇವಲ ಫ್ರೀಡಂ ಪರೇಡನ್ನು ಮಾತ್ರವಲ್ಲ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಯಾವುದೇ ಕಾರ್ಯಕ್ರಮಗಳನ್ನು ನಡೆಸುವುದನ್ನು ನಿಷೇಧಿಸಲಾಗಿತ್ತು. ಇದನ್ನು ಕೋಮುಪಕ್ಷಪಾತದ ಸಂಕೇತವೆಂದಷ್ಟೇ ಕರೆಯಬಹುದಾಗಿದೆ ಮತ್ತು ಈ ಮೂರು ರಾಜ್ಯಗಳಲ್ಲಿ ಆಡಳಿತ ಮತ್ತು ಪೊಲೀಸ್ ಇಲಾಖೆಯಲ್ಲಿ ಕೋಮು ಪಕ್ಷಪಾತವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೇರಳ ಮತ್ತು ತಮಿಳುನಾಡಿನ ಜಾತ್ಯತೀತವೆಂದು ಕರೆದುಕೊಳ್ಳುವ ಸರಕಾರಗಳೂ ಕೂಡ ಮುಸ್ಲಿಮರಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನೀಡುವ ವಿಷಯದಲ್ಲಿ ಹಿಂದುತ್ವವಾದಿ ಬಿಜೆಪಿ ಸರಕಾರಗಳಿಗಿಂತ ಭಿನ್ನವಾಗಿಲ್ಲ ಎಂಬ ವಾಸ್ತವಕ್ಕೆ ಇದು ನಿದರ್ಶನವಾಗಿದೆ.

ಪಾಪ್ಯುಲರ್ ಫ್ರಂಟ್ ಹಾಗೂ ಹಿಂದಿನ ಎನ್‌ಡಿಎಫ್ 2004ರಿಂದೀಚೆಗೆ ಸ್ವಾತಂತ್ರ್ಯ ದಿನಾಚರಣೆಯಂದು ದೇಶಪ್ರೇಮದ ಪ್ರತಿಬಿಂಬವಾದ ಫ್ರೀಡಂ ಪರೇಡ್ ಕಾರ್ಯಕ್ರಮವನ್ನು ಕೇರಳದಲ್ಲಿ ನಡೆಸುತ್ತಾ ಬಂದಿದೆ. ಕಳೆದ ವರ್ಷ ಮಾತ್ರ ತನ್ನ ಕ್ಷುಲ್ಲಕ ರಾಜಕೀಯ ಕುಲವೈರದ ಭಾಗವಾಗಿ ಸಿಪಿಐ (ಎಂ) ಇದನ್ನು ನಿಷೇಧಿಸಿತ್ತು. ರಾಷ್ಟ್ರೀಯ ಧ್ವಜವನ್ನು ಮುಂಚೂಣಿಯಲ್ಲಿ ಹಿಡಿದುಕೊಂಡು ನಡೆಸಲಾಗವ ಸಮವಸ್ತ್ರಧಾರಿ ಕಾರ್ಯಕರ್ತರ ಪರೇಡ್ ಕಾರ್ಯಕ್ರಮವು ನಂತರ 2008ರಲ್ಲಿ ಕರ್ನಾಟಕ ಮತ್ತು ತಮಿಳುನಾಡಿಗೂ ವಿಸ್ತರಿಸಲಾಗಿತ್ತು. ಸಾಮಾನ್ಯ ಜನರು ಕಚೇರಿಗಳಲ್ಲಿ ನಡೆಸಲು ಸೀಮಿತವಾಗಿದ್ದ ಸ್ವಾತಂತ್ರ್ಯ ದಿನಾಚರಣೆಯನ್ನು ಈ ಕಾರ್ಯಕ್ರಮಗಳು ಮೀರಿಸಿದ್ದವು. ದೇಶಪ್ರೇಮ ಮತ್ತು ನಾಗರಿಕ ಪ್ರಜ್ಞೆಯನ್ನು ಬಲಪಡಿಸುವುದಕ್ಕಾಗಿ ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯದ ಸದಸ್ಯರ ಸಕಾರಾತ್ಮಕ ಹೆಜ್ಜೆಗಳೆಂದು ಇದು ದೇಶದ ವಿವಿಧ ಭಾಗಗಳಲ್ಲಿ ಶ್ಲಾಘನೆಗೊಳಪಟ್ಟಿತ್ತು. ಪೊಲೀಸ್ ಇಲಾಖೆ ಹಾಗೂ ಮಾಧ್ಯಮದ ಒಂದು ವರ್ಗವು ಉದ್ದೇಶಪೂರಿತವಾಗಿ ಭಯವನ್ನು ಸೃಷಿಸಿರುವ ಹೊರತಾಗಿಯೂ ಕಾನೂನು-ಸುವ್ಯವಸ್ಥೆಗೆ ಭಂಗವಾಗುವ ಯಾವುದೇ ಸಣ್ಣ ಘಟನೆಯೂ ಕೂಡ ಪಾಪ್ಯುಲರ್ ಫ್ರಂಟ್ ಈ ಕಾರ್ಯಕ್ರಮಗಳನ್ನು ನಡೆಸುವಾಗ ವರದಿಯಾಗಿಲ್ಲ.

ಈ ಬಾರಿ ಸ್ವಾತಂತ್ರ್ಯೋತ್ಸವ ದಿನದಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗೆ ಸಾರ್ವಜನಿಕ ಸಭೆಯನ್ನು ನಡೆಸಲೂ ಅನುಮತಿಯನ್ನು ನಿರಾಕರಿಸಲಾಯಿತು. ಅದೇ ವೇಳೆ, ಹಲವು ರಾಜಕೀಯ ಹಾಗೂ ರಾಜಕೀಯೇತರ ಸಂಘಟನೆಗಳು ತಮ್ಮ ಆಯ್ಕೆಯ ಕಾರ್ಯಕ್ರಮಗಳನ್ನು ನಡೆಸಲು ಅನುಮತಿಸಲಾಯಿತು. ಕೇರಳದಲ್ಲಿ ಸಂಘಟನೆಯು ಆಡಳಿತಾತ್ಮಕ ಸೂಚನೆಗಳ ಸವಾಲನ್ನು ಎದುರಿಸಿ ತನ್ನ ಮೂಲಭೂತ ಹಕ್ಕಿಗಾಗಿ ಪ್ರಕರಣವನ್ನು ಹೈಕೋರ್ಟ್‌ನ ಮುಂದಿಟ್ಟಿತ್ತಾದರೂ ಕೋರ್ಟು ಇದರಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿರುವುದು ದುರದೃಷ್ಟವಾಗಿದೆ.

ಈ ಪ್ರಜಾಸತ್ತಾತ್ಮಕ ರಾಷ್ಟ್ರದ ಪ್ರಜೆಗಳಾಗಿ ಸ್ವಾತಂತ್ರ್ಯವನ್ನು ಆಚರಿಸುವ ತಮ್ಮ ಹಕ್ಕಿಗೆ ಚ್ಯುತಿ ಬಂದಿರುವಾಗ ರಾಷ್ಟ್ರಾದ್ಯಂತವಿರುವ ತಮ್ಮ ಕಾರ್ಯಕರ್ತರು ಇದಕ್ಕೆ ಮಣಿಯಲಾರರು ಎಂಬುದನ್ನು ಪಾಪ್ಯುಲರ್ ಫ್ರಂಟ್‌ನ ಕೇಂದ್ರ ಸೆಕ್ರೇಟರಿಯೇಟ್ ಒತ್ತಿಹೇಳಿದೆ. ಸಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ಮೂಲಭೂತ ಹಕ್ಕುಗಳು ದೊರೆಯುವವರೆಗೆ ಪ್ರಜಾಸತ್ತಾತ್ಮಕ ಹಾಗೂ ಕಾನೂನು ಹೋರಾಟವನ್ನು ಮುಂದುವರಿಸಲು ಸಭೆಯು ನಿರ್ಧರಿಸಿದೆ.

ಅಧ್ಯಕ್ಷ ಇ.ಎಂ.ಅಬ್ದುರ್ರಹ್ಮಾನ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್, ಮುಹಮ್ಮದ್ ಅಲಿ ಜಿನ್ನಾ, ಒ.ಎಂ.ಎ. ಸಲಾಮ್, ಹಮೀದ್ ಮುಹಮ್ಮದ್ ಚರ್ಚೆಯಲ್ಲಿ ಭಾಗವಹಿಸಿದ್ದರು.